
# ಅಬ್ದುಲ್ಲಸಾಬ ಅಣ್ಣಿಗೇರಿ

ಬಸವರಾಜ ಬೆಂಗೇರಿ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು

# ಅಬ್ದುಲ್ಲಸಾಬ ಅಣ್ಣಿಗೇರಿ

## ಬಸವರಾಜ ಬೆಂಗೇರಿ


**ಕರ್ನಾಟಕ ನಾಟಕ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ದೂರವಾಣಿ: ೦೮೦- ೨೨೨೩ ೭೪೮೪

**ABDULLASABA ANNIGERI :** A Monograph in Kannada by Mr. Basavaraj Bengeri, Shirur.

**Published by :** Registrar, Karnataka Nataka Academy, Bangalore -2, Ph. 080-2223 7484

ಹಕ್ಕುಗಳು : ಲೇಖಕರದು<br>
**ಮೊದಲ ಮುದ್ರಣ : ೨೦೧೬**<br>
ಪ್ರತಿಗಳು : ೧,೦೦೦<br>
ಪುಟಗಳು : ೮೦

**ಬೆಲೆ : ರೂ.೬೦/-**

ಪ್ರಕಾಶಕರು:<br>
ಸಿದ್ಧರಾಜು, ರಿಜಿಸ್ಟ್ರಾರ್<br>
ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ<br>
ಬೆಂಗಳೂರು – ೫೬೦೦೦೨

**ಮುಖಪುಟ ವಿನ್ಯಾಸ:** ಕೃಷ್ಣ ರಾಯಚೂರು

**ಮುದ್ರಣ:** ಚಾರುಮತಿ ಪ್ರಕಾಶನ<br>
ಚಾಮರಾಜಪೇಟೆ, ಬೆಂಗಳೂರು–18

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

–ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ. ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ. ತಿಪ್ಪೇಸ್ವಾಮಿ, ವಿ.ಎನ್. ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ, ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

'ರಂಗಸಂಪನ್ನರು' ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

## ರಾಮನಾಗಿ ರಂಗವಾಳಿದ ಅಬ್ದುಲ್‌ಸಾಬರು

ರಾಮ, ಕೃಷ್ಣ, ದುರ್ಯೋಧನ, ಮಲ್ಲಿಕಾರ್ಜುನ, ಟಿಪ್ಪುಸುಲ್ತಾನ, ಯಡೆಯೂರು ಸಿದ್ಧಲಿಂಗೇಶ್ವರ ಮುಂತಾದ ಪಾತ್ರಗಳಿಗೆ ದಂತಕತೆಯಾದ ಅಬ್ದುಲ್‌ಸಾಬ್ ಅಣ್ಣಿಗೇರಿಯವರು ಕನ್ನಡ ವೃತ್ತಿರಂಗಭೂಮಿಯ ಮೇರು ನಟರಲ್ಲಿ ಒಬ್ಬರು. ತೆಲುಗು ಚಿತ್ರನಟ ಎನ್‌ಟಿಆರ್ ಹೋಲಿಕೆ ಇದ್ದ ಇವರು, ಗುಬ್ಬಿ ವೀರಣ್ಣನವರ ಪ್ರೀತಿಪಾತ್ರ ನಟರು.

ನಾಟಕಕಾರ, ನಟ, ಸಂಘಟಕ ಬಸವರಾಜ ಬೆಂಗೇರಿ ಅವರು ಅಬ್ದುಲ್‌ಸಾಬ್ ಅವರನ್ನು ಹತ್ತಿರದಿಂದ ಬಲ್ಲವರು. ಸಾಂದ್ರವಾಗಿ ಆ ಕಾಲದ ರಂಗಚರಿತ್ರೆಯನ್ನು ಹಾಗೂ ಅಬ್ದುಲ್‌ಸಾಬ್ ಅವರ ನಟನೆಯ ಆಳ ಅಗಲಗಳನ್ನು ಆದ್ಯಂತವಾಗಿ ಸರಳವಾಗಿ ಪರಿಚಯಿಸಿದ್ದಾರೆ.

–ಗುಡಿಹಳ್ಳಿ ನಾಗರಾಜ

ಪ್ರಕಟನಾ ಸಮಿತಿ: ಉಮೇಶ ಸಾಲಿಯಾನ
ಶಿವಶಂಕರ ಹಾಲ್ಕುರಿಕೆ
ಜಗುಚಂದ್ರ ಕೆ.

**ಎಲ್.ಬಿ. ಶೇಖ (ಮಾಸ್ತರ)**

ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

**ಸದಸ್ಯರು:**

| | |
|---|---|
| ರಾಜಪ್ಪ ಕಿರಗಸೂರು | ವಿ.ಎನ್. ಅಕ್ಕಿ |
| ಎನ್.ಕೆ. ರಾಮಕೃಷ್ಣ | ಕಲ್ಪನಾ ನಾಗನಾಥ್ |
| ಎಂ.ಎಸ್. ಗುಣಶೀಲನ್ | ಶ್ರೀಪಾದ ಭಟ್ |
| ಎ.ವರಲಕ್ಷ್ಮಿ | ಪಿ. ತಿಪ್ಪೇಸ್ವಾಮಿ |
| ಗುಡಿಹಳ್ಳಿ ನಾಗರಾಜ | ಎಲ್.ಎಚ್. ರಂಗನಾಥಪ್ಪ |
| ಬಿ.ಎಂ. ರಾಮಚಂದ್ರ | ಹಾಲ್ಕುರಿಕೆ ಶಿವಶಂಕರ್ |
| ಉಮೇಶ್ ಸಾಲಿಯಾನ್ | ಕೆ. ಜಗುಚಂದ್ರ |
| ಮುದ್ದಣ್ಣ ರಟ್ಟೆಹಳ್ಳಿ | ಅನ್ನಪೂರ್ಣ ಸಾಗರ |
| ಎಚ್. ಷಡಾಕ್ಷರಪ್ಪ ಹೊಸಮನಿ | ಎಸ್.ಕೆ. ಕೊನೆಸಾಗರ |

ರಿಜಿಸ್ಟ್ರಾರ್: ಸಿದ್ಧರಾಜು
**ಪ್ರಥಮದರ್ಜೆ ಸಹಾಯಕರು:** ಕೆ.ರೇವಣ್ಣ
**ಕಚೇರಿ ಸಿಬ್ಬಂದಿ:** ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ಲೇಖಕರ ನುಡಿ

ಅಬ್ದುಲ್ಲಸಾಬ ಅಣ್ಣಿಗೇರಿ ಇವರು ನಮ್ಮ ವೃತ್ತಿರಂಗಭೂಮಿಯ ವೈಭವದ ಕಾಲ ಹಾಗೂ ಅವನತಿಯ ಕಾಲಘಟ್ಟದ ಮಧ್ಯದ ಕೊಂಡಿಯಂತಿದ್ದವರು. ಎರಡೂ ಕಾಲಘಟ್ಟದಲ್ಲಿಯೂ ತಮ್ಮ ಸಮರ್ಥ ಕಲಾಸೇವೆ ಸಲ್ಲಿಸಿ ಜನಾನುರಾಗಿಯಾದವರು. ಕನ್ನಡ ರಂಗಭೂಮಿಯ ಉನ್ನತಿಗಾಗಿ ತಾವು ನೋವುಂಡು ಕಲಾಪ್ರೇಮಿಗಳಿಗೆ ನಲಿವು ನೀಡಿದವರು. ಕನ್ನಡ ರಂಗಭೂಮಿ ಕಂಡ ಖ್ಯಾತನಾಮರಾದ ಯಲಿವಾಳ ಸಿದ್ಧಯ್ಯಸ್ವಾಮಿ, ಮೃಡದೇವ ಗವಾಯಿಗಳು, ದೊಡ್ಡವಾಡ ಸಿದ್ದಯ್ಯನವರು, ಡಿ. ದುರ್ಗಾದಾಸರು. ಗುಬ್ಬಿ ವೀರಣ್ಣನವರಂತಹ ಸಮರ್ಥರ ಗರಡಿಯಲ್ಲಿ ಪಳಗಿ ಕನ್ನಡ, ಹಿಂದಿ ಚಿತ್ರರಂಗದಲ್ಲಿಯೂ ತಮ್ಮ ಹೆಜ್ಜೆಗುರುತು ಮೂಡಿಸಿ ೨೦೦೪ ರಿಂದ ವಿಶ್ವಭಾರತಿ ರಮ್ಯ ನಾಟಕ ಸಂಘ ಶಿರೂರ ರಂಗತಂಡದಲ್ಲಿ ಕರ್ನಾಟಕ ಮಾತ್ರವಲ್ಲದೆ, ನೆರೆಯ ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿಯೂ ಸಹ ರಂಗಸೇವೆ ಸಲ್ಲಿಸುವದರೊಂದಿಗೆ ೧೯೫೪ ರಿಂದ ೨೦೧೨ ರ ವರೆಗೆ ಸುದೀರ್ಘ ೫೮ ವರ್ಷಗಳ ಕಾಲ ಕನ್ನಡ ರಂಗಭೂಮಿಗೆ ಉಸಿರು ತುಂಬಿದವರು.

ಇಂತಹ ಧೀಮಂತ ಕಲಾವಿದರ ಕುರಿತು "ರಂಗಸಂಪನ್ನರು" ಶೀರ್ಷಿಕೆಯಡಿಯಲ್ಲಿ ಪುಸ್ತಕ ಬರೆಯಲು ಕರ್ನಾಟಕ ನಾಟಕ ಅಕಾಡೆಮಿಯವರು ಸೂಚಿಸಿದಾಗ ನಾನು ತುಂಬಾ ಸಂತಸದಿಂದ ಒಪ್ಪಿಕೊಂಡೆ. ಅಬ್ದುಲ್ಲಸಾಬ ಅಣ್ಣಿಗೇರಿ ಹಾಗೂ ಇವರ ರಂಗಸಂಗಾತಿ ಪುಷ್ಪಮಾಲಾ ಅಣ್ಣಿಗೇರಿ ರಂಗದಂಪತಿಗಳ ಕುರಿತಾಗಿ ಒಂದು ಪುಸ್ತಕ ಬರೆಯಬೇಕೆಂದು ಹಿಂದಿನಿಂದಲೂ ನನಗೆ ಅಪೇಕ್ಷೆ ಇತ್ತು. ಏಕೆಂದರೆ ಈ ರಂಗದಂಪತಿಗಳು ಎಲ್ಲ ರಂಗಕುಟುಂಬಗಳಿಗೂ ಒಂದು ಮಾದರಿ ದಾಂಪತ್ಯ. ಇವರ ಕುರಿತು ಬರೆಯುವ ಅವಕಾಶ ಕಲ್ಪಿಸಿದ ಕರ್ನಾಟಕ ನಾಟಕ ಅಕಾಡೆಮಿಯ ಇಂದಿನ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ ಮಾಸ್ತರರವರಿಗೂ, ರಿಜಿಸ್ಟ್ರಾರ್ ಶ್ರೀ ಸಿದ್ಧರಾಜುರವರಿಗೆ ಹಾಗೂ ಅಬ್ದುಲ್ಲಸಾಬರ ಕುರಿತು ಪುಸ್ತಕ ಬರೆಯಲು ಮೇಲಿಂದ ಮೇಲೆ ಒತ್ತಾಯ

ಮಾಡಿ ಈ ಕಿರು ಪುಸ್ತಕ ಸಿದ್ದಗೊಳ್ಳಲು ಕಾರಣರಾದ ಅಕಾಡೆಮಿಯ ಹಿರಿಯ ಸದಸ್ಯರು ಲೇಖಕರು ಆದ ಶ್ರೀ ಗುಡಿಹಳ್ಳಿ ನಾಗರಾಜ ಅವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಬ್ದುಲ್ಲಸಾಬರು ಓರ್ವ ಪರಿಪೂರ್ಣ ರಂಗಕಲಾವಿದರು. ರಂಗಜ್ಞಾನದ ಜೊತೆಗೆ ಸಾಹಿತ್ಯಜ್ಞಾನ, ಸಂಗೀತಜ್ಞಾನಗಳೆರಡನ್ನೂ ಅವಾಹಿಸಿಕೊಂಡವರು. ಕನ್ನಡ ರಂಗಭೂಮಿ ಎಂಬ ಬೃಹತ್ ಸಾಗರದಲ್ಲಿ ಒಂದು ಭೋರ್ಗರೆದ ತೆರೆ. ಆದರೆ ಆ ತೆರೆ ತೀರದಲ್ಲಿದ್ದವರಲ್ಲಿಗೆ ಭಾರಿ ರೋಮಾಂಚನವನ್ನುಂಟು ಮಾಡಿದ್ದು ಮರೆಯಲಾಗದ ಮಹತ್ ಸಾಧನೆ. ಆ ಸಾಧನೆಯ ಕುರಿತು ನೀವೀಗ ಓದಲು ಪ್ರಾರಂಭಿಸಿದ್ದೀರಿ. ಆದ್ದರಿಂದ ಅದಿಲ್ಲಿ ಅಪ್ರಸ್ತುತ.

ಈ ಪುಸ್ತಕ ಬರೆಯುವಾಗ ಈ ಅಬ್ದುಲ್ಲಸಾಬರ ಅಜ್ಜ ಅಣ್ಣಿಗೇರಿ ಹುಸೇನ ಸಾಬರು ಪ್ರಕಟಿಸಿದ ನಲವಡಿ ಶ್ರೀಕಂಠಶಾಸ್ತ್ರಿಗಳು ರಚಿಸಿದ "ಮಹಾರಾಣಿ ಕಿತ್ತೂರ ಚನ್ನಮ್ಮ" ನಾಟಕ ಪುಸ್ತಕ ಅಂದಿನ ಬ್ರಿಟಿಷ್ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿ ಬಹಿಷ್ಕೃತಗೊಂಡು ಲಂಡನ್ ಲೈಬ್ರರಿಯಲ್ಲಿ ಹಿರಿಯ ಸಂಶೋಧಕರಾದ ನಾಡೋಜ ಡಾ॥ ಕಲಬುರ್ಗಿಯವರ ಕಣ್ಣಿಗೆ ಬೀಳುತ್ತದೆ. ಅದನ್ನವರು ಸಂಗ್ರಹಿಸಿ ತಮ್ಮ "ಮಾರ್ಗ" ಸಂಪುಟ ೩. ರಲ್ಲಿ ೮೫ನೇ ಲೇಖನವಾಗಿ ಪ್ರಕಟಿಸಿದ್ದು ಅದನ್ನು ಅವರ ಗಮನಕ್ಕೆ ತಂದೊಡನೆ ಕೂಡಲೇ ಮಾರ್ಗ ಸಂಪುಟವನ್ನು ಹುಡುಕಿ ತಂದು ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಿ ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಬ್ದುಲ್ಲಸಾಬ ಅಣ್ಣಿಗೇರಿಯವರೊಂದಿಗೆ ಆಂಧ್ರ ಮಹಾರಾಷ್ಟ್ರದ ದೂರದ ಊರುಗಳಿಗೆ ರಂಗಯಾತ್ರೆ ಕೈಗೊಂಡಾಗ ರೈಲು, ಬಸ್ಸುಗಳಲ್ಲಿ ಅವರ ರಂಗಾನುಭವವನ್ನು ಕೇಳುವ ಅವಕಾಶ ದೊರೆಯುತ್ತಿತ್ತು. ಅದು ಈಗ ಈ ಕಿರು ಪುಸ್ತಕ ಬರೆಯುವಲ್ಲಿ ತುಂಬಾ ಸಹಕಾರಿಯಾಯಿತು. ಅಲ್ಲದೆ ಪ್ರಾರಂಭದಲ್ಲಿ ಅವರೊಂದಿಗೆ ರಂಗಸೇವೆಯಲಿದ್ದ ಅವರ ಕಿರಿಯ ಸೋದರ ಮಹಮ್ಮದಲಿ ಎಮ್. ಢಾಲಾಯತ ಅವರು ಈ ಪುಸ್ತಕ ಬರೆಯುವಾಗ ಕರೆದಾಗ ಬಂದು ಅಬ್ದುಲ್ಲಸಾಬರ ರಂಗ ಬದುಕಿನ ವೃತ್ತಾಂತಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದರು. ಇವರೂ ಕೂಡಾ ಶ್ರೇಷ್ಠ ನಾಟಕಕಾರರು, ಪತ್ರಕರ್ತರು, ವೃತ್ತಿ ರಂಗಭೂಮಿಯ ಎಲ್ಲ ವಿದ್ಯಮಾನಗಳನ್ನೂ ಬಲ್ಲವರು. ಇವರಲ್ಲಿ ಸಂಗ್ರಹವಿದ್ದ ರಂಗಭೂಮಿ ಕುರಿತ ಎಲ್ಲ ವಿಷಯಗಳನ್ನೂ ಗ್ರಂಥಸ್ಥಗೊಳಿಸಿದರೆ, ಅದೇ ಒಂದು ಬೃಹತ್ ಗ್ರಂಥವಾಗಬಹುದು. ಇಂತಹವರು ಈ ಕಿರುಪುಸ್ತಕ ಬರೆಯುವಾಗ ತುಂಬಾ ಸಹಕಾರ ನೀಡಿದ್ದರಿಂದ ಅವರಿಗೂ ನನ್ನ ಅನಂತಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಬ್ದುಲ್ಲಸಾಬರ ಕುರಿತು. ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ತಿಳಿಯಪಡಿಸಿದ ವೃತ್ತಿರಂಗಭೂಮಿಯ

ವೈಭವದ ದಿನಗಳನ್ನು ಕಂಡು ಆ ಸಂಪತ್ತನ್ನೆಲ್ಲಾ ತಮ್ಮ ಖಾಸಗಿ ಸಂಗ್ರಹದಲ್ಲಿ ಜೋಪಾನ ಮಾಡಿಕೊಂಡು ಮುಂದಿನ ತಲೆಮಾರಿನವರೆಗೆ ಉಳಿಸಿಕೊಟ್ಟಿರುವ ಹಿರಿಯ ರಂಗಕರ್ಮಿ ಶ್ರೀ ವಸಂತ ಕುಲಕರ್ಣಿಯವರಿಗೂ, ಹಿರಿಯ ಕಲಾವಿದರು, ಚಿತ್ರ ನಿರ್ದೇಶಕರಾದ ಚಿಂದೋಡಿ ಬಂಗಾರೇಶ, ಧಾರವಾಡ ರಂಗಾಯಣದ ಮಾಜಿ ನಿರ್ದೇಶಕರಾದ ಶ್ರೀ ಸುಭಾಸ ನರೇಂದ್ರವರಿಗೂ, ಹಿರಿಯ ನಟರಾದ ದೊಡ್ಡವಾಡ ಶಿವಪುತ್ರಯ್ಯ, ಕೊಂಡಯ್ಯ ಮೈಸೂರ, ಕುಬೇರಪ್ಪ ಈಳಗೇರ, ರೇವಣಸಿದ್ಧಯ್ಯ ಹೊಸೂರಮಠ, ಪುಷ್ಪಮಾಲ ಅಣ್ಣಿಗೇರಿ, ಪರಿಮಳಾ ಕಲಾವಂತ ಕಲಾಭಿಮಾನಿಗಳಾದ ರವೀಂದ್ರನಾಥ ದೊಡ್ಡಮೇಟಿ, ಜಕ್ಕಲಿ, ಎ.ವ್ಹಿ. ಪಾಟೀಲ, ಮಾಳವಾಡ ಮುಂತಾದವರು ಅಬ್ದುಲ್ಲಸಾಬರ ಕುರಿತು ತಾವು ಕಂಡುಂಡ ನೆನಪುಗಳನ್ನು ನನ್ನೆದುರು ಮೆಲಕು ಹಾಕಿ ಈ ಪುಸ್ತಕದ ತೂಕ ಹೆಚ್ಚಿಸಿದ್ದಾರೆ. ಅವರಿಗೂ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಹಕರಿಸಿದ ಶ್ರೀಕಾಂತ ಚಕ್ರಸಾಲಿ ಅವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

– ಬಸವರಾಜ ಬೆಂಗೇರಿ, ಶಿರೂರ

# ಪರಿವಿಡಿ


| | |
|---|---|
| ಅಬ್ದುಲ್ಲಸಾಬ ಅಣ್ಣಿಗೇರಿ | ೧೧ |
| ಹಿನ್ನೆಲೆ | ೧೩ |
| ಖಿದಾಬಂದ ನಾಟಕ ಥೇಟರ್ | ೧೭ |
| ಸಮಾಜವಿಕಾಸ ನಾಟ್ಯಸಂಘ, ದೊಡ್ಡವಾಡ | ೨೧ |
| ನೊಂದ ಬೆಂದ ಹಿರೇಮಠ | ೨೩ |
| ಮೃಡದೇವ ಗವಾಯಿಗಳ ಅಮರೇಶ್ವರ ನಾಟ್ಯಸಂಘ | ೨೬ |
| ಪುಷ್ಪಮಾಲಾ ಅಣ್ಣಿಗೇರಿ | ೩೬ |
| ಅಬ್ದುಲ್ಲಸಾಬ ಅಣ್ಣಿಗೇರಿ – ಅರವಿಂದ | ೪೦ |
| ಗುಬ್ಬಿ ಕಂಪನಿ ಪ್ರವೇಶ | ೪೮ |
| ಗ್ರಾಮೀಣ ರಂಗ ಕಲಾವಿದೆ | ೫೫ |
| ವೃತ್ತಿರಂಗದಿಂದ ಹವ್ಯಾಸಿ ರಂಗಭೂಮಿಯತ್ತ | ೫೭ |
| ಸಂಧ್ಯಾಕಾಲ | ೬೬ |
| ಅನುಬಂಧ | ೬೭ |
| ಚಿತ್ರಗಳು | ೭೧ |

# ಅಬ್ದುಲ್ಲಸಾಬ ಅಣ್ಣಿಗೇರಿ

ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿಯಾಗಿ ಹಲವಾರು ಕಲಾಪ್ರಕಾರಗಳು ಪ್ರಾಚೀನ ಕಾಲದಿಂದಲೂ ಮೈತಳೆದು ನಿಂತಿವೆ. ಸಾಹಿತ್ಯ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ರಂಗಭೂಮಿ ಮುಂತಾದ ಹಲವಾರು ಕಲಾ ಪರಂಪರೆಗೆ ಜನ್ಮ ನೀಡಿದ ಶ್ರೇಯಸ್ಸು ನಮ್ಮ ನಾಡಿನದು.

ರಂಗಭೂಮಿ, ಅದರಲ್ಲಿಯೂ ವೃತ್ತಿರಂಗಭೂಮಿ ಕನ್ನಡದ ಸಾಂಸ್ಕೃತಿಕ ವೈಭವಕ್ಕೆ ನೀಡಿದ ಕೊಡುಗೆ ಅಪಾರ. ಕರ್ನಾಟಕದ ಪ್ರ ಪ್ರಥಮ ವೃತ್ತಿಸ್ವರೂಪದ ರಂಗಸೇವೆಯನ್ನು ಪ್ರಾರಂಭಿಸಿದ ಕೀರ್ತಿ ಬೆಳಗಾವಿಜಿಲ್ಲೆ ಹಲಸಗಿ ನಾಟಕಸಂಘಕ್ಕೆ ಸಲ್ಲುತ್ತದೆ. ನಂತರ ಮರಾಠಿ ರಂಗಭೂಮಿಯಿಂದ ಸ್ಫೂರ್ತಿಗೊಂಡ ಗದುಗಿನ ಶಾಂತಕವಿಗಳು (ಸಕ್ಕರೆ ಬಾಳಾಚಾರ್ಯ) ಕೃತಪುರ ನಾಟಕಮಂಡಳಿ ಸ್ಥಾಪಿಸುವ ಮೂಲಕ ಪೂರ್ಣಪ್ರಮಾಣದ ನಾಟಕಕಂಪನಿಯನ್ನು ಕಟ್ಟಿದ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. (ಮರಾಠಿ ರಂಗಭೂಮಿಯ ಹುಟ್ಟಿಗೆ ನಮ್ಮ ಕನ್ನಡ ಯಕ್ಷರಂಗಭೂಮಿ ಕಾರಣ ಎನ್ನುವುದು ಇತಿಹಾಸದ ಉಲ್ಲೇಖ) ಅಂದಿನಿಂದ ಸತ್ವಭರಿತ ನಾಟಕಗಳು ನವನವೀನ ರಂಗತಂತ್ರಗಳು ನಮ್ಮ ರಂಗಶ್ರೀಮಂತಿಕೆಯನ್ನು ಹೆಚ್ಚಿಸುತ್ತಾ ಬಂದಿವೆ ವೃತ್ತಿರಂಗಪರಂಪರೆಯ ಮೊದಲ ಪೀಳಿಗೆಯ ಕಲಾವಿದರಲ್ಲಿ ಕೊಣ್ಣೂರಿನ ಶಿವಮೂರ್ತಿಸ್ವಾಮಿ ಕಣಬರ್ಗಿಮಠರು, ತುಕಾರಾಮ ಬುವಾ ಹೊಸಮನಿ (ಗೋಕಾಕ) ಚಿಕ್ಕೋಡಿ ಶಿವಲಿಂಗಸ್ವಾಮಿಗಳು, ಗರುಡ ಸದಾಶಿವರಾಯರು, ಶಿರಹಟ್ಟಿ ವೆಂಕೋಬರಾಯರು, ವರದಾಚಾರ್ಯರು, ಮಹಮ್ಮದ

ಫೀರ, ಗುಬ್ಬಿವೀರಣ್ಣನವರು, ವಾಮನರಾವ್ ಮಾಸ್ತರ, ಹಂದಿಗನೂರ ಸಿದ್ಧರಾಮಪ್ಪ ಮುಂತಾದವರ ಆಗಮನದಿಂದ ಕನ್ನಡ ರಂಗಭೂಮಿ ಸಮೃದ್ಧಗೊಳ್ಳುತ್ತದೆ.

ಇವರೆಲ್ಲರ ಮುಂದುವರೆಕೆಯಾಗಿ ಗೋಕಾಕ ಬಸವರಾಜ ಹೊಸಮನಿ, ಚಿಂದೋಡಿ ವೀರಪ್ಪನವರು, ಏಣಗಿ ಬಾಳಪ್ಪನವರು, ಕಲಿಯುಗದ ಚಿರಂಜೀವಿ ಖ್ಯಾತಿಯ ಯಲಿವಾಳ ಸಿದ್ಧಯ್ಯಸ್ವಾಮಿ, ದೊಡ್ಡವಾಡ ಸಿದ್ಧಯ್ಯನವರು, ಹಲಗೇರಿ ಜಟ್ಟೆಪ್ಪನವರು, ಡಿ. ದುರ್ಗಾದಾಸ, ಎನ್ ಬಸವರಾಜ, ಡಂಬಳ ಸಂಕಣ್ಣ ಮುಂತಾದವರ ತುಸು ಹತ್ತಿರದ ಸಮಕಾಲಿನ ಕಲಾವಿದರೆ, ಪ್ರಸ್ಥುತ ನಮ್ಮ ಕಥಾನಕದ ಕಥಾನಾಯಕ ಅಬ್ದುಲ್ಲಸಾಬ ಅಣ್ಣಿಗೇರಿ (ಡಿ.ಎಮ್. ಅಬ್ದುಲ್‌ಖಾದರ) ವಿಶೇಷವಾಗಿ ಯಲಿವಾಳ ಸಿದ್ಧಯ್ಯನವರು ದುರ್ಗಾದಾಸರು ದೊಡ್ಡವಾಡ ಸಿದ್ಧಯ್ಯನವರ ಸಹ ರಂಗಸೇವಾ ಕರ್ತರಾದ ಅಬ್ದುಲ್ಲಸಾಬ ಅಣ್ಣಿಗೇರಿಯವರು ಸಂಗೀತ ರಂಗಭೂಮಿಯ ಕೊನೆಯ ಕೊಂಡಿ ಎಂದು ಹೇಳಿದರೆ, ತಪ್ಪಾಗಲಾರದು.

ಕಲಾವಿದರಲ್ಲಿ ಎರಡು ವಿಧ. ನಟ ಮತ್ತು ಕಲಾವಿದ. ನಟ, ನಾಟಕ, ಅದರಲ್ಲಿನ ಆ ಪಾತ್ರ, ಸಂದರ್ಭ ಬೇಡುವುದಷ್ಟನ್ನೇ ಮಾಡುವವನಾದರೆ, ಕಲಾವಿದ ಹಾಗಲ್ಲ, ಆಯಾ ನಾಟಕ, ಪಾತ್ರ, ಸನ್ನಿವೇಶ ಬೇಡುವುದಕ್ಕೂ ಹೆಚ್ಚು ತನ್ನ ಸೃಜನಶೀಲತೆಯನ್ನು ಬೆರೆಸಿ ಪಾತ್ರ ಪೋಷಣೆ ಮಾಡುತ್ತಾನೆ. ನಟ ನಿರ್ದೇಶಕನ ಅಥವಾ ನಾಟಕಕಾರನ ಸೃಜನಶೀಲತೆಯ ಸೊತ್ತಾದರೆ, ಕಲಾವಿದ ಸ್ವಯಂಕೃತ ಸೃಜನಶೀಲತೆಯ ಮೊತ್ತ. ನಟ ನಿರ್ದೇಶಿಸಿದಷ್ಟನ್ನೇ ನಟಿಸುವವನಾದರೆ, ಕಲಾವಿದ ನಿರ್ದೇಶನದ ಆಚೆಗೆ ಸ್ವಯಂಪ್ರತಿಭೆಯನ್ನು ಅನಾವರಣಗೊಳಿಸುವ ಸ್ವಸಾಮರ್ಥ್ಯದ ಸಯಂಪ್ರಭೆ. ತನ್ನ ಪ್ರಭಾವಪೂರ್ಣವಾದ ನಟನಾ ಚಾತುರ್ಯದಿಂದ ನೋಟಕರನ್ನು ಮಂತ್ರಮುಗ್ಧಗೊಳಿಸುವ ಅಪೂರ್ವಚೇತನ ಕಲಾವಿದ. ಅಂತಹ ಕಲಾಚೈತನ್ಯವನ್ನು ಸಂಪಾದಿಸಿಕೊಂಡ ನಟ, ಕಲಾವಿದನಾಗಿ ರೂಪಾಂತರಗೊಳ್ಳುತ್ತಾನೆ. ಅತಂಹವರಲ್ಲಿ ನಮ್ಮ ವೃತ್ತಿ ರಂಗಭೂಮಿಯನ್ನು ಅರ್ಧ ಶತಮಾನಕ್ಕೂ ಮಿಕ್ಕಿ ಆಳಿದ ಅಪರೂಪದ ಪ್ರತಿಭೆ ಅಬ್ದುಲ್ಲಸಾಬ ಅಣ್ಣಿಗೇರಿ.

# ಹಿನ್ನೆಲೆ

ಇಂದಿನ ಗದಗ ಜಿಲ್ಲೆಯ ಮುಳಗುಂದದ ಥಾಲಯತ್ ಎಂಬ ಸಂಪ್ರದಾಯಸ್ಥ ಮುಸ್ಲಿಂ ರೈತ ಕುಟುಂಬದಲ್ಲಿ ತಂದೆ ಮರ್ದಾನಸಾಬ, ತಾಯಿ ವಜೀರಬಿಯವರ ಹೊಟ್ಟೆಯಲ್ಲಿ ಅಬ್ದುಲ್ಲಸಾಬರ ಜನನವಾಗುತ್ತದೆ. ಮನೆಯಲ್ಲಿ ತಲೆತಲಾಂತರಗಳಿಂದ ಬಂದ ಒಕ್ಕಲುತನ ಕಾಯಕ, ಉಣ್ಣಲು, ಉಡಲು, ಯಾವುದಕ್ಕೂ ಕೊರತೆ ಇಲ್ಲದ ಸುಸಂಸ್ಕೃತ ಕುಟುಂಬ. ಹತ್ತಾರು ಕೂರಿಗೆ ಹೊಲ, ದೊಡ್ಡಮನೆ, ಮನೆ ತುಂಬಾ ಬಂಧು ಬಾಂಧವರು ಒಂದರ್ಥದಲ್ಲಿ ಮುಳುಗುಂದ ಗ್ರಾಮದಲ್ಲಿಯೇ ಪ್ರತಿಷ್ಠಿತ ಕುಟುಂಬ. ಆಶ್ಚರ್ಯವೆಂದರೆ, ಆ ಕುಟುಂಬದಲ್ಲಿ ಈ ಹಿಂದೆ ಯಾರಿಗೂ ಕಲೆಯ ಗಂಧ, ಗಾಳಿ ಸುಳಿದಿರಲಿಲ್ಲ. ಆದರೆ ಅಬ್ದುಲ್ಲಸಾಬರಿಗೆ ಹೇಗೆ ಒಲಿಯಿತು? ಥಾಲಾಯತ ಮನೆತನದ ಸದೃಢ ಸುಂದರ ಯುವಕ ಮರ್ದಾನಸಾಬರಿಗೆ ಅಣ್ಣಿಗೇರಿಯ ಹುಸೇನಸಾಬ ರಾಜೇಸಾಬ ಅಲ್ಲಾಭಕ್ಷ ಅವರ ಮಗಳು ವಜೀರಬಿ ಅವರನ್ನು ನಿಖಾ ಮಾಡಿಕೊಟ್ಟಿರುತ್ತಾರೆ. ಅವರ ಗರ್ಭಸಂಜಾತನಾಗಿ ನಮ್ಮ ಕಥಾನಾಯಕ ಅಬ್ದುಲ್ಲಸಾಬರದು ೧೯೩೯ರಲ್ಲಿ ಜನನವಾಗುತ್ತದೆ.

ಇದರಲ್ಲಿ ಏನು ವಿಶೇಷ ಎಂದಿರಾ? ಅವರ ಹೆಣ್ಣಜ್ಜ ಅಂದರೆ ತಾಯಿಯ ತಂದೆ ಹುಸೇನಸಾಬರು ಆ ಕಾಲದ ಖ್ಯಾತ ರಂಗಭೂಮಿ ಕಲಾವಿದರಾಗಿ ನಾಟಕ ಕಂಪನಿಯ ಮಾಲಕರಾಗಿ ಹೆಸರು ಮಾಡಿರುತ್ತಾರೆ. ಅಲ್ಲದೆ ೧೯೨೮ ರಲ್ಲಿಯೇ ಅಣ್ಣಿಗೇರಿಯಲ್ಲಿ "ಖುದಾಬಂದ" ಎಂಬ ನಾಟಕ ಥೇಟರ ಕಟ್ಟಿಸಿ ಜನಪ್ರಿಯರಾಗಿರುತ್ತಾರೆ. ಮಾತ್ರವಲ್ಲ,

ಗಾಂವಟಿ ಔಷಧ ಕೊಡುವ ವೈದ್ಯರಾಗಿಯೂ ಸೇವೆ ಮಾಡಿದ್ದರಲ್ಲದೆ, "ಸೊಹಂ" ಎಂಬ ವಿಡಂಬನಾತ್ಮಕ ನಾಟಕ ಪ್ರದರ್ಶಿಸಿದ ಹಿರಿಮೆಗೆ ಪಾತ್ರರಾಗಿರುತ್ತಾರೆ. ಅವರು ತಮ್ಮ ನಾಟ್ಯ ಸಂಘಕ್ಕೆ ಇಟ್ಟ ಹೆಸರು "ಖುದಾ ಒಂದ" ಅಂದರೆ ದೇವರು ಒಬ್ಬನೆ ಎಂಬ ಅರ್ಥಪೂರ್ಣ ಹೆಸರು. ಈ ಹೆಸರಿನಲ್ಲಿಯೇ ಭಾವೈಕ್ಯತೆ ಅಡಗಿದೆ. ೧೯೨೮ ರಷ್ಟು ಹಿಂದೆಯೇ ಇಂತಹ ಕೋಮು ಸೌಹಾರ್ದತೆಯನ್ನು ಸಂಕೇತಿಸುವ ಹೆಸರನ್ನು ಇಡುವ ಮೂಲಕ ಅಂದೇ ಹಿಂದು-ಮುಸ್ಲಿಂರ ಮಧ್ಯೆ ಸಾಮರಸ್ಯ ಮೂಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದ ಹುಸೇನಸಾಬ ಅಣ್ಣಿಗೇರಿಯವರ ಮೊಮ್ಮಗನೆ ಈ ಅಬ್ದುಲ್ಲಸಾಬ ಅಣ್ಣಿಗೇರಿ.

ಈ ಹುಸೇನಸಾಬ ರಾಜೇಸಾಬ ಅಲ್ಲಾಭಕ್ಷ ಅವರು ಕಲಾವಿದರು. ಥೇಟರ ಮಾಲಕರು ಮಾತ್ರವಲ್ಲದೆ, ನಾಟಕ ಪ್ರಕಾಶಕರು ಕೂಡಾ ಆಗಿದ್ದರು. ಕರ್ನಾಟಕ ಕವಿಚಂದ್ರ ಬಿರುದಾಂಕಿತರಾದ ನಲವಡಿ ಶ್ರೀಕಂಠಶಾಸ್ತ್ರಿಗಳು ರಚಿಸಿದ "ಮಹಾರಾಣಿ ಕಿತ್ತೂರ ಚನ್ನಮ್ಮ" ನಾಟಕವನ್ನು ೧೯೩೧ ರಲ್ಲಿ ಇವರೆ ಪ್ರಕಾಶನಗೊಳಿಸಿ ಕನ್ನಡ ರಂಗಭೂಮಿಯಮೇಲೆ ಮೆರೆಸಿದ ಸಾಹಸಿ ಇವರು. ಬ್ರಿಟಿಷ್ ರಾಜಸತ್ತೆಯನ್ನು ಕಿತ್ತು ಹಾಕುವ ಪಣತೊಟ್ಟ ಸ್ವಾತಂತ್ರಾಂದೋಲನದ ಹರಿಕಾರರಿಗೆ ಸ್ಫೂರ್ತಿ ನೀಡುವ ಉದ್ದೇಶದಿಂದಲೇ ಪ್ರದರ್ಶನಗೊಂಡು ಸ್ವಾತಂತ್ರದ, ಸ್ವರಾಜ್ಯದ ಕಲ್ಪನೆ ಮೂಡಿಸುವ ದಿಶೆಯಲ್ಲಿ ಯಶ್ವಸಿಯಾದ ಈ ನಾಟಕ ೧೯೨೮ ರಲ್ಲಿ ಕರ್ನಾಟಕ ಕವಿಚಂದ್ರ ನಲವಡಿ ಶ್ರೀಕಂಠಶಾಸ್ತ್ರಿಗಳು ರಚಿಸಿದ ಮಹಾರಾಣಿ ಕಿತ್ತೂರ ಚನ್ನಮ್ಮ ನಾಟಕಕ್ಕೆ ಬ್ರಿಟಿಷ ಆಡಳಿತ ಪರವಾನಗಿ ನಿರಾಕರಿಸಿದಾಗ ಹೋರಾಟ ಮಾಡಿ ಪರವಾನಗಿ ಪಡೆದು ಆ ನಾಟಕ ಪ್ರದರ್ಶನ ನೀಡಿದ ಹೆಗ್ಗಳಿಕೆ ಈ ಹುಸೇನಸಾಬ ಅಲ್ಲಾಭಕ್ಷ ಅವರದು.

ಈ ನಾಟಕ ಅಂದಿನ ಆಳರಸರಾದ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುತ್ತದೆ. ಇದೆ ಅಣ್ಣಿಗೇರಿಯ ಖುದಾಒಂದ ಥೇಟರಿನಲ್ಲಿ ಅತ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದ್ದ ಈ ನಾಟಕ ನೋಡಿದ ಬ್ರಿಟಿಷ್ ಅಧಿಕಾರಿಗಳು ಈ ನಾಟಕವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಅಂದಿನಿಂದ ಈ ನಾಟಕ ಪ್ರದರ್ಶನ ಮಾಡದಂತೆ ನಿರ್ಬಂಧ ಹೇರುತ್ತಾರೆ. ಮಾತ್ರವಲ್ಲ, ಈ ನಾಟಕ ಮುದ್ರಣ ಪ್ರತಿಯನ್ನು ವಶಪಡಿಸಿಕೊಂಡು ಹೋಗುತ್ತಾರೆ. ಮುಂದೆ ೧೯೮೨ ರಲ್ಲಿ ನಾಡಿನ ಹಿರಿಯ ಸಂಶೋಧಕರಾದ ಡಾ ಎಂ.ಎಂ. ಕಲಬುರ್ಗಿಯವರು ಲಂಡನ್‌ಗೆ ಹೋದಾಗ ಅಲ್ಲಿನ ಬ್ರಿಟಿಷ ಲೈಬ್ರರಿಯಲ್ಲಿ ಕನ್ನಡಕ್ಕೆ ಸಂಬಂಧಿಸಿದ ಪ್ರಾಚೀನ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾಗ ಒಂದು ಕನ್ನಡ ಪುಸ್ತಕಗಳ ಗಂಟು ಡಾ॥ ಕಲಬುರ್ಗಿಯವರ ಗಮನ ಸೆಳೆಯುತ್ತದೆ. ಆಗ ಅತ್ಯಂತ ಕುತೂಹಲದಿಂದ ಅವರು ಆ ಗಂಟನ್ನು ಪರಿಶೀಲಿಸಿದಾಗ ಅದರಲ್ಲಿ ಕನ್ನಡಕ್ಕೆ ಸಂಬಂಧಿಸಿದ ಹಲವಾರು ಕರ ಪತ್ರಗಳು ಸೇರಿದಂತೆ ಒಟ್ಟು ೯ ಗ್ರಂಥಗಳು ಅವರ ಗಮನಕ್ಕೆ ಬರುತ್ತವೆ. ಅದರಲ್ಲಿ ಮೊದಲು ಅವರ ಕಣ್ಣಿಗೆ ಬಿದ್ದಿದ್ದೇ ನಮ್ಮ ಅಬ್ದುಲ್ಲಸಾಬ ಅಣ್ಣಿಗೇರಿಯವರ ಅಜ್ಜ ಹುಸೇನಸಾಬ ರಾಜೇಸಾಬ ಅಲ್ಲಾಭಕ್ಷ ಇವರು ಪ್ರಕಟಿಸಿದ ಶ್ರೀಕಂಠಶಾಸ್ತ್ರಿಗಳ "ಮಹಾರಾಣಿ ಕಿತ್ತೂರ ಚನ್ನಮ್ಮ" ನಾಟಕ.

೧೯೩೧ ರಲ್ಲಿ ಪ್ರಕಟವಾದ ಈ ನಾಟಕ ಕನ್ನಡ ನಾಡಿನಿಂದ ದೂರದ ಆ ಲಂಡನ್ ದೇಶ ತಲುಪಿ ಅಲ್ಲಿನ ಲೈಬ್ರರಿಯಲ್ಲಿ ಬಹಿಷ್ಕೃತ ಗ್ರಂಥಗಳ ಅಡಿಯಲ್ಲಿ ಸ್ಥಾನಪಡೆದು ಅನಾಥವಾಗಿ ಬಿದ್ದಿರುವುದನ್ನು ಕುತೂಹಲದಿಂದ ಕೈಗೆ ಎತ್ತಿಕೊಂಡು ಡಾ॥ ಕಲಬುರ್ಗಿಯವರು  ಸವಿಸ್ತಾರವಾಗಿ ಓದುತ್ತಾರೆ. ಕನ್ನಡ ನಾಡಿನ ವೀರ ಮಹಿಳೆಯೊಬ್ಬಳ ಚಾರಿತ್ರಿಕ ನಾಟಕ ಬ್ರಿಟಿಷರ ನಿದ್ದೆಗೆಡಿಸಿ ಬಹಿಷ್ಕೃತಗೊಂಡು ಏಳುಸಾಗರ ದಾಟಿ ಲಂಡನ್‌ವರೆಗೆ ಹೋಗಿ ಅನಾಥ ಸ್ಥಿತಿಯಲ್ಲಿದ್ದಿದ್ದನ್ನು ನೋಡಿ ಕಲಬುರ್ಗಿಯವರು ತುಂಬಾ ನೊಂದುಕೊಳ್ಳುತ್ತಾರೆ. ಸಂಶೋಧನ ನೋಟದ ನಾಡೋಜ ಡಾ॥ ಕಲಬುರ್ಗಿಯವರ ಕಣ್ಣಿಗೆ ಈ ಪುಸ್ತಕ ದೂರದ ಲಂಡನ್‌ನಲ್ಲಿ ಬಿದ್ದದ್ದು ಒಂದು ಆಕಸ್ಮಿಕವೇ ಸರಿ. ಅದನ್ನು ಅವರು ತಮ್ಮ ಮಾರ್ಗ ಸಂಪುಟ ೩ ರಲ್ಲಿ ೮೫ ನೇ ಲೇಖನವಾಗಿ ಪ್ರಕಟಗೊಳಿಸಿದ್ದಾರೆ. ಅದರ ಯಥಾವತ್ ವಿವರ ಈ ಮುಂದಿನಂತಿದೆ.

೧೯೮೨ ಲಂಡನ್ನಿನ ಸ್ಟೋರ್‌ಸ್ಟ್ರೀಟ್ ಮೇಲಿರುವ ಬ್ರಿಟಿಷ ಲೈಬ್ರರಿಯಲ್ಲಿ ಕನ್ನಡಕ್ಕೆ ಸಂಬಂಧಿಸಿದ ಪ್ರಾಚೀನ ದಾಖಲೆಗಳನ್ನು ಪರಿಶೀಲಿಸುತ್ತಿರುವಾಗ ಕೆಟ್ಲಾಗ್‌ನಲ್ಲಿ (Proseribed Book ಎಂಬ ಸೂಚನೆ  ನನ್ನ ಗಮನ ಸೆಳೆಯಿತು. ಕರ ಪತ್ರಗಳೂ ಸೇರಿದಂತೆ ಒಟ್ಟು ೯ ರಚನೆಗಳ ಒಂದು ಕಟ್ಟನ್ನು ಒಂದೆಡೆ ಇಡಲಾಗಿತ್ತು ಇವುಗಳ ವಿವರ ಹೀಗಿದೆ.

೧) ಮಹಾರಾಣಿ ಕಿತ್ತೂರ ಚನ್ನಮ್ಮ, ೧೯೩೧

ನಾಟಕ  : ಕ್ರೌನ್, ಪುಟ –೧೨೪ ಬೆಲೆ ೧–೦–೦ ರೂ.

ಲೇಖಕ :  ಶ್ರೀಕಂಠಶಾಸ್ತ್ರೀ ನಲವಡಿ

ಪ್ರಕಾಶಕ : ಹುಸೇನಸಾಬ ರಾಜೇಸಾಬ ಅಲ್ಲಾಭಕ್ಷ ಅಣ್ಣಿಗೇರಿ

ಮುದ್ರಣ : ಆರ್. ಎಮ್. ಸತ್ಯಪ್ಪನವರ ಗದಗ. ಇವರು ಸತ್ಯ ಪ್ರಕಾಶ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿಸಿದರು.

ವಿಷಯ : ಕಿತ್ತೂರ ಚೆನ್ನಮ್ಮನನ್ನು ಕುರಿತು ನಾಟಕ ೧೪ ಪ್ರವೇಶಗಳು

ಮಾರ್ಗ : ಸಂಪುಟ –೩ ಲೇ. ಡಾ॥ ಎಂ.ಎಂ. ಕಲಬುರ್ಗಿ

ಕನ್ನಡದ ಮಹತ್ವದ ಗ್ರಂಥಗಳಾದ ಮಾರ್ಗ ಸಂಪುಟದಲ್ಲಿ ದಾಖಲೆಗೊಂಡ ನಮ್ಮ ಅಬ್ದುಲ್ಲಸಾಬ ಅಣ್ಣಿಗೇರಿಯವರ ಅಜ್ಜ ಅಣ್ಣಿಗೇರಿ ಹುಸೇನಸಾಬರ "ರಂಗಕರ್ಮ"ದ ಒಂದು ಸ್ಯಾಂಪಲ್ ಇದು. ಏಕೆಂದರೆ, ನಮ್ಮ ರಂಗಭೂಮಿ ಕುರಿತಂತೆ ಅಣ್ಣಿಗೇರಿ ಹುಸೇನಸಾಬರು ಗೈದ ಸೇವೆಗೆ ಸಾಕ್ಷಿಯಾಗಿ ಡಾ॥ ಕಲಬುರ್ಗಿಯವರಂತಹ ಸಂಶೋಧಕರ ಕಣ್ಣಿಗೆ ಅದೂ ದೂರದ ಲಂಡನ್‌ನಲ್ಲಿ ಗೋಚರಿಸಿದ್ದು ಏಕೈಕ ಮಹತ್ವದ ಆಧಾರ.

ಇದಕ್ಕೂ ಮೊದಲು ೧೯೨೯ ರಲ್ಲಿ ಅಬ್ಬಿಗೇರಿ ಬಸನಗೌಡರ ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿಯಲ್ಲಿ ಚಿಕ್ಕೋಡಿ ಶಿವಲಿಂಗಸ್ವಾಮಿಗಳು ರಚಿಸಿದ ಕಿತ್ತೂರ ಚನ್ನಮ್ಮ ನಾಟಕ ತುಂಬಾ ಜನಪ್ರಿಯವಾಗಿರುತ್ತದೆ. ಅದೇ ಕಾಲಕ್ಕೆ ಐತಿಹಾಸಿಕ ನಾಟಕಗಳು ಸ್ವದೇಶಿ ಚಳುವಳಿಗೆ ಸ್ಪೂರ್ತಿ ನೀಡುತ್ತವೆ ಎಂಬ ಕಾರಣಕ್ಕಾಗಿ ಬ್ರಿಟಿಷ ಸರಕಾರದಿಂದ ನಿಷೇಧಕ್ಕೊಳಗಾಗಿರುತ್ತದೆ. ಇದರಿಂದ ಅಬ್ಬಿಗೇರಿ ಕಂಪನಿಗೆ ಭಾರಿ ಪೆಟ್ಟುಬಿದ್ದು ಕಂಪನಿ ಮಾಲಿಕರು ಅನುಮತಿ ಪಡೆಯಲು ಓಡಾಡಿದರೂ ಅವರಿಗೆ ಅನುಮತಿ ದೊರೆಯಲಿಲ್ಲ.

ಆಧಾರ : ಡಾ ॥ ಏಣಗಿ ಬಾಳಪ್ಪ"ನಾಟ್ಯಭೂಷಣ" ಗ್ರಂಥದಲ್ಲಿ

ಆದರೆ ಅಣ್ಣಿಗೇರಿ ಹುಸೇನಸಾಬರು ಮಾತ್ರ ಹಠಕ್ಕೆ ಬಿದ್ದವರಂತೆ ಬ್ರಿಟಿಷ ಸರಕಾರದಿಂದ ಕಾನೂನು ಹೋರಾಟ ಮಾಡಿ ಅನುಮತಿ ಪಡೆದು ತಮ್ಮ ಖಿದಾಒಂದ ಥೇಟರಿನಲ್ಲಿ ನಲವಡಿ ಶ್ರೀಕಂಠ ಶಾಸ್ತ್ರಿಗಳ ಕಿತ್ತೂರ ಚನ್ನಮ್ಮ ನಾಟಕ ಪ್ರದರ್ಶಿಸಿದ ಶ್ರೇಯಸಿಗೆ ಪಾತ್ರರಾಗುತ್ತಾರೆ.

ಇಂತಹ ಅಜ್ಜನ ಕಲಾಸಿರಿ ಅವ್ವನ ರಕ್ತದ ಮೂಲಕ ಮುಳಗುಂದದ ಢಾಲಾಯತ್ ಕುಟುಂಬದಲ್ಲಿ ಅಬ್ದುಲ್ಲಸಾಬ ಎಂಬ ನಾಮಾಕಿಂತದೊಂದಿಗೆ ಜನಿಸಿ ಕನ್ನಡ ರಂಗಭೂಮಿಯನ್ನು ನಿಕ್ಕಿ ಅರ್ಧ ಶತಮಾನ ಕಾಲ ಆಳುತ್ತದೆ. ಶ್ರೀಮಂತಗೊಳಿಸುತ್ತದೆ.

# ಖುದಾಬಂದ ನಾಟಕ ಥೇಟರ್

ಆದಿಕವಿ ಪಂಪನ ತವರುಭೂಮಿ ಅಣ್ಣಿಗೇರಿಯಲ್ಲಿ ಆ ಕಾಲದ ಅಂದರೆ ೨೦-೩೦ರ ದಶಕದಲ್ಲಿ, ಕರ್ನಾಟಕದ ನಾಟಕ ಕಂಪನಿಗಳಿಗೆ ಇದು ಮಳೆಗಾಲದ ಆಶ್ರಯ ತಾಣವಾಗಿತ್ತು. ಅಂದಿನ ಹೆಸರಾಂತ ಕಂಪನಿಗಳಾದ ಶಿರಹಟ್ಟಿ ವೆಂಕೋಬರಾಯರ ಲಕ್ಷ್ಮೀ ಪ್ರಸಾದಿತ ನಾಟಕ ಕಂಪನಿ, ದೊಡ್ಡವಾಡ ಸಿದ್ಧಯ್ಯನವರ ಸಮಾಜವಿಕಾಸ ನಾಟಕ ಕಂಪನಿ, ಮೃಡದೇವ ಗವಾಯಿಗಳ ಅಮರೇಶ್ವರ ನಾಟಕಕಂಪನಿ, ಏಣಗಿ ಬಾಳಪ್ಪನವರ ಕಲಾವೈಭವ ನಾಟಕಕಂಪನಿ, ಗೋಕಾಕ ಬಸವರಾಜರ ಶಾರದಾ ಸಂಗೀತ ನಾಟಕ ಮಂಡಳಿ, ನಾಕೋಡರ ಕಂಪನಿ, ಬೆಳವಣಿಕೆ ಕಂಪನಿ ಮುಂತಾದ ಕಂಪನಿಗಳಿಗೆ ಉತ್ತರ ಕರ್ನಾಟಕದಲ್ಲಿ ಮಳೆಗಾಲದಲ್ಲಿ ಅಣ್ಣಿಗೇರಿಯ ಈ ಖುದಾಬಂದ ಥೇಟರೇ ಗತಿಯಾಗಿತ್ತು. ಬೇಸಿಗೆಯಲ್ಲಾದರೆ ಅರಿವೆ ಟೆಂಟ್ ಹಾಕಿ ನಾಟಕವಾಡುತ್ತಿದ್ದರು. ಆದರೆ ಮಳೆಗಾಲಕ್ಕೆ ತಗಡು ಹೊದಿಸಿದ ಕಂಚಿ ಥೇಟರೇ ಅಗತ್ಯವಿದ್ದುದರಿಂದ ನಾಡಿನ ಅನೇಕ ಕಂಪನಿಗಳು ಅಣ್ಣಿಗೇರಿಯ ಖುದಾಬಂದ ನಾಟಕ ಥೇಟರಿಗೆ ಮೊರೆಹೋಗುತ್ತಿದ್ದವು. ಮಳೆಗಾಲವೆಂದಾಗ ನಾಟಕಕ್ಕೆ ಕಲೆಕ್ಷನ್ ಅಷ್ಟಕ್ಕಷ್ಟೇ ಇದ್ದು ನಷ್ಟ ಅನುಭವಿಸಿ ಥೇಟರ ಬಾಡಿಗೆ ಕೊಡದೇ ಹೋಗುತ್ತಿದ್ದ ಕಂಪನಿಗಳೂ ಅಂದು ಹೆಚ್ಚಾಗಿದ್ದವು.

ಆದರೆ ಹುಸೇನಸಾಬರು ತಮ್ಮ ಥೇಟರಿನಲ್ಲಿ ಮುಕ್ಕಾಮ್ ಮಾಡಿದ ಕಂಪನಿ ಕಲಾವಿದರು ಮಳೆಗಾಲವನ್ನು ಸುರಕ್ಷಿತವಾಗಿ ಕಳೆದು ಹೋದರೆ ಅದೇ ದೊಡ್ಡ ಲಾಭವೆಂದು ಭಾವಿಸುವ ಹೃದಯ ಸಂಪನ್ನರಾಗಿದ್ದರು. ಅಲ್ಲದೆ "ಚಿಕ್ಕೋಡಿ

ಶಿವಲಿಂಗಸ್ವಾಮಿಗಳು ಪದೇ ಪದೇ ನಷ್ಟ ಅನುಭವಿಸಿ ಕಂಪನಿ ಬಂದ್ ಮಾಡಿದಾಗ ತಮ್ಮ ಕಂಪನಿಯ ನಟರನ್ನು ಅಣ್ಣಿಗೇರಿ ಹುಸೇನಸಾಬ ಅಲ್ಲಾಭಕ್ಷರ ಬಳಿಗೆ ಕಳಿಸಿಕೊಟ್ಟು ಅವರ ಜೀವನೋಪಾಯಕ್ಕೆ ದಾರಿ ತೋರಿಸಲು ಹುಸೇನಸಾಬರಲ್ಲಿ ವಿನಂತಿಸುತ್ತಿದ್ದರು."

ಆಧಾರ ಪ್ರೊ ಬಿ.ಎಸ್. ಗವಿಮಠ "ನಾಟ್ಯಭೂಷಣ" ಗ್ರಂಥದಲ್ಲಿ.

ಇಂತಹವರ ಮೊಮ್ಮಗನಾದ ಅಬ್ದುಲ್ಲಸಾಬನಿಗೆ ಕಲಾಸಕ್ತಿ ರಕ್ತಗತವಾಗಿಯೇ ಬಂದಿತ್ತು. ತಮ್ಮ ಎಂಟನೇಯ ವಯಸ್ಸಿನಲ್ಲಿಯೇ ಅನೇಕ ಭಜನಾಪದಗಳು, ಜಾನಪದ ಹಾಡುಗಳು, ಶರಣರ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಾ ಬೆಳೆಯ ಸಿರಿಯನ್ನು ಮೊಳಕೆಯಲ್ಲಿಯೆ ತೋರ್ಪಡಿಸಿದ್ದರು. "ಮಾಡಿ ಮಾಡಿ ಕೆಟ್ಟರೋ ಮನವಿಲ್ಲದೇ, ನೀಡಿ ನೀಡಿ ಕೆಟ್ಟರೋ ನಿಜವಿಲ್ಲದೆ" ಎಂಬ ಬಸವಣ್ಣನವರ ವಚನವನ್ನು ತಮ್ಮ ಎಳೆಯ ಸಿರಿ ಕಂಠದಲ್ಲಿ ಸೊಗಸಾಗಿ ಹಾಡುತ್ತಾ ಜನರ ಗಮನವನ್ನು ತಮ್ಮತ್ತ ಸೆಳೆಯುತ್ತಿದ್ದರು. ಇವರ ಕಂಠಸಿರಿಗೆ ಬೆರಗಾದ ಇವರ ಶಾಲಾಗುರುಗಳು ಹುಡುಗ ತುಂಬಾ ಚೆನ್ನಾಗಿ ಹಾಡುತ್ತಾನೆ. ಎಂದು ಪ್ರೋತ್ಸಾಹದ ಮಾತನ್ನಾಡಿ ಹೆಚ್ಚು ಹೆಚ್ಚು ಹಾಡುಗಳನ್ನು ಹಾಡಿಸಿ ಸಂತೋಷ ಪಡುತ್ತಿದ್ದರು. ಅಂದವಾದ ಮೈಕಟ್ಟು, ಸುಂದರ ವದನಾರವಿಂದ, ಅದಕ್ಕೆ ಕಳಸವಿಟ್ಟಂತೆ, ಸೊಗಸಾದ ಸಿರಿಕಂಠ ಕೇಳಬೇಕೆ, ಹುಡಗನ ಬಾಯಿಂದ ಮಂಖಾನುಮಂಖವಾಗಿ ಕನ್ನಡ ಕವಿವರ್ಯರ, ದಾರ್ಶನಿಕರ, ಶರಣರ ಸಾಹಿತ್ಯ ಇವರ ಕಂಠ ಸಿರಿಯಲ್ಲಿ ಧ್ವನಿಗೊಂಡು ಸುಶ್ರಾವ್ಯವಾಗಿ ಮಾರ್ಧನಿಸುತ್ತಿತ್ತು.

ಇತ್ತ ಕೃಷಿಯನ್ನೆ ನೆಚ್ಚಿಕೊಂಡು ಬದುಕು ನೂಕುತ್ತಿದ್ದ ತಂದೆ-ತಾಯಿ ಬಂಧು ಬಾಂಧವರಿಗೆ ಬಾಲಕ ಅಬ್ದುಲ್ಲಸಾಬನ ಗಾನಲೀಲೆ ಆತಂಕದ ಛಾಯೆಯನ್ನು ಮೂಡಿಸಿತ್ತು. ಎಲ್ಲಿ ಹುಡಗ ಮನೆತನದ ಮೂಲ ಕಾಯಕ ಕೃಷಿ ಸೇವೆಯಿಂದ ವಿಮುಖನಾಗಿ ಬಿಡುತ್ತಾನೊ, ಎಲ್ಲಿ ಹೀಗೇ ಹಾಡುತ್ತಾ, ಹಾಡುತ್ತಾ, ಅಲೆಮಾರಿಯಾಗಿ ತಿರುಗ ಹತ್ತುವನೊ ಎಂಬ ಆತಂಕ ಕಾಡತೊಡಗಿತು. ಏಕೆಂದರೆ, ಅಷ್ಟರಲ್ಲಾಗಲೇ ಹಾಡಿದವರಿಗೆ ಹಾದಿ ತಿಳಿಯಲಿಲ್ಲ, ಓದಿದವರಿಗೆ ಓಣಿ ತಿಳಿಯಲಿಲ್ಲ, ಎಂಬ ಕುಹಕಿಗಳ ಮಾತುಗಳು ಹೆತ್ತವರ ಕಿವಿಗೆ ಅಪ್ಪಳಿಸಿ ಅವರನ್ನು ಅಧಿರರನ್ನಾಗಿ ಮಾಡಿದ್ದವು. ಮಗ ಓದಿ ಜಾಣನಾಗಿ ಮನೆತನದ ಮೂಲ ಕಸುಬನ್ನೊ ಅಥವಾ ಇನ್ನಾವುದಾದರೂ ಉದ್ಯೋಗ ಮಾಡುತ್ತಾ ದಾರಿಗೆ ಹತ್ತುವ ಬದಲು ಹಾಡಿನ ಗೀಳಿಗೆ ಬಿದ್ದು ದಾರಿ ತಪ್ಪಿದರೇನು ಗತಿ ಎಂದು ಅವರು ಚಿಂತಿಸುವಲ್ಲಿಯೂ ಒಂದು ವಿಶೇಷ ಅರ್ಥವಿತ್ತು. ಏಕೆಂದರೆ, ಅಷ್ಟರಲ್ಲಾಗಲೇ ಅಬ್ದುಲ್ಲಸಾಬರ ಹೆಣ್ಣಜ್ಜ ಅಣ್ಣಿಗೇರಿ ಹುಸೇನಸಾಬರು ನಾಟಕದ ಗೀಳಿಗೆ ಬಿದ್ದು ಮನೆ ಮಠಗಳನ್ನು ಬಿಟ್ಟು ಊರೂರು ತಿರುಗುತ್ತಿದ್ದ ಸಂಗತಿ ಅವರನ್ನು ಸಹಜವಾದ ಆತಂಕಕ್ಕೆ ಗುರಿ ಮಾಡಿತ್ತು. ಅಣ್ಣಿಗೇರಿ ಹುಸೇನಸಾಬರು ಕಲಾವಿದರ ಪೈಕಿ ಸ್ವಂತ ಥೇಟರ ಹೊಂದಿದ್ದ ಕೆಲವೇ ಕೆಲವರಲ್ಲಿ ಇವರೂ ಒಬ್ಬರು. ವ್ಯಾಪಾರಿ ಉದ್ದೇಶದಿಂದ ಥೇಟರ ಕಟ್ಟಿದವರು ಹಲವರು ಇದ್ದರೂ ಕೇವಲ ರಂಗಕಲೆಯ ಗೀಳಿಗಾಗಿ ಸ್ವಂತ ಥೇಟರ ಕಟ್ಟಿಸಿದ ಹಿರಿಮೆ ಅಣ್ಣಿಗೇರಿ ಹುಸೇನಸಾಬರದು. ಇವರ ಕಂಪನಿಯ ಮೂಲಕ "ಮಹಾರಾಣಿ ಕಿತ್ತೂರ ಚನ್ನಮ್ಮ" "ಸೋಹಂ" ಮುಂತಾದ

ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಆ ಕಾಲಕ್ಕೆ ಪ್ರವೇಶ ದರ ನೆಲ ನಾಲ್ಕು ಆಣೆ, ಛಾಪಿ ಎಂಟು ಆಣೆ, ಬಾಜುಕಟ್ಟೆ ಹನ್ನೆರಡು ಆಣೆ, ಕುರ್ಚಿ ಒಂದು ರೂಪಾಯಿ. ಹೀಗೆ ನಾಲ್ಕು ಕ್ಲಾಸುಗಳಲ್ಲಿ ಪ್ರವೇಶವಿತ್ತು.

ಇಂತಹವರ ಮೊಮ್ಮಗನಾದ ಅಬ್ದುಲ್ಲಸಾಬನಿಗೆ ಕಲಾ ಸರಸ್ವತಿಯ ಒಲುಮೆ ರಕ್ತಗತವಾಗಿಯೇ ಬಂದಿತ್ತು. ಅದೇ ಅವರ ಹೆತ್ತವರ ಆತಂಕಕ್ಕೆ ಕಾರಣವಾಗಿತ್ತು. ಏಕೆಂದರೆ, ನಾಟಕದವರ ಪಡಿಪಾಟಲು ಏನೆಂಬುದನ್ನು ಅಬ್ದುಲ್ಲಸಾಬರ ತಾಯಿ ವಜೀರಬಿ ಅವರು ತಮ್ಮ ತಂದೆಯವರ ಮೂಲಕ ಕಣ್ಣಾರೆ ಕಂಡಿದ್ದರು. ನಾಟಕದವರಿಗೆ ಹೊತ್ತುಗೊತ್ತಿನ ಪರಿವೇ ಇರುವುದಿಲ್ಲ, ನನ್ನವರು ತಮ್ಮವರೆಂಬ ಮೋಹ, ಮಮಕಾರಗಳಿರುವುದಿಲ್ಲ, ಜಗತ್ತು ಮಲಗಿದಾಗ ಕಣ್ಣುಬಿಡುವ ಇವರು ಜಗತ್ತು ಜಾಗೃತವಾಗುತ್ತಿದ್ದಂತೆಯೇ ಕಣ್ಣುಮುಚ್ಚಿ ನಿದ್ರೆಗೆ ಜಾರುವ ಇವರ ಲೋಕವಿರೋಧಿ ನಡೆ ಸಹಜವಾಗಿಯೇ ಅಬ್ದುಲ್ಲಸಾಬರ ತಂದೆ-ತಾಯಿಗಳನ್ನು ವಿಚಲಿತರನ್ನಾಗಿ ಮಾಡಿತ್ತು. ಎಷ್ಟೊ ಸಲ ಮನೆಯಲ್ಲಿನ ಶುಭ ಸಮಾರಂಭಗಳು ಕಷ್ಟದ ಸಂಧರ್ಭಗಳಲ್ಲಿ ತಮ್ಮ ತಂದೆ ಸಕಾಲಕ್ಕೆ ಮನೆಗೆ ಬರುತ್ತಲೆ ಇರಲಿಲ್ಲ. ನಾಳೆ ಮಗನೂ ಹೀಗೇ ಆದರೆ ಏನು ಗತಿ? ಎಂಬ ಪ್ರಶ್ನೆ ಅವರನ್ನು ಕಾಡುವುದು ಸಹಜವೇ ಆಗಿತ್ತು. ಅದು ಅಲ್ಲದೆ ತನ್ನ ತಂದೆಯೊಂದಿಗೆ ಕಂಪನಿ ಸಹವಾಸದಲ್ಲಿದ್ದಾಗ ಎಷ್ಟೋಸಲ ಅರೆ ಹೊಟ್ಟೆ ಊಟಕ್ಕೂ ತೊಂದರೆಯಾಗುತ್ತಿತ್ತು. ಒಂದೊಂದು ಸಲ ಉಪವಾಸವೂ ಗತಿಯಾಗುತ್ತಿತ್ತು. ಇಂತದ್ದರಲ್ಲಿ ಮಗ ತನ್ನ ಅಜ್ಜನ ನೆರಳನ್ನೇ ಹಿಂಬಾಲಿಸಿದರೆ, ಅವನ ಭವಿಷ್ಯದ ಗತಿಏನು? ಎಂಬ ಚಿಂತೆ ಥಾಲಾಯತ್ ಮನೆತನದವರೆಲ್ಲರನ್ನೂ ಕಾಡುತ್ತಿತ್ತು ಆದರೆ, ಅಬ್ದುಸಾಬರ ತಂದೆ-ತಾಯಿಗಳು ಅವರಿಗೆ ಜನ್ಮಕೊಟ್ಟ ಮಾತ್ರಕ್ಕೆ ಹಣೆಬರಹ ಬದಲಿಸಲು ಸಾಧ್ಯವೇ? ಅವರ ಕಿಶೋರ ಪ್ರತಿಭೆ ಹಂತ ಹಂತವಾಗಿ ಪಕ್ವಗೊಳ್ಳುತ್ತಾ ಪ್ರೌಢಾವಸ್ಥೆಗೆ ಹೆಜ್ಜೆ ಇರಿಸಿಯೇ ಬಿಟ್ಟಿತು.

ಈಗ ಅಬ್ದುಲ್ಲಸಾಬರಿಗೆ ೧೪ರ ಪ್ರಾಯ ೧೯೫೩ ರಲ್ಲಿ ೮ನೇಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಇವರ ಮೈಯಲ್ಲಿ ಹರಿಯುತ್ತಿದ್ದ, ಅಜ್ಜನ ರಕ್ತಗುಣ ಆಗಲೇ ತನ್ನ ಕೈಚಳಕ ತೋರಿಸಲು ಅಣಿಯಾಗುತ್ತಿತ್ತು. ತಾಯಿಯೊಂದಿಗೆ ಅಣ್ಣಿಗೇರಿಗೆ ಅಜ್ಜನಮನೆಗೆ ಹೋದಾಗ ಮನೆಯ ಪಕ್ಕದಲ್ಲಿಯೆ ಇದ್ದ ಅಜ್ಜನ ಖುದಾಒಂದ ನಾಟಕ ಥೇಟರಿನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಾಡಿನ ಖ್ಯಾತನಾಮರ ನಾಟಕಗಳನ್ನು ನೋಡುವ ಖಯಾಲಿ ಸುರುವಾಗಿ ಅದು ಕಾಯಿಲೆಯೋಪಾದಿಯಲ್ಲಿ ಅಬ್ದುಲ್ಲಸಾಬರನ್ನು ಆಪೋಶನ ತೆಗೆದುಕೊಂಡುಬಿಟ್ಟಿತು. ಬಹುಷ ಅಬ್ದುಲ್ಲಸಾಬರು ಇದೆ ಸಂಧರ್ಭದಲ್ಲಿ ನಿರ್ಧರಿಸುತ್ತಾರೆ. ನಾನೂ ರಂಗಕಲಾವಿದನಾಗಬೇಕು ಎಂದು. ಅವರ ಈ ನಿರ್ಧಾರ ಥಾಲಾಯತ್ ಕುಟುಂಬದವರಿಗೆ ಶಾಪವಾದರೆ, ಕನ್ನಡ ರಂಗಭೂಮಿಗೆ ವರವಾಗಿ ಪರಿಣಮಿಸುತ್ತದೆ.

ಅಜ್ಜನ ಕಲಾರಕ್ತ ಮೊಮ್ಮಗನ ಮೈಯಲ್ಲಿ ಪ್ರವಾಹಿಸುತ್ತಾ ಅವರಲ್ಲೊಬ್ಬ ರಂಗಕಲಾವಿದ ರೂಪುಗೊಂಡು ಸೂಕ್ತ ಅವಕಾಶಕ್ಕಾಗಿ ಚಡಪಡಿಸತೊಡಗುತ್ತಾನೆ.

ಅಜ್ಜನ ಥೇಟರಿನಲ್ಲಿ ನೋಡಿದ ಆ ಕಾಲದ ವೈವಿಧ್ಯಮಯ ಸಂಗೀತ ನಾಟಕಗಳು ಬಾಲ್ಯದಲ್ಲಿಯೇ ಸಂಗೀತದ ಗುಂಗನ್ನು ಹೊಗಿಸಿಕೊಂಡಿದ್ದ ಅಬ್ದುಲ್ಲಸಾಬರಿಗೆ ಹುಚ್ಚು ಹಿಡಿಸಿಬಿಡುತ್ತವೆ. ಯಾವಾಗ ತಾನೂ ಈ ಕಲಾವಿದರಂತೆ ಮುಖಕ್ಕೆ ರಂಗು ಬಳಿದುಕೊಂಡು ರಂಗಕ್ಕೆ ಧುಮುಕಿಯೇನೊ, ಯಾವಾಗ ತಾನೂ ಉತ್ತಮ ಪಾತ್ರ ಮಾಡಿ ಪ್ರೇಕ್ಷಕರಿಂದ ಶಹಾಭಾಶಗಿರಿ ಪಡೆದೇನೊ ಎಂಬ ಕೀರ್ತಿದಾಹ ಅಬ್ದುಲ್ಲಸಾಬರಿಗೆ ತೀವ್ರವಾಗುತ್ತದೆ. ಅಂತರ್ಯದಲ್ಲಿ ಪುಟಿಯುತ್ತಿದ್ದ, ಕಲಾಸಕ್ತಿ ಸ್ಫೋಟಗೊಂಡು ಹೊರಬರಲು ಕಾತರಿಸುತ್ತದೆ. ಅದರ ತೀವ್ರತೆಗೆ ತತ್ತರಿಸಿದ ಅಬ್ದುಲ್ಲಸಾಬರು ತಮ್ಮ ೧೫ ನೇ ವಯಸ್ಸಿನಲ್ಲಿ ಮನೆಯಲ್ಲಿ ಯಾರಿಗೂ ಹೇಳದೆ ಮನೆ ಬಿಟ್ಟು ಹೋಗಿ ದೂರದ ಗಂಗಾವತಿ ಕ್ಯಾಂಪಿನಲ್ಲಿ ಮುಕ್ಕಾಂ ಮಾಡಿದ್ದ ಆ ಕಾಲದ ಶ್ರೇಷ್ಠ ರಂಗ ಕಲಾವಿದ ದೊಡ್ಡವಾಡ ಸಿದ್ಧಯ್ಯಸ್ವಾಮಿಗಳ ಸಮಾಜ ವಿಕಾಸ ನಾಟ್ಯ ಸಂಘದಲ್ಲಿ ೧೯೫೫ ರಲ್ಲಿ ಪ್ರಥಮ ಬಾರಿಗೆ ರಂಗಕಿಂಕರರಾಗಿ ಪ್ರವೇಶ ಪಡೆಯುತ್ತಾರೆ.

ಕುಡಿ ಚಾಚಲು ಕಾತರಿಸುತ್ತಿದ್ದ ಬಳ್ಳಿಗೆ ಬೊಡ್ಡೆಯ ಆಸರೆ ಸಿಕ್ಕಂತಾಗುತ್ತದೆ. ಕನ್ನಡದ ವೃತ್ತಿ ರಂಗಭೂಮಿ ಎಂಬ ಬೃಹತ್ ಸಿಹಿ ನೀರ ಸರೋವರಕ್ಕೆ ಮತ್ತೊಂದು ತೊರೆ ಪ್ರವೇಶ ಮಾಡುತ್ತದೆ. ರಂಗ ಭೂಮಿಯ ಕೀರ್ತಿಯನ್ನು ಹೆಚ್ಚಿಸುತ್ತದೆ.

# ಸಮಾಜವಿಕಾಸ ನಾಟ್ಯಸಂಘ, ದೊಡ್ಡವಾಡ

ಹೌದು ರಂಗ ಮಾಧ್ಯಮದ ಮೂಲಕ ಸಮಾಜದ ವಿಕಾಸವನ್ನೆ ಮುಖ್ಯ ಗುರಿಯಾಗಿರಿಸಿಕೊಂಡು ರೂಪುಗೊಂಡ ಕಲಾಸಂಘವಿದು. ಇದರ ರೂವಾರಿಗಳು ಕನ್ನಡ ರಂಗಭೂಮಿಯ ಹೆಸರಾಂತ ಕಲಾವಿದ ಸಿದ್ಧರಾಜ ಉಜ್ಜೈನಿಮಠ. ಇವರು ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಕರ್ಲವಾಡದವರು ಇವರ ಅಣ್ಣ ಚನ್ನಬಸಯ್ಯ ಹಿರೇಮಠ. ತಮ್ಮಂದಿರಾದ ಮಾಲಿಂಗಯ್ಯಾ, ಶಿವಪುತ್ರಯ್ಯ ಮುಂತಾದವರು. ಚನ್ನಬಸಯ್ಯ ಹಿರೇಮಠರೂ ರಂಗಭೂಮಿಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದರು. ಚನ್ನಬಸಯ್ಯನವರದು ಎಂಥ ಅಪೂರ್ವ ಪ್ರತಿಭಾ ಪೂರ್ಣತೆ ಇತ್ತೊ, ಅವರ ಖಾಸಗಿ ಬದಕು ಅಷ್ಟೇ ದಾರುಣ ಸ್ಥಿತಿಯಲ್ಲಿತ್ತು.

ಅವರ ಕೊನೆ ಹುಬ್ಬಳ್ಳಿಯಲ್ಲಿ ಅಶೋಕನಗರ ಗೇಟ ಹತ್ತಿರ ರೈಲುಕಂಬಿಗೆ ತಲೆಕೊಟ್ಟು ಮುಕ್ತಾಯಗೊಂಡದ್ದು ನಮ್ಮ ರಂಗಭೂಮಿ ಕಲಾವಿದರ ದುಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಅವರ ಅಂತಿಮ ಯಾತ್ರೆಯಲ್ಲಿ ಅಂದಿನ ಎಂ.ಪಿ ಪ್ರೊ ಆಯ್.ಜಿ ಸನದಿ ಅವರೊಂದಿಗೆ ಪಾಲ್ಗೊಂಡು ಆ ವಿಧಿ ವಿಧಾನಗಳನ್ನು ಪೂರೈಸುವ ಜವಾಬ್ದಾರಿ ನನ್ನ ಮೇಲೆ ಬಿದ್ದದ್ದು, ಕಂಬಿಗೆ ತಲೆಕೊಡುವ ಕೊನೆ ಘಳಿಗೆಯಲ್ಲಿ ಅವರು ನಾಡೋಜ ಡಾ॥ ಪಾಟೀಲ ಪುಟ್ಟಪ್ಪನವರಿಗೆ ಪ್ರೊ. ಸನದಿಯವರಿಗೆ ಬರೆದು ತಮ್ಮ ಜೇಬಿನಲ್ಲಿ ಇಟ್ಟುಕೊಂಡಿದ್ದ ಅವರ ಬದುಕಿನ ಕೊನೆಯ ಪತ್ರ ಸನದಿಯವರ ಮೂಲಕ ನನ್ನ ಕೈ ಸೇರಿದ್ದು, ಅದನ್ನು ನಾನು ಛಾಯಾಪ್ರತಿ ಮಾಡಿಸಿ ಇಟ್ಟುಕೊಂಡು ಈ ಸಂದರ್ಭದಲ್ಲಿ ಅದು ಪ್ರಕಟಣೆ ಕಾಣುತ್ತಿರುವುದು ಇದೆಲ್ಲವು ವಿಧಿಯ ವೈಚಿತ್ರ್ಯದಂತೆ

ನನಗೆ ಭಾಸವಾಗುತ್ತದೆ. ಆ ಪತ್ರದ ಯಥಾ ವಿವರ ಈ ಕೆಳಗಿನಂತೆ ಇದೆ.

"ನನ್ನ ಜೀವನ ಬಿಡಿಸಲಾಗದ ಒಗಟು. ಕೆಲವೊಂದು ದಿನ ಹಳ್ಳಿಕೇರಿಯೊಂದಿಗೆ (ಹಳ್ಳಿಕೇರಿ ಗುದ್ಲೆಪ್ಪನವರು) ಚಳವಳಿಮ ಆಮೇಲೆ ಭೂಗತ, ಮುಂದೆ ನಾಟಕ ಕಂಪನಿ ಸೇರಿ ಪರಿಣಿತ ಕಲಾವಿದನಾಗಿ ರಾಜ್ಯ ಮತ್ತು ಅಕಾಡೆಮಿಯಿಂದ ಪ್ರಶಸ್ತಿ ಇಷ್ಟೆಲ್ಲಾ ಪಡೆದಾಗಲೂ ಮನಸ್ಸಿಗೆ ಶಾಂತಿ, ನೆಮ್ಮದಿ, ಈಗ ನನಗೆ ಬಹುದೂರ. ಪರಾಧೀನ ಪಶುಸಮಾನ ಭಾರ ಭೂಮಿಗೆ ಈ ಜೀವ. ಬಂಧು ಬಳಗ ವಿಧಿ ಕೈಕೊಟ್ಟಾಗ ದೂರ ಬಹುದೂರ ಸರಿಯುತ್ತಾರೆ. ಮಾಡುವುದೇನು. ತನ್ನ ತಾನರಿಯದ ಮಾನವನಿಗೆ ದುಖಃ ತಪ್ಪುವುದಿಲ್ಲ, ದಾರಿ ಕಾಣದೆ ಕೊನೆಗೊಂದು ದಿನ ರೈಲು ಬಾಯಿಗೆ..... ಈ ವಿಷಯ ಸಂಬಂಧಪಟ್ಟ ಪೊಲೀಸ ಆಫೀಸರ್, ಪತ್ರಕರ್ತರಾದ ಪಾಟೀಲ ಪುಟ್ಟಪ್ಪನವರಿಗೆ, ಪ್ರೊ ಆಯ್.ಜಿ ಸನದಿಯವರಿಗೂ (ಸಂಸದ) ಸುದ್ದಿ ಮುಟ್ಟಿಸಿರಿ ಇದು ನನ್ನ ಬಯಕೆ"

# ನೊಂದ ಬೆಂದ ಹಿರೇಮಠ

ಈ ರೀತಿ ರಂಗಕಲಾವಿದರ ಬದುಕು ದುರಂತದಲ್ಲಿ ಮುಕ್ತಾಯವಾದದ್ದು ಇದೆ ಮೊದಲಲ್ಲ ಹಾಗೂ ಕೊನೆಯದೂ ಅಲ್ಲ. ಅಷ್ಟರ ಮಟ್ಟಿಗೆ ನಮ್ಮ ಕಲಾವಿದರು ಶಾಪಗ್ರಸ್ಥರೆ. ಎಲ್ಲೊ ಒಬ್ಬಿಬ್ಬರು ಡಾ॥ ಏಣಗಿ ಬಾಳಪ್ಪನವರತಂಹ ಭಾಗ್ಯಶಾಲಿಗಳು ಅಪರೂಪಕ್ಕೆ ಎಂಬಂತೆ ನಮಗೆ ಸಿಗುತ್ತಾರೆ. ಕಲಾವಿದರ ಈ ದುರಂತ ಬದುಕಿಗೆ ಅವರ ಸ್ವಯಂಕೃತ ಅಪರಾದವೂ ಅನೇಕ ಬಾರಿ ಕಾರಣವಾಗಿರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಪ್ರತಿಭಾ ದೃಷ್ಟಿಯಿಂದ ಇವರು ಧರೆಗಿಳಿದ ಗಂಧರ್ವರೆ. ಅದರಲ್ಲಿ ಎರಡುಮಾತಿಲ್ಲ, ಅಂಥಾ ಗಂಧರ್ವರ ಗರಡಿಗೆ ನಮ್ಮ ಅಬ್ದುಲ್ಲಸಾಬ ಢಾಲಾಯತರು ೧೯೫೪ ರಲ್ಲಿ ಪ್ರವೇಶ ಪಡೆಯುತ್ತಾರೆ. ಅದು ನಮ್ಮ ರಂಗಭೂಮಿಯ ಪಾಲಿಗೆ ಅಕ್ಷರಶ: ಅಮೃತಘಳಿಗೆ.

ಇಂತಹ ಗಂಧರ್ವ ಗರಡಿಯ ಪೈಲ್ವಾನರು ದೊಡ್ಡವಾಡ ಕಂಪನಿಯ ಒಡೆಯರಾದ ಶ್ರೀ ಸಿದ್ದಯ್ಯನವರು ಉಜ್ಜಯಿನಿಮಠ ಇವರು ಈ ಮೊದಲು ಹುಲಿಮನೆ ಸೀತಾರಾಮ ಶಾಸ್ತ್ರೀಗಳ ಕಂಪನಿ, ಬ್ಯಾಡಗಿ ಕವಲಿ ಚನ್ನಬಸಪ್ಪನವರ ಕಂಪನಿಯಲ್ಲಿ ಕಲಾಸೇವೆ ಸಲ್ಲಿಸಿ ಪಳಗಿರುತ್ತಾರೆ. ಅಜಾನುಬಾಹು, ಆಕರ್ಷಕ ವ್ಯಕ್ತಿತ್ವ, ಅಪ್ರತಿಮ ಸಂಗೀತಸಾಧನೆಯಿಂದ ಅಂದಿನ ಸಂಗೀತ ನಾಟಕಗಳ ತೂಕವನ್ನು ಹೆಚ್ಚಿಸಿದ್ದ ಸಿದ್ದಯ್ಯ ಸ್ವಾಮಿಗಳು ತಾವು ದತ್ತಕ ಹೋಗಿದ್ದ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ದೊಡ್ಡವಾಡ ಗ್ರಾಮದ ಕಲಾ ಪ್ರೇಮಿಗಳ ಸಹಕಾರದಿಂದ ಸಮಾಜ ವಿಕಾಸ ನಾಟ್ಯಸಂಘವನ್ನು ಹುಟ್ಟು ಹಾಕುತ್ತಾರೆ. ಈ ಕಂಪನಿಯ ಎಲ್ಲ ನಾಟಕಗಳಲ್ಲಿ ಅಬ್ದುಲ್‌ಸಾಬರು ಸ್ತ್ರೀ

ಪಾತ್ರಗಳ ಮೂಲಕ ರಂಗಸೇವೆ ಪ್ರಾರಂಭ ಮಾಡುತ್ತಾರೆ. ಏಕೆಂದರೆ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುವ ಅನಿವಾರ್ಯತೆ ಇದ್ದ ಆ ಕಾಲಘಟ್ಟದಲ್ಲಿ ಅಬ್ದುಲ್‌ಸಾಬರ ಸುಕೋಮಲಶರೀರ, ಆಕರ್ಷಕ ಮುಖ, ಲಾಲಿತ್ಯಪೂರ್ಣವಾದ ನಾದಮಾಧುರ್ಯ ಸ್ತ್ರೀ ಪಾತ್ರಗಳಿಗೆ ಅವರನ್ನು ಬಹುಬೇಗ ಒಗ್ಗಿಸಿಬಿಡುತ್ತದೆ. ತಮ್ಮ ಸುಮನೋಹರವಾದ ನಟನಾ ಕೌಶಲ್ಯದಿಂದ ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆರೆಹಿಡಿಯುತ್ತಾ ಇವರ ಅಭಿನಯವನ್ನು ಕಂಡ ಸ್ತ್ರೀಯರೂ ನಾಚುವಂತೆ ಅಭಿನಯಿಸುವ ಭಾವಭಂಗಿ ಬಹುಬೇಗ ಇವರನ್ನೊಬ್ಬ ನುರಿತ ಕಲಾವಿದರನ್ನಾಗಿಸಿ ಬಿಡುತ್ತದೆ. ಸಿದ್ದಯ್ಯಸ್ವಾಮಿಗಳ ಸಾಂಗತ್ಯದಲ್ಲಿ ಸಂಗೀತದ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗುತ್ತದೆ. ಎಳೆ ವಯಸ್ಸಿನ ಮುದ್ದಾದ ಹುಡುಗನ ಕಲಾಸಕ್ತಿಯನ್ನು ಕಂಡ ಸಿದ್ದಯ್ಯ ಸ್ವಾಮಿಗಳು ತುಂಬಾ ಪ್ರೀತಿಯಿಂದ ಸಂಗೀತ ಶಿಕ್ಷಣವನ್ನು, ಪಾತ್ರವೈವಿಧ್ಯವನ್ನು ಧಾರೆಯರೆಯುತ್ತಾರೆ. ೧೯೩೪ ರಿಂದ ೧೯೩೯ ರವರೆಗೆ ನಿರಂತರ ಐದು ವರ್ಷಗಳ ಕಾಲ ಸಿದ್ದಯ್ಯ ಸ್ವಾಮಿಗಳ ಕಂಪನಿಯಲ್ಲಿ ರಂಗಭೂಮಿಯ ಎಲ್ಲ ಡಾವು ಪೇಚುಗಳನ್ನು ಕರಗತ ಮಾಡಿಕೊಂಡು ಪ್ರಬುದ್ಧ ಕಲಾವಿದರಾಗಿ ಹೊರಹೊಮ್ಮುತ್ತಾರೆ ಅಬ್ದುಲ್‌ಸಾಬರು. ತಲೆಯಲ್ಲಿನ ಕೂದಲು ಸ್ತ್ರೀ ಪಾತ್ರಕ್ಕೆ ಪೂರಕವಾಗಿ ೧೫ ಇಂಚು ಉದ್ದ ಬೆಳೆದು ಶಾರೀರಿಕವಾಗಿ ಇವರು ಅರ್ಧ ಮಹಿಳೆಯೇ ಆಗಿ ಬಿಡುತ್ತಾರೆ.

ಇತ್ತ ಮನೆಯಲ್ಲಿ ಮಗನನ್ನು ಕಳೆದುಕೊಂಡ ಧಾವಂತದಲ್ಲಿ ಘಾಲಾಯತರ ಕುಟುಂಬ ತೀವ್ರ ಆತಂಕಕ್ಕೆ ಒಳಗಾಗಿರುತ್ತದೆ. ಅಣ್ಣಿಗೇರಿ ಹುಸೇನಸಾಬರ ಮಕ್ಕಳು ಅಂದರೆ ಅಬ್ದುಲ್‌ಸಾಬರ ಸೋದರಮಾವಂದಿರು ಕರ್ನಾಟಕದ ಎಲ್ಲಕಡೆಗೂ ಹುಡುಕುತ್ತಾರೆ ಕೊನೆಗೆ ದೊಡ್ಡವಾಡ ಕಂಪನಿಯಲ್ಲಿ ಒಬ್ಬ ಹುಡುಗ ಸ್ತ್ರೀ ಪಾತ್ರ ಮಾಡುತ್ತಿದ್ದಾನೆ ಎಂಬ ವಿಷಯ ತಿಳಿದು ನೇರವಾಗಿ ದೊಡ್ಡವಾಡ ಕಂಪನಿ ಕ್ಯಾಂಪ ಮಾಡಿದ ಊರಿಗೆ ಹೋಗಿ ಹುಡುಗನನ್ನು ಗುರುತಿಸುತ್ತಾರೆ. ಆದರೆ ಅಬ್ದುಲ್‌ಸಾಬರು ಬೇಗ ಗುರುತು ಸಿಗದೇ ನಿರಾಶರಾಗುತ್ತಾರೆ. ಏಕೆಂದರೆ ಅಬ್ದುಲ್‌ಸಾಬರು ಕಟ್ಟಿದ ತುರುಬು ಈತ ನಮ್ಮ ಹುಡುಗನಲ್ಲಾ ಎಂಬ ತೀರ್ಮಾನಕ್ಕೆ ಬರಲು ಕಾರಣವಾಗುತ್ತದೆ. ಅಬ್ದುಲ್‌ಸಾಬರಿಗೆ ತಮ್ಮ ಸೋದರ ಮಾವಂದಿರ ಗುರುತು ಸಿಕ್ಕರೂ ಸುಮ್ಮನಿದ್ದುಬಿಡುತ್ತಾರೆ. ಏಕೆಂದರೆ ಎಲ್ಲಿ ಗುರುತು ಹಿಡಿದರೆ ತನ್ನನ್ನು ಊರಿಗೆ ಕರೆದೊಯ್ದು ಬಿಡುತ್ತಾರೋ ಎಂಬ ಆತಂಕ ಅವರಿಗೆ. ಕೊನೆಯಲ್ಲಿ ಕಂಪನಿಯಲ್ಲಿದ್ದ ಯಾರೋ ಒಬ್ಬರಿಂದ ನಿಜಸಂಗತಿ ತಿಳಿದು ಅಬ್ದುಲ್‌ಸಾಬರನ್ನು ದರ ದರನೇ ಎಳೆದೊಯ್ದು ರೈಲು ಹತ್ತಿಸಿಕೊಂಡು ಅಣ್ಣಿಗೇರಿಗೆ ಬಂದು ಇಳಿಯುತ್ತಾರೆ. ಅಲ್ಲಿ ಇಳಿದದ್ದೇ ತಡ ಅವರು ಮಾಡಿದ ಮೊಟ್ಟಮೊದಲ ಕೆಲಸವೇ ಅಬ್ದುಲ್‌ಸಾಬರ ತುರುಬು ಕಟ್ಟ್...

ಅಂತೂ ಕಳೆದು ಹೋಗಿದ್ದ ಮನೆಯ ಹಿರಿಯ ಮಗ ಮನೆಗೆ ಹತ್ತಿದನೆಂಬ ಸಂಭ್ರಮದಲ್ಲಿ ಮನೆಯವರಿದ್ದರೆ ಇತ್ತ ಅಬ್ದುಲ್‌ಸಾಬನಿಗೆ ನೀರಿನಿಂದ ಹೊರಗೆಸೆದ ಮೀನಿನ ಸ್ಥಿತಿ ನಿರ್ಮಾಣವಾಗುತ್ತದೆ. ಐದಾರು ವರ್ಷ ನಿರಂತರ ಬಣ್ಣಹಚ್ಚಿ ತನ್ನ ಪ್ರತಿಭೆಯಿಂದ ಪ್ರೇಕ್ಷಕರನ್ನು ದಂಗು ಬಡಿಸಿದ್ದ ಅಬ್ದುಲ್‌ಸಾಬ ಒಂಥರಾ ಮನೋರೋಗಿಯಂತಾಗಿ ಬಿಡುತ್ತಾನೆ. ನಿತ್ಯ ಸಹಸ್ರಾರು ಪ್ರೇಕ್ಷಕರನ್ನು ತನ್ನ ಸುಕೋಮಲ

ವದನಾರವಿಂದದಿಂದ ಹುಚ್ಚೆಬ್ಬಿಸಿ ಸುಮಧುರ ಸಂಗೀತದಿಂದ ಸಮ್ಮೋಹನಗೊಳಿಸುತ್ತಿದ್ದ ಅಬ್ದುಲ್‌ಸಾಬನ ಮುಖ ನಿಸ್ತೇಜವಾಗಿ ಬಿಡುತ್ತದೆ. ಕಣ್ಣುಗಳು ಗುಳಿ ಬೀಳುತ್ತವೆ, ಮುಖ ವಿಕಾರವಾಗುತ್ತದೆ ಮಗನ ದುಸ್ಥಿತಿಯನ್ನು ನೋಡಲಾಗದೆ ಹೆತ್ತವರು ಮನೆಯಲ್ಲಿ ಉಪಕಸುಬಾಗಿ ಬಂದಿದ್ದ ಟೇಲರಿಂಗ್ ಕಲಿಯಲು ಒತ್ತಾಯಿಸುತ್ತಾರೆ ಅವರ ಒತ್ತಾಯದ ಮೇರೆಗೆ ಯಾಂತ್ರಿಕವಾಗಿ ಟೇಲರ್ ಯಂತ್ರದ ಪೆಡಲ್ ತುಳಿಯುತ್ತಿದ್ದರೂ ಅವನ ಚಿತ್ತ ಬಿಟ್ಟು ಬಂದ ನಾಟಕ ಕಂಪನಿಯತ್ತಲೇ ಇರುತ್ತದೆ ಹಿಂಡನಗಲಿದ ಸಲಗ ತನ್ನ ವಿಂದ್ಯವ ನೆನೆದು ಕಣ್ಣೀರು ಸುರಿಸುವಂತೆ ಅಬ್ದುಲ್‌ಸಾಬನು ತನ್ನ ವಂಚಿತ ರಂಗಬದುಕಿನ ಸುವರ್ಣ ಘಳಿಗೆಯನ್ನು ನೆನೆಯುತ್ತಾ ಕಣ್ಣೀರು ಸುರಿಸುತ್ತಾನೆ. ನಿತ್ಯ ಸಾವಿರಾರು ಜನರಿಗೆ ಮನರಂಜನೆಯ ರಸದೂಟವನ್ನು ಬಡಿಸುತ್ತಿದ್ದ ತಾನು ಕೇವಲ ನಿತ್ಯ ಒಂದೆರಡು ರೂಪಾಯಿ ಸಂಪಾದನೆಗಾಗಿ ಅಂಗಿ ಚಡ್ಡಿ ಹೊಲಿಯುವ ದರ್ಜಿಯಾಗಿ ಕೆಲಸ ಮಾಡಬೇಕೆ? ಎಂದು ತನ್ನ ಸ್ಥಿತಿಯನ್ನು ತಾನೇ ಹಳಿದುಕೊಳ್ಳುತ್ತಾ ದಿನ ದೂಡುತ್ತಾನೆ.

ಹಾಗೂ ಹೀಗೂ ಮಾಡಿ ಐದಾರು ತಿಂಗಳು ಗತಿಸುತ್ತವೆ. ಭೋರ್ಗರೆವ ಪ್ರವಾಹಕ್ಕೆ ತಡೆ ಗೋಡೆ ಕಟ್ಟಿ ತಡೆದು ನಿಲ್ಲಿಸಲು ಸಾಧ್ಯವೇ? ಅಬ್ದುಲ್‌ಸಾಬರ ಕಲಾ ತುಡಿತ ಹುಚ್ಚೆದ್ದು ಕೆರಳಿ ತನ್ನ ಮೂಲ ಗುರಿಯನ್ನರಸಿ ಮರಳಿ ರಂಗಭೂಮಿಯ ದಾರಿ ಹಿಡಿಯುತ್ತದೆ, ಆಗ ಸಿಕ್ಕಿದ್ದೆ.... ಮೃಡದೇವ ಗವಾಯಿಗಳ ಅಮರೇಶ್ವರ ನಾಟ್ಯಸಂಘ.

# ಮೃಡದೇವ ಗವಾಯಿಗಳ ಅಮರೇಶ್ವರ ನಾಟ್ಯಸಂಘ

ಮೃಡದೇವ ಗವಾಯಿಗಳು ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿಗಳ ನೆಚ್ಚಿನ ಶಿಷ್ಯರಲ್ಲೊಬ್ಬರು. ಉಭಯಗಾಯನಾಚಾರ್ಯ ಪಂಡಿತ ಪುಟ್ಟರಾಜ ಕವಿ ಗವಾಯಿಗಳು, ಪದ್ಮಭೂಷಣ ಡಾ॥ ಬಸವರಾಜ ರಾಜಗುರು, ಪಂಡಿತ ಸಿದ್ದರಾಮ ಜಂಬಲದಿನ್ನಿಯವರ ಸಮಕಾಲೀನ ಸಂಗೀತ ವಿದ್ವಾಂಸರು. ಅಜಾನುಬಾಹು, ಆಕರ್ಷಕ ವ್ಯಕ್ತಿತ್ವದ ಮೃಡದೇವ ಗವಾಯಿಗಳ ಕೈ ಬೆರಳುಗಳು ಹಾರ್ಮೋನಿಯಂ ಮೇಲೆ ಆಡುತ್ತಿದ್ದರೆ ಅಲ್ಲೊಂದು ಗಂಧರ್ವಲೋಕವೇ ಸೃಷ್ಟಿಯಾಗಿ ಬಿಡುತ್ತಿತ್ತಂತೆ ಅಷ್ಟು ದಪ್ಪನ್ನ ಬೆರಳುಗಳು ಸೂರ್‌ಮೇಲೆ ನರ್ತಿಸುವಾಗ ಬೆರಳುಗಳೇ ಕಾಣುತ್ತಿರಲಿಲ್ಲವಂತೆ ಅವರ ಬೆರಳ ತುದಿಯ ಮೋಡಿಯಲ್ಲಿ ಮೂಡಿ ಬರುತ್ತಿದ್ದ ಸುಸ್ವರದ ನಾದಮಾಧುರ್ಯ ಅಲ್ಲೊಂದು ಕಿನ್ನರಲೋಕವನ್ನೆ ಸೃಷ್ಟಿಸಿಬಿಡುತ್ತಿತ್ತಂತೆ. ಕೇಳುಗರನ್ನು ಅವರಿಗರಿಯದಂತೆ ಆಪೋಶನ ತಗೆದುಕೊಂಡು ಗಾನಲೀನರನ್ನಾಗಿಸಿ ಬಿಡುತ್ತಿತ್ತಂತೆ ಅಂಥ ಘನವಿದ್ವಾಂಸರ ಒಡೆತನದಲ್ಲಿದ್ದ ಅಮರೇಶ್ವರ ನಾಟ್ಯಸಂಘಕ್ಕೆ ಬರುತ್ತಾರೆ ಅಬ್ದುಲ್‌ಸಾಬರು. ಗವಾಯಿಗಳಿಗೆ ಬಯಸಿದಬಳ್ಳಿ ಹುಡುಕದೆ ಕಾಲ್ತೊಡಕಿದಂತಾಗುತ್ತದೆ. ಏಕೆಂದರೆ ಅವರಿಗೂ ಕಂಪನಿಯಲ್ಲಿ ಸಮರ್ಥ ಕಲಾವಿದರ ಕೊರತೆ ತಲೆದೊರಿರುತ್ತದೆ.

ಗವಾಯಿಗಳ ಕಂಪನಿಗೆ ಅಬ್ದುಲ್‌ಸಾಬರ ಪ್ರವೇಶ ಮತ್ತೊಂದು ಸುವರ್ಣ ಘಳಿಗೆ. ಏಕೆಂದರೆ ಅಬ್ದುಲ್‌ಸಾಬರಿಗೆ ಸಂಗೀತ ಕಲಿಯುವ ಹುಚ್ಚು ತೀವ್ರವಾಗುತ್ತದೆ ತಾನು ಕೇವಲ ನಟನಾಗಬಾರದು ಹಾಡುನಟನಾಗಬೇಕು ಎಂದು ಆ ಕಾಲದ ರಂಗದ ಅಗತ್ಯಗಳನ್ನು ಬಹುಬೇಗ ಅರ್ಥ ಮಾಡಿಕೊಂಡಿರುತ್ತಾರೆ. ಏಕೆಂದರೆ ಈಗಿನಂತೆ

ಆಗ ಯಾರದೋ ಶರೀರದ ಅಭಿನಯಕ್ಕೆ ಇನ್ನಾರೋ ಶಾರೀರ ನೀಡುವ "ಹಿನ್ನೆಲೆ" ಪದ್ಧತಿಯ ಕಾಲ ಅದಾಗಿರಲಿಲ್ಲ. ಒಬ್ಬ ನಟ ಅಥವಾ ನಟಿ ಪರಿಪೂರ್ಣರಾಗಬೇಕಾದರೆ ಅವರಿಗೆ ಸಂಗೀತಜ್ಞಾನ ಇರಲೇಬೇಕಾಗಿತ್ತು. ಹಾಡಲಾರದವ ನಟನಲ್ಲ ಎಂಬ ಪ್ರತೀತಿ ಆ ಕಾಲದಲ್ಲಿತ್ತು. ಪಾತ್ರಧಾರಿ ತನಗಿರುವ ಹಾಡನ್ನು ತಾನೇ ಹಾಡಬೇಕಿತ್ತು ಏಕೆಂದರೆ ೫೦-೬೦ರ ದಶಕ ಸಂಗೀತ ರಂಗಭೂಮಿಯ ಕೊನೆಯ ಘಟ್ಟ. ೬೦ರ ದಶಕದಿಂದೀಚೆಗೆ ಸಂಗೀತ ನಾಟಕಗಳು ಕ್ರಮೇಣ ಕಡಿಮೆಯಾಗುತ್ತಾ ಸಾಹಿತ್ಯ ಪ್ರಧಾನ ನಾಟಕಗಳು ತೀವ್ರಗೊಂಡವು. ಈಗಂತೂ ಸಾಹಿತ್ಯವೂ ಇಲ್ಲ, ಸಂಗೀತವೂ ಇಲ್ಲ ಕೇವಲ ಹಾಸ್ಯ,ಅಪಹಾಸ್ಯ ಮತ್ತು ಹಾಸ್ಯಾಸ್ಪದ. ಎಲ್ಲೋ ಒಂದೆರಡು ಕಂಪನಿಗಳಲ್ಲಿ ಗುಣಮಟ್ಟದ ನಾಟಕಗಳು ಪ್ರದರ್ಶನಗೊಂಡಿದ್ದರೆ ಅದು ಇಂದಿನ ಪ್ರೇಕ್ಷಕರ ಪುಣ್ಯವೇ ಎನ್ನಬೇಕು.

ಗವಾಯಿಗಳ ಕಂಪನಿಯಲ್ಲಿ ಅಬ್ದುಲ್‌ಸಾಬರಿಗೆ ಹಸಿದ ಕರುವಿನ ಮುಂದೆ ಹಸಿರು ಹುಲ್ಲು ಚೆಲ್ಲಿದಂತಾಗಿತ್ತು. ಏಕೆಂದರೆ ಕಂಪನಿಯಲ್ಲಿದ್ದ ಎಲ್ಲ ಕಲಾವಿದರೂ ಸಂಗೀತ ಬಲ್ಲವರೇ. ಇದಕ್ಕೆ ಕಳಸವಿಟ್ಟಂತೆ ಗವಾಯಿಗಳ ಪರಿಪೂರ್ಣ ವಿದ್ವತ್‌ಪ್ರಭೆ, ಕೇಳಬೇಕೆ? ಮೊದಲೇ ಸಂಗೀತದ ಗುಂಗಿನಲ್ಲಿದ್ದ ಅಬ್ದುಲ್‌ಸಾಬರಿಗೆ ಅದರ ನಿಸೆ ಏರಲು ತಡವಾಗಲಿಲ್ಲ. ಆದರೆ ನೋಡಿದೊಡನೆ, ಕೇಳಿದೊಡನೆ ಒಲಿದುಬಿಡಲು ಸಂಗೀತವೇನು ಮಕ್ಕಳಾಟವೆ? ಅದಕ್ಕೆ ಶ್ರದ್ಧೆಬೇಕು, ತಪಸ್ಸುಬೇಕು, ಎಲ್ಲಕ್ಕೂ ಮಿಗಿಲಾಗಿ ಗುರುವಿನ ಗುಲಾಮನಾಗುವ ಕಿಂಕರ ಭಾವ ಭಕ್ತಿ ಬೇಕು. ಇತ್ತು, ಇದೆಲ್ಲವೂ ಅಬ್ದುಲ್‌ಸಾಬರಲ್ಲಿತ್ತು. ಈ ಹಿಂದೆ ಇದ್ದ ದೊಡ್ಡವಾಡ ಸಿದ್ದಯ್ಯನವರ ಹತ್ತಿರವೇ ಕರಗತ ಮಾಡಿಕೊಂಡಿದ್ದ ಗುರು ಸೇವಾಭಾವ ಮೃಡದೇವ ಗವಾಯಿಗಳಲ್ಲಿಯೂ ಮುಂದುವರೆದಿತ್ತು. ಗುರುಗಳ ಬಟ್ಟೆಬರೆಗಳನ್ನು ಒಗೆದು ಮಡಿಮಾಡುವುದು, ಅವರ ಬೇಕುಬೇಡಗಳನ್ನು ಪೂರೈಸಿಕೊಡುವುದು, ಕಲಾಸೇವೆಗೈದು ದಣಿದ ಅವರ ಕೈ ಕಾಲುಗಳನ್ನು ಒತ್ತುವುದು, ಸ್ನಾನ ಪೂಜಾದಿಗಳಿಗೆ ಅವರ ಆಜ್ಞೆಯ ಮೇರೆಗೆ ಕಿಂಚಿತ್ತೂ ಕೊರತೆ ಆಗದಂತೆ ಕಿಂಕರಭಾವದಿಂದ ಸೇವೆಗೈದಫಲವಾಗಿ ಸಂಗೀತದಲ್ಲಿ ಪರಮಪಾಂಡಿತ್ಯವನ್ನು ಗಳಿಸಲಾಗದಿದ್ದರೂ ಅಂದಿನ ರಂಗಭೂಮಿಗೆ ಅಗತ್ಯವಿರುವಷ್ಟು ಸಂಗೀತ ವಿದ್ಯೆಯನ್ನು ಸಂಪಾದಿಸುವಲ್ಲಿ ಅಬ್ದುಲ್‌ಸಾಬರು ಯಶಸ್ವಿಯಾಗುತ್ತಾರೆ.

ದೊಡ್ಡವಾಡ ಸಿದ್ದಯ್ಯನವರು, ಮೃಡದೇವ ಗವಾಯಿಗಳವರು, ಹಿರೇಕುಂಬಿ ಬಸಯ್ಯನವರು, ಚಿದಂಬರ ಕೃಷ್ಣ ಜೋಷಿಯವರು ಮುಂತಾದವರ ಸಂಗೀತಮಯ ಸತ್ಸಂಗದಲ್ಲಿ ಪರಿಪೂರ್ಣ ಕಲಾವಿದರಾಗಿ ಪರಿಪಕ್ವಗೊಳ್ಳುತ್ತಾರೆ ನಮ್ಮ ಅಬ್ದುಲ್‌ಸಾಬ ಅಣ್ಣಿಗೇರಿ.

ಹೌದು ಅಬ್ದುಲ್‌ಸಾಬ ಥಾಲಾಯತ ಎಂದಾಗಬೇಕಿದ್ದ ಹೆಸರು ಅಬ್ದುಲ್‌ಸಾಬ ಅಣ್ಣಿಗೇರಿ ಎಂದು ಏಕಾಯಿತೆಂದರೆ ತಂದೆಯ ಮನೆತನದ ಕೃಷಿ ಸಂಸ್ಕಾರವನ್ನು ಬದಿಗೊತ್ತಿ ಅಜ್ಜನ ಮನೆತನದ ರಂಗಸಂಸ್ಕೃತಿಯನ್ನು ಮೈಮೇಲೆ ಎಳೆದುಕೊಂಡಿದ್ದರಿಂದಲೇ ಇರಬೇಕು. ಅಬ್ದುಲ್‌ಸಾಬರು ಅಬ್ದುಲ್‌ಸಾಬ ಅಣ್ಣಿಗೇರಿ

ಎಂಬ ಹೆಸರಿಂದಲೇ ರಂಗಭೂಮಿಗೆ ಚಿರಪರಿಚಿತರಾದವರು. ಏಕೆಂದರೆ ಆ ಕಾಲದ ಎಲ್ಲ ಪ್ರಸಿದ್ಧ ನಾಟಕ ಕಂಪನಿಯವರು ಅಣ್ಣಿಗೇರಿ ಹುಸೇನ ಸಾಬರಿಂದ ಉಪಕೃತರಾದವರೇ. ಮಳೆಗಾಲ ಬಂತೆಂದರೆ ಎಲ್ಲ ಕಂಪನಿಯ ಮಾಲೀಕರಿಗೂ ನೆನಪಾಗುತ್ತಿದ್ದುದೇ ಅಣ್ಣಿಗೇರೆ ಹುಸೇನಸಾಬರ ಸುಭದ್ರವಾದ ಖಿದಾಒಂದ ನಾಟಕ ಥೇಟರ್. ಕಲೆಕ್ಷನ್ ಆದರೆ ಹುಸೇನಸಾಬರಿಗೆ ಬಾಡಿಗೆ ಸಿಗುತ್ತಿತ್ತು ಇಲ್ಲವಾದರೇ ತಾವೇ ಖರ್ಚು ಕೊಟ್ಟು ಕಂಪನಿಯನ್ನು ಮುಂದಿನೂರಿಗೆ ಸಾಗಹಾಕಬೇಕಾಗುತ್ತಿತ್ತು ಇದಕ್ಕೆ ಹುಸೇನಸಾಬರು ಕಳೆದುಕೊಂಡ ಆಸ್ತಿ ನಿಕ್ಕಿ ಳ ಕೂರಿಗೆ ಹೊಲ. ಅಬ್ದುಲ್‌ಸಾಬರು ದೊಡ್ಡವಾಡ ಕಂಪನಿಗೆ ಗವಾಯಿಗಳ ಕಂಪನಿಗೆ ಪ್ರವೇಶ ಪಡೆಯುವಾಗ ತಾನು ಅಣ್ಣಿಗೇರಿ ಹುಸೇನಸಾಬರ ಮೊಮ್ಮಗ ಎಂದು ಹೇಳಿಯೇ ಪ್ರವೇಶ ಪಡೆಯುತ್ತಿದ್ದರಂತೆ. ಅಜ್ಜನ ಹೆಸರು ಹೇಳಿದೊಡನೆ ಅವರಿಗೆ ತುಸು ಹೆಚ್ಚಿನ ಗೌರವಾದರಗಳು ಸಿಗುತ್ತಿದ್ದವಂತೆ. ೧೯೫೫ ರಿಂದ ೧೯೬೧ ರವರೆಗೆ ೭ ವರ್ಷಗಳಲ್ಲಿ ಪರಿಪೂರ್ಣ ಕಲಾವಿದರಾಗಿ ರೂಪುಗೊಂಡ ಅಬ್ದುಲ್‌ಸಾಬರಿಗೆ ಈಗ ಅಜ್ಜನ ಹೆಸರಿನ ಹಂಗು ಬೇಕಿರಲಿಲ್ಲ ಆದರೂ ಅಣ್ಣಿಗೇರಿ ಎಂಬ ಅಜ್ಜನ ಊರಿನ ಹೆಸರಿನ ಹಂಗು ಬಿಡಲಿಲ್ಲ. ತಮ್ಮ ಮೂಲ ಊರು ಮುಳಗುಂದವನ್ನು ಮರೆತು ಅಜ್ಜನ ಊರಿನ ಹೆಸರಿನಿಂದಲೇ ಪ್ರಸಿದ್ಧರಾದರು ನಮ್ಮ ಅಬ್ದುಲ್‌ಸಾಬ ಅಣ್ಣಿಗೇರಿ.

೨೪ ವಯಸ್ಸಿನ ಅಬ್ದುಲ್‌ಸಾಬರಿಗೆ ಗವಾಯಿಗಳ ಕಂಪನಿಯಲ್ಲಿ ಎಲ್ಲ ನಾಯಕ ಪಾತ್ರಗಳೇ ಸಿಗತೊಡಗಿದವು. ಎತ್ತರದ ನಿಲುವು, ಸ್ಫುರದ್ರೂಪ ಮುಖ, ಸುಶ್ರಾವ್ಯವಾದ ಹಾಡುಗಾರಿಕೆಯಿಂದ ವಹಿಸಿದ ಎಲ್ಲ ಪಾತ್ರಗಳಲ್ಲೂ ಯಶಸ್ಸು ಸಾಧಿಸುತ್ತಾರೆ. ನಂತರ ಕೆಲಕಾಲ ಯರಗುಪ್ಪಿಯ ಲಿಂಗರಾಜ ಭುವಾ ಅವರಲ್ಲಿ ಮರೋಳದ ರಾಮಭುವಾ ಅವರಲ್ಲಿ ಸಂಗೀತ ಶಿಕ್ಷಣವನ್ನು ಮುಂದುವರಿಸಿ ಸಂಗೀತದ ಹೆಚ್ಚಿನ ವ್ಯಾಸಂಗದಲ್ಲಿ ತಲ್ಲೀನರಾಗುತ್ತಾರೆ.

## ಶ್ರೀ ಲಿಂಗರಾಜಬುವಾ ಯರಗುಪ್ಪಿ

ಹೌದು, ಈ ಹೆಸರು ನಮ್ಮ ಸಂಗೀತ ರಂಗಭೂಮಿ ಹಾಗೂ ಶಾಸ್ತ್ರೀಯ ಸಂಗೀತ ಕ್ಷೇತ್ರಗಳೆರಡರಲ್ಲಿಯೂ ಪರಿಗಣನೆಯ ಹೆಸರು. ಕುಂದಗೋಳ ತಾಲೂಕಿನ ಅನರ್ಘ್ಯ ಸಂಗೀತ ರತ್ನಗಳಾದ ಸವಾಯಿ ಗಂಧರ್ವರು, ಹೂಗಾರ ಫಕ್ಕೀರಪ್ಪನವರು, ಡಾ ॥ ಬಸವರಾಜ ರಾಜಗುರುಗಳು, ಪಂಡಿತ ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ ಹಾಗೂ ಪಂಡಿತ ಲಿಂಗರಾಜಬುವಾ ಯರಗುಪ್ಪಿ ಇವರು ಕುಂದಗೋಳ ತಾಲೂಕಿನ ಕೀರ್ತಿಯನ್ನು ಬೆಳಗಿಸಿದ ಪಂಚ ಮಹಾ ಗಂಧರ್ವರು. ಡಾ ॥ ಮಲ್ಲಿಕಾರ್ಜುನ ಮನಸೂರ, ಡಾ॥ ಗಂಗೂಬಾಯಿ ಹಾನಗಲ್ಲ, ಭಾರತರತ್ನ ಪಂಡಿತ ಭೀಮಸೇನ ಜೋಷಿ, ಡಾ॥ ರಾಜಗುರುಗಳ ಸಮಕಾಲಿನ ಸಮರ್ಥ ಸಂಗೀತ ದಿಗ್ಗಜರು ಈ ಲಿಂಗರಾಜಬುವಾ ಅವರು. ಇವರ ಬದುಕಿನ ಅರ್ಧ ಆಯುಷ್ಯ ರಂಗಭೂಮಿಗೆ ಮೀಸಲಿದ್ದರೆ, ಉಳಿದರ್ಧ

ಆಯುಷ್ಯ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಕ್ಕೆ ಮೀಸಲಾಗಿತ್ತು. ನಲವಡಿ ಶ್ರೀಕಂಠ ಶಾಸ್ತ್ರಿಗಳ ಹೇಮರೆಡ್ಡಿ ಮಲ್ಲಮ್ಮ, ಜಗಜ್ಯೋತಿ ಬಸವೇಶ್ವರ, ಉಳವಿ ಚನ್ನಬಸವೇಶ್ವರ ಮುಂತಾದ ಅನೇಕ ನಾಟಕಗಳ ರಂಗಗೀತೆಗಳಿಗೆ ಚಾಲ್‌ಮಾಡಿದ ಕೀರ್ತಿ ಡಾ॥ ಮಲ್ಲಿಕಾರ್ಜುನ ಮನಸೂರ ಹಾಗೂ ಯರಗುಪ್ಪಿ ಲಿಂಗರಾಜಬುವಾ ಅವರಿಗೆ ಸಲ್ಲುತ್ತದೆ. ಶ್ರೀಕಂಠಶಾಸ್ತ್ರೀಗಳ ಅಮೋಘ ಗೀತಸಾಹಿತ್ಯಕ್ಕೆ ಕರ್ಣಾನಂದಕರವಾದ ರಾಗಸಯೋಜನೆ ಮಾಡಿದ ಮನಸೂರ, ಲಿಂಗರಾಭುವಾ, ರಾಜಗುರು, ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಅರ್ಜುನಸಾ ನಾಕೋಡ ಅವರ ಕಂಠಸಿರಿಯಲ್ಲಿ ಈ ನಾಟ್ಯ ಗೀತೆಗಳು ಅಮರತ್ವವನ್ನು ಪಡೆದುಕೊಂಡು ಇಂದಿಗೂ ಸಂಗೀತ ಪ್ರೇಮಿಗಳ ಕಿವಿಗೆ ನಾದವರ್ಷವನ್ನು ಸ್ಫುರಿಸುತ್ತವೆ.

ಇವರಂತೆ ಮರೋಳದ ರಾಮ ಬುವಾ ಅವರೂ ಈ ನಾಡುಕಂಡ ಅಪ್ರತಿಮ ಸಂಗೀತ ಸಾಧಕರು ಮಾತ್ರವಲ್ಲ, ಮೈಸೂರ ಮಹಾರಾಜರಿಂದ ರಾಜ ಸನ್ಮಾನಕ್ಕೆ ಪಾತ್ರರಾದವರು. ಇಂತಹ ಅತಿರಥ ಮಹಾರಥ ಸಂಗೀತಗಾರರಲ್ಲಿ ಸಂಗೀತ ಸಂಸ್ಕಾರ ಪಡೆದ ಅಬ್ದುಲ್ಲಸಾಬ ಅಣ್ಣಿಗೇರಿ ಯವರು ಕಾರಣಾಂತರಗಳಿಂದ ಕೆಲಕಾಲ ಊರಲ್ಲಿಯೇ ಉಳಿಯುತ್ತಾರೆ. ಆಗ ದೊಡ್ಡವಾಡ ಸಿದ್ಧಯ್ಯನವರ ಕಂಪನಿಯಲ್ಲಿ ಇವರ ಕಲಾಪ್ರೌಢಿಮೆಯನ್ನು ಕಂಡ ದೊಡ್ಡವಾಡದ ಕಲಾಪ್ರೇಮಿಗಳು "ಏನು ಅಬ್ದುಲ್ಲಸಾಬರೇ ನಿಮ್ಮಂತವರೇ ಹೀಗೆ ಮನೆ ಹಿಡಿದು ಕುಳಿತರೆ ನಮ್ಮ ರಂಗಭೂಮಿಯ ಗತಿ ಏನು? ಏಳಿರೀ ನಮ್ಮ ಸಿದ್ಧಯ್ಯ ಸ್ವಾಮಿಗಳಂತೆ ನಿಮಗೂ ಒಂದು ನಾಟಕ ಕಂಪನಿಯನ್ನು ಮಾಡಿಕೊಡುತ್ತೇವೆ. ಎಂದು ಮತ್ತೆ ಊರು ಬಿಡಿಸಿಬಿಡುತ್ತಾರೆ. ಮಲ್ಲಿಗೆ ಪರಿಮಳ ಮುಚ್ಚಿಡಲು ಸಾಧ್ಯವೇ? ೧೯೬೧ ರಲ್ಲಿ ಅಂದಿನ ಸಮಯದಲ್ಲಿ ಸ್ತ್ರೀ ಪಾತ್ರಗಳಲ್ಲಿ ಅತ್ಯಂತ ದೊಡ್ಡ ಹೆಸರು ಮಾಡಿದ್ದ ದೊಡ್ಡವಾಡ ಫಕ್ರುಸಾಬ, ಕಿತ್ತೂರ ನಿಂಗಪ್ಪ, ಪಟ್ಟದಕಲ್ಲ ಶಿವಪುತ್ರಯ್ಯ, ಅಬ್ದುಲ್ಲಸಾಬ ಅಣ್ಣಿಗೇರಿ ಇವರ ನಿರ್ವಹಣೆಯಲ್ಲಿ ತಲೆಎತ್ತಿ ಹಲವಾರು ಮೌಲಿಕ ಸಂಗೀತ ನಾಟಕಗಳನ್ನು ಪ್ರದರ್ಶಿಸಿ ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ಕಂಪನಿಯೇ.

## ಶ್ರೀ ಶಾಂತೇಶ್ವರ ನಾಟ್ಯ ಸಂಘ, ದೊಡ್ಡವಾಡ

೧೯೬೪ನೇ ಇಸ್ವಿ ಶಾಂತೇಶ್ವರ ನಾಟ್ಯಸಂಘ ಬೆಳಗಾವಿಯ ಹತ್ತಿರದ ಹಿರೇಬಾಗೇವಾಡಿಯಲ್ಲಿ ಮುಕ್ಕಾಂ ಹೂಡಿರುತ್ತದೆ. ನಾಟಕಗಳು ವೈಭವದಿಂದ ಪ್ರದರ್ಶನವಾಗುತ್ತಿರುತ್ತವೆ. ಥೇಟರ ಮುಂದೆ ನಿಂತಿದ್ದ ೧೫ ವರ್ಷದ ಬಾಲಕನನ್ನು ಒಬ್ಬ ೨೫-೨೬ ವರ್ಷದ ಯುವತಿ ಬಂದು ಈ ಕಂಪನಿಯ ಮಾಲೀಕರಾರು ಎಂದು ಕೇಳುತ್ತಾಳೆ ಆ ಬಾಲಕ ನಾವೇ ಮಾಲೀಕರು? ನಾನು ಮಾಲೀಕರ ತಮ್ಮ ಎಂದು ಹೇಳುತ್ತಾನೆ. ಆತನ ಹೆಸರು ಮಹಮ್ಮದಲಿ ಢಾಲಾಯತ್. ಹೌದು ಈತ ಅಬ್ದುಲ್ಲಸಾಬರ ತಮ್ಮ. ಅಣ್ಣಿಗೇರಿ ಹುಸೇನಸಾಬರ ರಂಗಾಸಕ್ತರಕ್ತ ಅಬ್ದುಲ್ಲಸಾಬರು ಮಾತ್ರವೇಅಲ್ಲ, ಅವರ ತಮ್ಮನ ಮೈಯಲ್ಲಿಯೂ ಹರಿಯುತ್ತಿರುತ್ತದೆ. ಉಳಿದ

ಮೂವರು ಬಚಾವಾದದ್ದು ಢಾಲಾಯತ್ ಮನೆತನದವರ ಪುಣ್ಯ. ಮಹಮ್ಮದಲಿ ಅದೇತಾನೇ ರಂಗಾಸಕ್ತಿ ಬೆಳಸಿಕೊಂಡು ಅಣ್ಣನ ನಾಟಕ ಕಂಪನಿ ಬೆನ್ನು ಹತ್ತಿರುತ್ತಾನೆ. ಇಂತಹ ಹುಡುಗನನ್ನು ಆ ಯುವತಿ ಮಾಲೀಕರಾರೆಂದು ಕೇಳಿದಾಗ "ನೀವಾರು? ಏಕೆ ಬಂದರೀ?" ಎಂದು ಕೇಳುತ್ತಾನೆ.

"ನನ್ನ ಹೆಸರು ಶಾಂತವ್ವ ನಾನು ನಾಟಕಕಂಪನಿಯಲ್ಲಿ ಸೇವೆ ಸಲ್ಲಿಸಬೇಕೆಂಬ ಇಚ್ಛೆಯಿದೆ" ಎಂದಾಗ ರಂಗಭೂಮಿಗೆ ಮಹಿಳೆಯರ ಅಗತ್ಯದ ವಿಷಯ ಅರಿತ ಗುಣಗ್ರಾಹಿ ಬಾಲಕ ಮಹಮ್ಮದಲಿ ಸ್ಫುರದ್ರೂಪದ ಸುಂದರ ಯುವತಿಯನ್ನು ಥೇಟರ ಒಳಗೆ ಕರೆದೊಯ್ದು ದೊಡ್ಡವಾಡ ಫಕ್ರುಸಾಬ ಅವರಿಗೆ ವಿಷಯ ತಿಳಿಸುತ್ತಾನೆ.

"ಯಾರಮ್ಮ ನೀನು? ನಾಟಕ ಕಂಪನಿ ಸೇರುವ ಉದ್ದೇಶವೇನು?" ಎಂದು ಪ್ರಶ್ನಿಸುತ್ತಾರೆ.

"ನಾನೊಬ್ಬ ನೊಂದ ಯುವತಿ. ನನಗೆ ನಾಟಕದಲ್ಲಿ ಪಾತ್ರ ಮಾಡುವ ಇಚ್ಛೆ ಇದೆ. ಅವಕಾಶ ಕೊಡಿ" ಎಂದು ಕೇಳಿದಾಗ ಸ್ತ್ರೀಪಾತ್ರದಲ್ಲಿ ಸ್ತ್ರೀಯರನ್ನೂ ನಾಚಿಸುವಂತೆ ಪರಕಾಯ ಪ್ರವೇಶ ಮಾಡಿ ಅಭಿನಯಿಸುತ್ತಿದ್ದ ದೊಡ್ಡವಾಡ ಫಕ್ರುಸಾಬರು ಕಾಲದ ಅಗತ್ಯತೆಯನ್ನು ಮನಗಂಡು ಆ ಯುವತಿಗೆ ಕಂಪನಿಯಲ್ಲಿ ಇರಲು ಅವಕಾಶ ಕಲ್ಪಿಸುತ್ತಾರೆ. ಏಕೆಂದರೆ, ಅಷ್ಟರಲ್ಲಾಗಲೇ ಬೇರೆ ಕಂಪನಿಯಲ್ಲಿ ಮಹಿಳೆಯರ ಪ್ರವೇಶದಿಂದಾಗಿ ಅದೇ ಒಂದು ವಿಶೇಷ ಆಕರ್ಷಣೆಯಾಗಿ ನಾಟಕಕ್ಕಿಂತಲೂ ನಾಟಕದಲ್ಲಿ ಅಭಿನಯಿಸುವ ಮಹಿಳಾಮಣಿಗಳ ಸಹಜ ಅಭಿನಯಕ್ಕೆ ಮರುಳಾದ ಪ್ರೇಕ್ಷಕವರ್ಗ ಕಂಪನಿಗಳನ್ನು ಗಲ್ಲಾಪೆಟ್ಟಿಗೆಯಲ್ಲಿ ಶ್ರೀಮಂತಗೊಳಿಸಿರುತ್ತದೆ. ಈ ಅಂಶವನ್ನು ಮನಗಂಡ ಫಕ್ರುಸಾಬರು ಆ ಯುವತಿಗೆ ಕಂಪನಿಯಲ್ಲಿರಲು ತಿಳಿಸಿ ಅವಳಿಗೆ ಒಂದು ಕೋಣೆಯ ವ್ಯವಸ್ಥೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಪಿ.ಬಿ. ಧುತ್ತರಗಿಯವರ 'ಮಲಮಗಳು' ನಾಟಕದಲ್ಲಿ ಮಂದಾಕಿನಿ ಪಾತ್ರವನ್ನು ಕೊಟ್ಟು ಆ ಪಾತ್ರವನ್ನು ಕಲಿಸಲು ಅಬ್ದುಲ್ಲಸಾಬರನ್ನು ನೇಮಿಸುತ್ತಾರೆ. ಆ ಯುವತಿಯ ಪೂರ್ಣ ಹೆಸರೇ... ಬೆಳಗಾವಿ ಶಾಂತಾ!

ಹೌದು! ಈ ಬೆಳಗಾವಿ ಶಾಂತಾ ತನ್ನ ಹಿಂದಿನ ಬದುಕಿನ ದಾರುಣ ಪರಿಸ್ಥಿತಿಯಲ್ಲಿ ನೊಂದು, ಬೆಂದು ನಾಟಕ ಕಂಪನಿಗೆ ಬೆನ್ನುಬೀಳುತ್ತಾಳೆ. ನೊಂದು ಬದುಕು ಕೊನೆ ಮಾಡಿಕೊಳ್ಳಬೇಕೆಂದವರೆಲ್ಲರಿಗೂ ಗಂಗೆ ತನ್ನ ಒಡಲಲ್ಲಿ ಸ್ಥಳ ನೀಡಿ ಅಪ್ಪಿಕೊಳ್ಳುವಂತೆ ಬದುಕಿನ ಅನಿವಾರ್ಯತೆಯಲ್ಲಿ ಬೆಂದು ಬೆಂಡಾದವರಿಗೆ ಬದುಕು ನೀಡಿದ ಹೆಗ್ಗಳಿಕೆ ನಮ್ಮ ವೃತಿರಂಗಭೂಮಿ ಯದು ಈ ಶಾಂತಾನಂಥ ಅದೆಷ್ಟೋ ಹತಬಾಗ್ಯರು ರಂಗಭೂಮಿಯ ಪ್ರವೇಶದಿಂದ ಮರುಜನ್ಮ ಪಡೆದಿದ್ದಾರೆ. ಕೀರ್ತಿ ಶಿಖರಕ್ಕೇರಿದ್ದಾರೆ.

ಬೆಳಗಾವಿ ಶಾಂತಾಳಿಗೆ ಇನ್ನೂ ಉಕ್ಕುವ ಯೌವನವಿತ್ತು, ಯುವ ಮನಸ್ಸುಗಳನ್ನು ಸೂಜಿಗಲ್ಲಿನಂತೆ ಸೆರೆಹಿಡಿಯುವ ಆಕರ್ಷಕ ಮೈಮಾಟವಿತ್ತು. ಕೊರತೆಯೊಂದೇ... ಅದು ರಂಗಭೂಮಿಯ ಅನುಭವದ್ದು. ಸುತ್ತಲೂ ಅತಿರತ ಮಹಾರಥ ಕಲಾವಿದರಿದ್ದಾಗ ಆ ಕೊರತೆ ನೀಗುವುದೆಷ್ಟರ ಕೆಲಸ, ಕೆಲ ದಿನಗಳಲ್ಲಿಯೇ ಬೆಳಗಾವಿ ಶಾಂತಾ ಸಮರ್ಥ

ನಟಿಯಾಗುವ ಎಲ್ಲ ಲಕ್ಷಣಗಳನ್ನೂ ತೋರಹತ್ತಿದಳು. ಫಕ್ರುಸಾಬ, ಅಬ್ದುಲ್ಲಸಾಬರಿಂದ ರಂಗಭೂಮಿಯ ಎಲ್ಲ ಆಯಾಮಗಳ ಕುರಿತೂ ತರಬೇತಿ ಪಡೆದಳು. ಕೆಲನಾಟಕಗಳಲ್ಲಿ ಅಭಿನಯಿಸಿ ಸೈ ಅನ್ನಿಸಿಕೊಂಡದ್ದೂ ಆಯಿತು. ಆದರೆ ಒಂಟಿಯುವತಿ ಲೋಕಾಪವಾದ ಸಹಜ, ಫಕ್ರುಸಾಬ ಕಿತ್ತೂರ ನಿಂಗಪ್ಪ ಚಿಂತೆಗೀಡಾದರು. ನಾವು ಮೂವರೂ ವಿವಾಹಿತರು. ಆದರೆ ಒಂಟಿಜೀವಿ ಯಾರು? ಅಬ್ದುಲ್ಲಸಾಬ ಅಣ್ಣಿಗೇರಿ, ಈ ವಿಷಯ ತಲೆಯಲ್ಲಿ ಬಂದದ್ದೆ ತಡಾ ಕಿತ್ತೂರ ನಿಂಗಪ್ಪ ಅಬ್ದುಲ್ಲಸಾಬನಿದ್ದ ಮನೆಗೆ ಹೋಗುತ್ತಾನೆ. ವಿಷಯ ಮಂಡಿಸುತ್ತಾನೆ. ರೋಗಿ ಬಯಸಿದ ಆಹಾರವನ್ನೆ ವೈದ್ಯನೂ ಹೇಳಿದಂತಾಗುತ್ತದೆ.

ಏಕೆಂದರೆ, ಅಷ್ಟರಲ್ಲಾಗಲೇ ೨೮ನೇ ವರ್ಷಕ್ಕೆ ಕಾಲಿಟ್ಟ ಅಬ್ದುಲ್ಲಸಾಬ ಅಣ್ಣಿಗೇರಿ ವಯೋಸಹಜವಾದ ವಾಂಛೆಗಳ ಪೀಡನೆಗೆ ಒಳಗಾಗಿ ಪರಿತಪ್ಪಿಸುತ್ತಿರುತ್ತಾನೆ. ಶಾಂತಾಳಿಗೆ ರಂಗ ತರಬೇತಿ ನೀಡುವಾಗ ಪರಸ್ಪರರ ಮನಸ್ಸು ವಿಚಲಿತವಾಗಿ ಅನುರಕ್ತಿಗೆ ಹಾತೊರೆಯುತ್ತಾರೆ. ಆಯಿತು. ನಾನು ಶಾಂತಳನ್ನು ನನ್ನ ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತೇನೆಂದು ತಿಳಿಸುತ್ತಾನೆ. ಇತ್ತ ಶಾಂತಾಳಿಗೆ ಸ್ವರ್ಗ ಮೂರೇ ಗೇಣು. ಬದುಕಿನ ಭೀಕರತೆಯಿಂದ ಜರ್ಜರಿತಳಾಗಿದ್ದ ಬೆಳಗಾವಿ ಶಾಂತಾ, ಅಬ್ದುಲ್ಲಸಾಬರ ಮನಪ್ರವೇಶ ಮಾಡುತ್ತಾಳೆ. ತಾರಾಜೋಡಿಯೊಂದರ ವಿಲಾಸಿ ಬದುಕು ನಿರ್ವಿಘ್ನವಾಗಿ ಸಾಗುತ್ತದೆ.

ಈ ಮಹಿಳೆ ಕಂಪನಿಗೆ ಬಂದಾಗ ಬಾಗೇವಾಡಿ ಪೊಲೀಸ ಅಧಿಕಾರಿಗೆ ಇವಳನ್ನು ನೋಡಿ ಸಂಶಯ ಬರುತ್ತದೆ. ಇವಳು ನಾಟಕ ಕಂಪನಿಯವಳು ಕಂಡಂತೆ ಕಾಣುತ್ತಿಲ್ಲ ಎಂದು ಶಂಕಿಸಿ ಕಲಾವಿದರನ್ನು ತನ್ನ ಪೊಲೀಸ ದರ್ಪದಲ್ಲಿ ಆ ಮಹಿಳೆ ಯಾರು? ಎಲ್ಲಿಯವಳು? ಎಂದೆಲ್ಲಾ ಕೇಳುತ್ತಾನೆ. ಆಗ ಕಂಪನಿಯಲ್ಲಿದ್ದ ಅಬ್ದುಲ್ಲಸಾಬರ ಸೋದರಮಾವ ಮಹಮ್ಮದಸಾಬ (ತಾಯಿಯ ತಮ್ಮ) ಹೇ ಅವಳು ನನ್ನ ಅಳಿಯನ ಹೆಂಡತಿ ನನ್ನ ಸೊಸೆಯೆಂದು ಹೇಳಿಬಿಡುತ್ತಾನೆ. ಪೊಲೀಸರ ಕೈಯಿಂದ ಪಾರಾಗಲು ಹೇಳಿದ ಈ ಮಾತೇ ನಿಜವಾಗಿ ಬಿಡುತ್ತದೆ. ಶಾಂತಾ ಅಬ್ದುಲ್ಲಸಾಬರ ರಂಗ ಸಂಗಾತಿಯಾಗುತ್ತಾಳೆ. ತಾರಾ ಪತ್ನಿಯಾಗುತ್ತಾಳೆ.

ರಂಗಭೂಮಿಯ ಮೇಲೆ ಅಬ್ದುಲ್ಲಸಾಬ ಶಾಂತಾರ ಜೋಡಿ ಪ್ರಣಯಭರಿತ ಸನ್ನಿವೇಶದಲ್ಲಿ ಪ್ರೇಕ್ಷಕರಿಗೆ ಹುಚ್ಚು ಹಿಡಿಸಿಬಿಡುತ್ತದೆ. ನಾಟಕಕ್ಕೆ ಬಂದಿದ್ದ ಯುವಕ ಯುವತಿಯರಿಗೆ ತಮಗರಿವಿಲ್ಲದಂತೆ ಮೈಯಲ್ಲಿ ಕಾವೇರತೊಡಗುತ್ತದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಮುಕ್ಕಾಂ ಮಾಡುತ್ತಾ ವೈವಿಧ್ಯಮಯ ನಾಟಕಗಳನ್ನು ಪ್ರದರ್ಶಿಸುತ್ತಾ ದೊಡ್ಡವಾಡ ಶಾಂತೇಶ್ವರ ನಾಟ್ಯ ಸಂಘವು ೧೯೬೧ ರಿಂದ ೧೯೬೬ ರ ವರೆಗೆ ನಡೆದು ಮಳೆಗಾಲದಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿ ಕೊಪ್ಪಳ ಜಿಲ್ಲೆ ಕವಲೂರಿನಲ್ಲಿ ನಿಂತುಹೋಗುತ್ತದೆ. ನಂತರ ಈ ತಾರಾ ಜೋಡಿ ೧೯೬೭ರಲ್ಲಿ ಖ್ಯಾತ ಪೆಂಟರ್ ಬೈಲಹೊಂಗಲದ ಅಪ್ಪುರಾಜರ ಕಂಪನಿ ಹಾಗೂ ಆ ನಂತರ ಬಿಜಾಪುರದ ವ್ಹಿ.ಎಸ್. ಪಾಟೀಲರ ಕಂಪನಿಗೆ ಬರುತ್ತಾರೆ. ಇಲ್ಲಿಯೂ ಕೂಡಾ ದೊಡ್ಡ ದೊಡ್ಡ ಕಲಾವಿದರ ದಂಡೇ ಇರುತ್ತದೆ.

ಬೆಳವಣಿಕಿ ಸಂಗಪ್ಪನವರ ಕಂಪನಿಯಿಂದ ಬಂದ ಅಮ್ಮಣಗಿ ದೇಸಾಯಿ, ನೀಲಾ ದಂಪತಿಗಳು, ಎಚ್.ಕೆ. ರೆಡ್ಡಿ, ಶಾಬುದ್ದಿನ್, ಹಾವೇರಿ ಬಾಬಾಣ್ಣ, ಹಾವೇರಿ ಸಣ್ಣಪ್ಪ, ದೊಡ್ಡವಾಡ ಶಿವಪುತ್ರಯ್ಯ, ಕರ್ಜಗಿ ಶಂಕ್ರಪ್ಪ, ಪುಷ್ಪಾ ದಂಪತಿಗಳು, ಬೆಳವಡಿ ವಿರಕ್ತಯ್ಯಸ್ವಾಮಿ, ಸಣ್ಣಂಗಿ ಲಲಿತಮ್ಮ, ಹಾಡುನಟಿ ಇಳಕಲ್ಲ ಶಾಂತಾ, ಸಂಗೀತ ಪಟುಗಳಾದ ಮದರಿ ವೀರಯ್ಯಸ್ವಾಮಿ, ಹೊನ್ನಿಗನೂರು ಸಂಗಣ್ಣ, ಬೈಲಹೊಂಗಲ ಕಾಶಿಮಸಾಬ ಮುಂತಾದ ದಿಗ್ಗಜರ ಮಧ್ಯೆ ನಮ್ಮ ಅಬ್ದುಲ್ಲಸಾಬ ಶಾಂತಾರ ತಾರಾಜೋಡಿ ಕಲಾಸೇವೆ ಮುಂದುವರೆಸುತ್ತದೆ. ಅಷ್ಟರಲ್ಲಾಗಲೇ ನಾಟಕಕಾರೆಂದು ಖ್ಯಾತರಾಗಿದ್ದ ಪಿ.ಬಿ. ದುತ್ತರಗಿಯವರು "ಬೆಳಕು ನೀಡಿದ ಬಾಲೆ" ನಾಟಕವನ್ನು ಬರೆದುಕೊಂಡು ಈ ಕಂಪನಿಗೆ ಬರುತ್ತಾರೆ. ನಾಟಕ ಆ ಕಾಲಘಟ್ಟದ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಉತ್ತಮ ಸಾರಾಂಶವನ್ನು ಹೊಂದಿದ್ದು, ಕಂಪನಿ ಮಾಲೀಕರು ಅದನ್ನು ತಮ್ಮ ಕಂಪನಿಯಲ್ಲಿ ಪ್ರದರ್ಶನಗೊಳಿಸಲು ದುತ್ತರಗಿಯವರೊಂದಿಗೆ ವ್ಯವಹಾರ ಕುದುರಿಸಿಕೊಂಡು ತಾಲೀಮು ಪ್ರಾರಂಭಿಸುತ್ತಾರೆ. ನಾಟಕದ ನಾಯಕನ ಪಾತ್ರವನ್ನು ಯಾರಿಗೆ ಹಾಕುವುದು. ಎಂದು ಆಲೋಚಿಸುವಾಗ ಅಬ್ದುಲ್ಲಸಾಬರ ಪ್ರತಿಭಾ ಸಾಮರ್ಥ್ಯವನ್ನು ಅರಿತಿದ್ದ ದುತ್ತರಗಿಯವರು ಅವರಿಗೇ ನಾಯಕ ಪಾತ್ರ ಹಾಕುವ ವಿಚಾರದಲ್ಲಿರುತ್ತಾರೆ.

ಆದರೆ ಕಂಪನಿಯಲ್ಲಿ ಈ ಮೊದಲೇ ಬೇರುಬಿಟ್ಟಿದ್ದ ಕೆಲಕಲಾವಿದರ ರಂಗರಾಜಕೀಯದಿಂದ (ರಂಗ ರಾಜಕಾರಣ ಆಗಲೂ ಇತ್ತು.) ಅಬ್ದುಲ್ಲಸಾಬರಿಗೆ ಹೊಲಿಕೆ ಆಗುತ್ತಿದ್ದ, ಕಥಾನಾಯಕನ ಪಾತ್ರವನ್ನು ಮತ್ತೋರ್ವ ನಟ ದೊಡ್ಡವಾಡ ಶಿವಪುತ್ರಯ್ಯನಿಗೆ ಹಾಕಿ ಅಬ್ದುಲ್ಲಸಾಬರಿಗೆ ಮುದುಕನ ಪಾತ್ರ ನೀಡುತ್ತಾರೆ. ಅಬ್ದುಲ್ಲಸಾಬರು ಚಕಾರವೆತ್ತದೆ ಚೋಪಡಿ ಪಡೆಯುತ್ತಾರೆ. ಅವರು ಯಾವುದೇ ಕಂಪನಿಗೆ ಹೋದರೂ ಆ ಪಾತ್ರವೇ ಬೇಕು ಈ ಪಾತ್ರವೇ ಬೇಕು ಎಂದು ಕೇಳಿದವರಲ್ಲವಂತೆ. ತಮ್ಮ ಪಾಲಿಗೆ ಬಂದ ಪಾತ್ರವನ್ನು ಪರಕಾಯ ಪ್ರವೇಶಮಾಡಿ ಯಶಸ್ವಿಗೊಳಿಸುತ್ತಿದ್ದುದು ಅವರ ರಂಗಸೇವಾ ವೈಶಿಷ್ಟ್ಯವಾಗಿರುತ್ತದೆ. "ನಿಮ್ಮ ಕಂಪನಿಯಲ್ಲಿ ಬಂದಿದ್ದೇನೆ. ನೀವು ಸುಮ್ಮನೇ ಕಂಬಾ ಸುತ್ತು ಎಂದರೂ ಸುತ್ತುತ್ತೇನೆ. ನನ್ನ ಸಂಬಳ ಮಾತ್ರ ಚುಕ್ತಾ ಮಾಡಬೇಕು" ಎಂದು ಹೇಳುತ್ತಿದ್ದರಂತೆ, ಅಲ್ಲದೇ "ನನ್ನ ಗಾದಿಸುರುಳಿ ನಿಮ್ಮ ಕಂಪನಿಯಲ್ಲಿ ಬಿದ್ದ ದಿನದಿಂದಲೇ ನನಗೆ ಸಂಬಳ ಸುರುವಾಗಬೇಕು." ಇದು ಅವರ ಅಚಲ ನಿರ್ಧಾರವಾಗಿತ್ತಂತೆ. ಈ ನಿರ್ಧಾರವನ್ನು, ಅವರ ರಂಗಸೇವೆಯ ಕೊನೆಯವರೆಗೂ ಅವರು ಪಾಲಿಸಿಕೊಂಡು ಬರುತ್ತಾರೆ.

ವೃದ್ಧನ ಪಾತ್ರ, ೩೦ ವರ್ಷದ ಯುವಕನಿಗೆ ೮೦ ರ ವೃದ್ಧನ ಪಾತ್ರ, ಪ್ರ್ಯಾಕ್ಟಿಸ್ ಪ್ರಾರಂಭವಾಗಿ ಒಂದು ದಿನ ನಾಟಕದ ಪ್ರಾರಂಭೋತ್ಸವ ನಿರ್ಧಾರವಾಗುತ್ತದೆ. ಅಬ್ದುಲ್ಲಸಾಬರು ಮಾಡಿದ ಪಾತ್ರಕ್ಕೆ ಯಾವುದೆ ಚಲನವಲನವಿಲ್ಲ. ಒಂದು ಮೂಲೆಯಲ್ಲಿ ಕುಳಿತು ಮುಸುಕು ಹೊದೆದುಕೊಂಡು ಗೂರುತ್ತಾ ಮಾತನಾಡುವ ಹಣ್ಣು ಹಣ್ಣು ಮುದುಕನ ಪಾತ್ರದಲ್ಲಿ ಅಬ್ದುಲ್ಲಸಾಬರು ಪರಕಾಯ ಪ್ರವೇಶಿಸಿ ಬಿಡುತ್ತಾರೆ. ನಾಟಕ ಮುಗಿದ ನಂತರ ಪ್ರೇಕ್ಷಕರ ಕಣ್ಣಲ್ಲಿ ಮಿಕ್ಕ ಎಲ್ಲ ಪಾತ್ರಗಳೂ ಮಸುಕಾಗಿ ಈ ಗೂರಲು

ಮುದುಕನ ಪಾತ್ರವೇ ಅಚ್ಚಳಿಯದೇ ಉಳಿದು ಬಿಡುತ್ತದೆ.

ನಾಟಕ ನೋಡಲು ಕುಳಿತಿದ್ದ ಕವಿ ದುತ್ತರಗಿಯವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹನಿಗಣ್ಣಾಗಿ ಒಳಗೆ ಬರುತ್ತಲೇ ಅಬ್ದುಲ್ಲಸಾಬರನ್ನು ಅಪ್ಪಿಕೊಂಡು ಮುದ್ದಾಡಿ ಬಿಡುತ್ತಾರೆ. "ಇಡೀ ನಾಟಕಕ್ಕೇ ಕಣ್ಣ ಆದೆಲ್ಲೋ ಅಬ್ದುಲಸಾಬಾ, ನನ್ನ ಮನಸ್ಸಿಗೆ ಶಿಕ್ಷೆನೂ ಆತಪ್ಪಾ" ಎಂದು ಪ್ರಾಂಜಲ ಮನಸ್ಸಿನಿಂದ ತಮ್ಮ ತಪ್ಪಿನ ಅರಿವನ್ನು ವ್ಯಕ್ತಪಡಿಸಿದರಂತೆ. ಮುಂದೆ ತಮ್ಮ ಎಲ್ಲ ನಾಟಕಗಳಲ್ಲಿಯೂ ನಾಯಕ ಪಾತ್ರಗಳನ್ನೆ ನೀಡಿ ನಾಟಕವನ್ನು ಯಶಸ್ವಿಗೊಳಿಸುತ್ತಾರೆ. ನಂತರ ಇದೆ ಕಂಪನಿಯ ಗಂಗಾರಾಮ ವಿರಚಿತ ಮಂಗಳಗೌರಿ ನಾಟಕ ಅಬ್ದುಲ್ಲಸಾಬರ ಪ್ರಧಾನ ಭೂಮಿಕೆಯಲ್ಲಿ ವಿಜ್ರಂಭಣೆಯಿಂದ ಪ್ರಯೋಗವಾಗುತ್ತದೆ. ಹೀಗೆ ತಮ್ಮ ಪ್ರತಿಭಾ ಸಾಮರ್ಥ್ಯವನೆಲ್ಲಾ ರಂಗಭೂಮಿಗೆ ಧಾರೆಎರೆದ ಅಬ್ದುಲ್ಲಸಾಬರು ಕಲಾದೇವಿಯ ಸುಪುತ್ರರಾಗಿಯೇ ಮೆರೆದದ್ದು ಅವರ ಕಲಾಬದುಕಿನ ವೈಶಿಷ್ಟ.

ಇಂತಹ ದುತ್ತರಗಿ ಕವಿಗಳೊಂದಿಗೆ ಅಬ್ದುಲ್ಲಸಾಬರ ಸ್ನೇಹ ನಿಕಟವಾಗುತ್ತಾ ಹೋಗುತ್ತದೆ. ಮುಂದೆ ಅವರ ಎರಡನೆಯ ಮದುವೆಗೂ ಇವರೇ ಕಾರಣರಾಗುತ್ತಾರೆ. ಮುಂದೆ ಇವರು ಮೈಸೂರ ಶ್ರೀಕಂಠಮೂರ್ತಿಗಳ ಕಂಪನಿಯಲ್ಲಿದ್ದಾಗ ತಿರ್ಲಾಪೂರದ ವೆಂಕರಡ್ಡಿ ಎಂಬವರು ಕಂಪನಿ ಮಾಡಿರುತ್ತಾರೆ. ಅವರು ಕಲಾವಿದರನ್ನು ಹುಡುಕುತ್ತಾ ಶೀಕಂಠಮೂರ್ತಿಗಳ ಕಂಪನಿಗೆ ಬಂದಾಗ ಅಲ್ಲಿದ್ದ ಅಬ್ದುಲ್ಲಸಾಬರಿಂದ ಸರೋಜಮ್ಮನವರ ಪರಿಚಯವಾಗಿ ತಮ್ಮ ಕಂಪನಿಗೆ ಬುಕ್ಕ ಮಾಡಿಕೊಂಡು ಕರೆತರುತ್ತಾರೆ. ಅಲ್ಲಿ ಕೆಲದಿನಇದ್ದ ಸರೋಜಮ್ಮ ಅಲ್ಲಿಂದ ಪಿ.ಬಿ.ದುತ್ತರಗಿಯವರ ಸಿದ್ಧಶಕ್ತಿ ನಾಟ್ಯಸಂಘ ಸೂಳೆಭಾವಿ ಕಂಪನಿಗೆ ಬರುತ್ತಾರೆ. ಅಷ್ಟರಲ್ಲಾಗಲೇ ತಮ್ಮ ಮೊದಲ ಪತ್ನಿಯನ್ನು ಕಳೆದುಕೊಂಡು ಒಂಟಿಜೀವಿಯಾಗಿದ್ದ ದುತ್ತರಗಿಯವರಿಗೆ ಸರೋಜಮ್ಮನವರ ಮೇಲೆ ಪ್ರೀತಿ ಬೆಳೆಯುತ್ತದೆ. ಅದನ್ನವರು ಅಂಜಂಜುತ್ತಲೇ ಸರೋಜಮ್ಮನವರಿಗೆ ತಿಳಿಸಿದಾಗ ಒಂಟಿ ಬದುಕು ತಮಗೂ ಸಾಕಾಗಿದ್ದ ಅವರು ತಮ್ಮ ಸಮ್ಮತಿ ಸೂಚಿಸಿ ಈ ವಿಷಯವನ್ನು ಈ ಭಾಗದ ಪರಿಚಿತ ಕಲಾವಿದರಾದ ಅಬ್ದುಲ್ಲಸಾಬರಿಗೆ ತಿಳಿಸುತ್ತಾರೆ.

ಆಗ ಅಬ್ದುಲ್ಲಸಾಬರು ತಾವೇ ಮುಂದೆನಿಂತು ಇವರಿಬ್ಬರ ಮದುವೆ ಮಾಡಿಸುತ್ತಾರೆ. ಪಿ.ಬಿ. ದುತ್ತರಗಿಯವರು ದೈವಾಧೀನರಾದಾಗ ಪತ್ರಿಕೆಯೊಂದು "ಪಿ.ಬಿ. ದುತ್ತರಗಿ, ಸರೋಜಮ್ಮರ ಮದುವೆಗೆ ಅಬ್ದುಲ್ಲಸಾಬರೆ ಪುರೋಹಿತರು" ಎಂಬ ಹೆಡ್ಡಿಂಗಿನೊಂದಿಗೆ ಸುದ್ಧಿ ಪ್ರಕಟಿಸುತ್ತದೆ. ಮೊನ್ನೆ ದುತ್ತರಗಿ ಸರೋಜಮ್ಮ ದೈವಾಧೀನರಾದಾಗ ಆ ಸುದ್ಧಿ ಕೇಳಿದ ಅಬ್ದುಲ್ಲಸಾಬರು ಕುಳಿತಲ್ಲಿಯೇ ಕಣ್ಣೀರು ಹಾಕುತ್ತಾರೆ. ಏಕೆಂದರೆ, ಅವರಿಗೆ ಆ ದಿನಗಳ ನೆನಪು ಮರುಕಳಿಸುತ್ತದೆ.

ಬಿಜಾಪೂರ ಕಂಪನಿಗಳಲ್ಲಿ ೨ ವರ್ಷ ರಂಗಸೇವೆ ಸಲ್ಲಿಸಿದ ಅಬ್ದುಲ್ಲಸಾಬರು ೧೯೬೦ರಲ್ಲಿ ಕ್ಯಾಂಪಕ್ಲೋಸ್ ಸಮಯದಲ್ಲಿ ಮುಳಗುಂದಕ್ಕೆ ಬರುತ್ತಾರೆ. ಇದೆ ಸುಸಮಯವೆಂದರಿತ ಅವರ ತಂದೆ-ತಾಯಿಗಳು ಬಾಲ್ಯದಲ್ಲಿಯೆ ಇವರಿಗೆ

ನಿಶ್ಚಿತಾರ್ಥವಾಗಿದ್ದ ಅವರ ಸೋದರತ್ತೆಯ ಮಗಳು ಮೋಹಿದ್ದೀನಬಿ ಇವರೊಂದಿಗೆ ನಿಖಾ ಮಾಡಿಬಿಡುತ್ತಾರೆ. ಮದೋನ್ಮತ್ತವಾದ ಗೂಳಿಗೆ ಗುದ್ದಿಕಟ್ಟಿದಂತಾಗಿ ಬಿಡುತ್ತದೆ. ಆದರೆ ಇದು ರಂಗಭೂಮಿಯ ಗೂಳಿ, ಲಕ್ಷಾಂತರ ಪ್ರೇಕ್ಷಕರ ಪ್ರೋತ್ಸಾಹ, ಚಪ್ಪಾಳೆ, ಒನ್ಸ್‌ಮೋರಗಳ ಪೋಷಕಾಂಶಗಳನ್ನು ಮೈದು ಕೊಬ್ಬಿದ ಗೂಳಿ, ಬಗ್ಗೀತೆ ನುಗ್ಗಿಯೇ ಬಿಟ್ಟಿತು ಮತ್ತೆ ನಾಟಕ ಕಂಪನಿಯ ಕಡೆಗೆ.

ಬಿಜಾಪೂರ ಕಂಪನಿಯ ಬೋರ್ಡಿಂಗ್ ಋಣ ತೀರಿತ್ತೆಂದು ಕಾಣುತ್ತದೆ. ಅಲ್ಲಿಂದ ನೇರವಾಗಿ ರಂಗಸಂಗಾತಿ ಶಾಂತಾಳೊಂದಿಗೆ ನರೆಗಲ್ಲ ಚನ್ನಬಸಯ್ಯನವರ ಕಂಪನಿಗೆ ಬರುತ್ತಾರೆ. ಅಲ್ಲಿ ಕೆ.ಎನ್. ಸಾಳುಂಕೆಯವರ 'ದಾರಿದೀಪ' ನಾಟಕದಲ್ಲಿ ನಾಯಕ ಪಾತ್ರವಹಿಸಿ ಯಶಸ್ವಿಯಾಗುತ್ತಾರೆ. ಅದರಲ್ಲಿ ಒಂದು ಹಾಡು ಬರುತ್ತದೆ.

**ಹತ್ತಿದೆ ಧನಿಕರಿಗೆ ನಿರ್ಭಯದ ನಿದ್ರೆ**
**ಗೋದಾಮುಗಳಿಗೆಲ್ಲಾ ಸ್ಟೀಲ್‌ಬೀಗಮುದ್ರೆ**
**ಹಣದ್ದುಚ್ಚು ಹಿಡಿದವಗೆ ದಯೆಕರುಣೆ ಇಲ್ಲ**
**ಹುರಿದು ಮುಕ್ಕುವರು ಬಡವರ ಬಾಳೆಲ್ಲಾ**

ಈ ಹಾಡು ಅಬ್ದುಲ್ಲಸಾಬರ ಕಂಠಸಿರಿಯಲ್ಲಿ ಹೊರಹೊಮ್ಮುತ್ತಿದ್ದರೆ. ಪ್ರೇಕ್ಷಕ ವರ್ಗ ಸಮ್ಮೋಹಿತರಾಗಿ ಬಿಡುತ್ತಿದ್ದರಂತೆ. ಇದೆ ಸಂದರ್ಭದಲ್ಲಿ ಅವರಿಗೆ ಮೊದಲ ಬಾರಿಗೆ ಸಿನಿಮಾ ರಂಗದವರ ಕರೆ ಬಂದು ಸ್ಕ್ರೀನ್ ಟೆಸ್ಟಿಗೆ ಬೆಂಗಳೂರಿಗೆ ಹೋಗುತ್ತಾರೆ.

ಇಲ್ಲಿ ಅಬ್ದುಲ್ಲಸಾಬ ಅಣ್ಣಿಗೇರಿಯವರ ರಂಗಬದ್ಧತೆಯ ಬಗ್ಗೆಯೂ ಸ್ವಲ್ಪ ಯೋಚಿಸೋಣ ಕರ್ಮಠ ಸಂಪ್ರಧಾಯಸ್ಥ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಅಬ್ದುಲ್ಲಸಾಬರು ಧರ್ಮನಿರಪೇಕ್ಷ ವೃತಿಗೆ ಸಿಮೋಲ್ಲಂಗನೆಗೈದು ಕನ್ನಡ ರಂಗಭೂಮಿಗೆ ತಮ್ಮ ಪ್ರಬುದ್ಧ ಕಲಾಪ್ರತಿಭೆಯಿಂದ ಉಸಿರು ತುಂಬಿದ್ದು ಸಾಮಾನ್ಯ ಸಂಗತಿಯೇನಲ್ಲ, ಇದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆ ಪಡುವ ಸಂಗತಿ.

೧೯೭೧ ರಲ್ಲಿ ಹಲ್ಲಿ ಶಿವಣ್ಣ, ಥೆರೆಸಮ್ಮ ಮೈಸೂರ ಸೇರಿ ಹುಟ್ಟುಹಾಕಿದ್ದ ಅಮರೇಶ್ವರ ನಾಟಕ ಸಂಘ ಬೆಳವಣಿಕೆ ಕಂಪನಿಗೆ ಬರುತ್ತಾರೆ. ರಾಮನ ಹಿಂದೆ ಲಕ್ಷ್ಮಣನೂ ಅರಣ್ಯವಾಸಿಯಾದಂತೆ ಇವರ ಸೋದರ ಮಹಮ್ಮದಲಿಯೂ ಇವರ ಬೆನ್ನುಬಿಡದೆ ನಟನಾಗಿ ತಬಲಾ ವಾದಕನಾಗಿ ನಾಟಕ ಕಂಪನಿಯಲ್ಲಿ ಯಾವ ಕೊರತೆಯಾದರೂ ಅದನ್ನು ತುಂಬಿಸುತ್ತಾ ಅಣ್ಣನ ಅಡಿಯಲ್ಲಿ ಕಲಾಸೇವೆ ಸಲ್ಲಿಸುತ್ತಿರುತ್ತಾನೆ. ಮನೆಯಲ್ಲಿದ್ದ ಅತ್ತಿಗೆ ಮೋಹಿದ್ದೀನ್‌ಬಿ ಅವರನ್ನು ಅಣ್ಣನೊಟ್ಟಿಗೇ ಇರಲೆಂದು ನಾಟಕ ಕಂಪನಿಗೆ ಕರೆತರುತ್ತಾನೆ. ಇಲ್ಲಿ ಅಬ್ದುಲ್ಲಸಾಬರ ಧರ್ಮಪತ್ನಿ ಮೋಹದೀನಬಿಯವರು ತನ್ನ ಗಂಡ ಮತ್ತೊಬ್ಬ ಹೆಂಗಸಿನೊಂದಿಗೆ ಸ್ನೇಹ ಹೊಂದಿದ್ದನ್ನು ತಡೆಯಲಿಲ್ಲವೇ? ಎಂದು ಕೇಳಿದರೆ ಗ್ರಾಮೀಣ ಪ್ರದೇಶದ ಮುಗ್ಧಕುಟುಂಬದಿಂದ ಬಂದಿದ್ದ ಈ ಸೋದರಿ,

**ಗಂಡ ಪಂಡಿತರಾಯ ರಂಡೀಯ ಮಾಡಿದರ**

**ಬಂಡ ಮಾಡುವರ ಮಗಳಲ್ಲ ಕೊಳ್ಳಾನ**

**ಗುಂಡು ಬೇಡಿದರ ಕೊಟ್ಟೇನ**

ಎಂದು ಹಾಡಿದ ನಮ್ಮ ಜಾನಪದ ಗರತಿಯಂತೆ ಅಬ್ದುಲ್ಲಸಾಬರೊಂದಿಗೆ ಹೊಂದಾಣಿಕೆಯ ದಾಂಪತ್ಯ ಬದುಕನ್ನು ನಡೆಸಿಕೊಂಡು ಹೋಗುತ್ತಾಳೆ. ಹಿರಿಯ ಸಾಹಿತಿ ಕಾದಂಬರಿ ಸಾರ್ವಭೌಮ ಅ.ನ.ಕೃ ಅವರು ತಮ್ಮ "ನಟಸಾರ್ವಭೌಮ" ಕಾದಂಬರಿಯಲ್ಲಿ ಕಲಾವಿದರ ಕುರಿತು "ಲೋಕದ ಮಾನದಂಡದಲ್ಲಿ ಕಲಾವಿದ ಅಸ್ಪೃಶ್ಯ. ಏಕೆಂದರೆ ಕಲಾವಿದ ಲೋಕದ ನಿರ್ಜೀವ ನೇಮಗಳನ್ನು ಪರಿಪಾಲಿಸುವುದಿಲ್ಲ ಆದರೆ ಅವನು ಕೊಟ್ಟ ಕೊಡುಗೆಗೆ ಪ್ರತಿಯಾಗಿ ಲೋಕ ಏನು ಕೊಡಬಲ್ಲದು?" ಎಂದು ಪ್ರಶ್ನಿಸುತ್ತಾರೆ ಮಾತ್ರವಲ್ಲ, ಕಲಾವಿದನ ಪ್ರತಿಭೆಯನ್ನು ನೋಡಿ ಅವನ ಅವಗುಣಗಳನ್ನು ಮರೆಯಬೇಕು ಎನ್ನುತ್ತಾರೆ.

ಆದರೆ ಇತ್ತ ಅಬ್ದುಲ್ಲಸಾಬರ ದಾಂಪತ್ಯ ಬದುಕಿಗೆ ಸಹಕರಿಸಲೇನೋ ಎಂಬಂತೆ ಬೆಳಗಾವಿ ಶಾಂತಾ, ಅಬ್ದುಲ್ಲಸಾಬರ ಬದುಕಿನಿಂದ ದೂರವಾಗುತ್ತಾಳೆ. ೧೯೩೪-೧೯೭೧ರವರೆಗೆ ಅನ್ಯೋನ್ಯವಾಗಿದ್ದ ರಂಗಸಂಗಾತಿಗಳು ೫ ವರ್ಷಗಳ ನಂತರ ಅಗಲಿ ಹೋಗುತ್ತವೆ. ಇತ್ತ ಅಬ್ದುಲ್ಲಸಾಬ ಮೋಹಿದ್ದೀನ್‌ಬಿ ಅವರ ಸುಖಮಯ ದಾಂಪತ್ಯ ಸುಗಮವಾಗಿ ಸಾಗುತ್ತದೆ. ಒಂದು ಮುದ್ದಾದ ಹೆಣ್ಣು ಮಗುವು ಜನಿಸುತ್ತದೆ. ಆ ಮಗಳಿಗೆ ಅಬ್ದುಲ್ಲಸಾಬರು ವಜೀರಬಿ ಎಂದು ತಮ್ಮ ತಾಯಿಯ ಹೆಸರನ್ನೆ ಇಡುತ್ತಾರೆ.

ಮುಂದೆ ಬೆಳಗಾವಿ ಶಾಂತಾ ಗುಡಗೇರಿ ಶ್ರೀ ಸಂಗಮೇಶ್ವರ ನಾಟ್ಯಸಂಘ ಪ್ರವೇಶಿಸಿ ಅದರ ಒಡೆಯರಾದ ಎನ್. ಬಸವರಾಜರ ರಂಗಸಂಗಾತಿಯಾಗಿ ಬಹುಕಾಲ ಸೇವೆ ಸಲ್ಲಿಸುತ್ತಾಳೆ. ನಂತರ ಅಲ್ಲಿಂದಲೂ ಹೊರ ಹೋಗಿ ಸ್ವಂತ ಕಂಪನಿ ಕಟ್ಟಿ ಮೆರೆಸುತ್ತಾ, ಮೆರೆಯುತ್ತಾ ಒಂದು ದಿನ ಗದಗ ಕ್ಯಾಂಪಿನಲ್ಲಿ ಉರುಳಿಗೆ ಕೊರಳೊಡ್ಡಿ ಮರೆಯಾಗಿ ಹೋಗುತ್ತಾಳೆ. ಮತ್ತೊಂದು ರಂಗಪ್ರತಿಭೆ ದುರಂತ ಸಾವನ್ನು ಕಂಡು ಕಾಲನಲ್ಲಿ ಲೀನವಾಗುತ್ತದೆ. ನಮ್ಮ ರಂಗ ಕಲಾವಿದರಿಗೆ ಬರುವ ದುರವಸ್ಥೆ ಯಾವಾಗ ಕೊನೆಯಾಗುವುದೊ?

ನಂತರ ಮೈಸೂರಿನ ಶ್ರೀಕಂಠಮೂರ್ತಿಗಳ ಕಂಪನಿಯಲ್ಲಿ ರಾಮಾಯಣದಲ್ಲಿ ರಾಮನಾಗಿ, ರಾಜಾಪಿಕ್ರಮದಲ್ಲಿ ಪಿಕ್ರಮನಾಗಿ, ಟಿಪ್ಪು ಸುಲ್ತಾನದಲ್ಲಿ ಟಿಪ್ಪು, ಹೈದರಲಿ, ಮೀರಸಾಧಕ ಸಾಯಿಬಾಬಾದಲ್ಲಿ ಸಾಯಿ ಪಾತ್ರದಲ್ಲಿ ಇದೆಂತ ಸರಕಾರದಲ್ಲಿ ಹೀರೋ ಆಗಿ ಸೇವೆ ಸಲ್ಲಿಸುತ್ತಾರೆ. ಟಿಪ್ಪು ಸುಲ್ತಾನದಲ್ಲಿ ಇವರ ಮೀರಸಾಧಕ ಪಾತ್ರ ನೋಡಿ ಪಕ್ಕದಲ್ಲಿ ಟಿಪ್ಪುವಿನ ಪಾತ್ರದಲ್ಲಿದ್ದ ಚಿತ್ರನಟ ಎಂ.ಪಿ. ಶಂಕರರವರು ನಗೆ ತಡೆಯಲಾರದೆ ಮಾತನಾಡದೇ ನಿಂತುಬಿಡುತ್ತಿದ್ದರಂತೆ.

# ಪುಷ್ಪಮಾಲಾ ಅಣ್ಣಿಗೇರಿ

ಹೌದು... ಇವರೂ ಕೂಡಾ ಕನ್ನಡ ವೃತ್ತಿ ರಂಗಭೂಮಿ ಹಾಗೂ ಗ್ರಾಮೀಣ ವಿಲಾಸಿರಂಗಭೂಮಿ ಕಂಡ ಶ್ರೇಷ್ಠ ಹಾಡುಕಲಾವಿದೆ. ಇವರು ಮೂಲ ಆಂಧ್ರಪ್ರದೇಶದ ಆದ್ವಾನಿಯವರು. ಹಿಂದೂ ಮರಾಠ ಸಮಾಜಕ್ಕೆ ಸೇರಿದ ಇವರ ತಂದೆ ಲಕ್ಷ್ಮಣರಾವ್ ಪ್ರಸಿದ್ಧ ಹಾರ್ಮೋನಿಯಮ್ ಕಲಾವಿದರು. ಇವರ ತಾಯಿ ನಾಗರತ್ನಮ್ಮ ಕೊಡಿಹಾಳ ಇವರು ಕೂಡಾ ಪ್ರಸಿದ್ಧ ಹಾಡುಕಲಾವಿದೆ. ಇವರು ನಾಡಿನ ಹಲವಾರು ಕಂಪನಿಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರಿಗೆ ೫ ಜನ ಮಕ್ಕಳ ಪೈಕಿ ಮೊದಲನೇಯವರೇ ಪುಷ್ಪಮಾಲ. ಇವರು ತಮ್ಮ ಅಜ್ಜ ಅಜ್ಜಿಯವರ ಕೈಯಲ್ಲಿ ಬೆಳೆದಿರುತ್ತಾರೆ.

೧೯೭೧ ರಲ್ಲಿ ತಮ್ಮ ಚಿಕ್ಕಮ್ಮನ ಮಗಳು ಸಾವಿತ್ರಿಯೊಂದಿಗೆ ಥೇರೆಸಮ್ಮನವರ ಬೆಳವಣಿಕೆ ಕಂಪನಿಗೆ ಬರುತ್ತಾರೆ. ಅಷ್ಟರಲ್ಲಾಗಲೇ ಬೆಳಗಾವಿ ಶಾಂತಾಳಿಂದ ವಂಚಿತರಾಗಿದ್ದ ಅಬ್ದುಲ್ಲಸಾಬರಿಗೆ ಒಂದು ಥರಾ ಮಂಕುಕವಿದಂತಾಗಿರುತ್ತದೆ. ಇತ್ತ ಪುಷ್ಪಮಾಲರವರ ಸೋದರಿ ಬಣ್ಣಹಚ್ಚಿದಾಗ ಸ್ವಲ್ಪ ಬೆಳಗಾವಿ ಶಾಂತಾಳನ್ನೆ ಹೋಲುತ್ತಾಳೆ ಎಂಬ ಕಾರಣಕ್ಕೆ ಅಬ್ದುಲ್ಲಸಾಬರ ಚಿತ್ತ ಅವಳತ್ತ ವಾಲುತ್ತದೆ. ಆದರೆ ಸಾವಿತ್ರಿ ಆಗ ಇನ್ನೂ ಅಪ್ರಾಪ್ತೆ. ಒಂದು ಸಲ ಅಬ್ದುಲ್ಲಸಾಬರು ಸಾವಿತ್ರಿಯನ್ನೆ ಮದುವೆಯಾಗಬೇಕೆಂದು ನಿರ್ಧರಿಸುತ್ತಾರೆ. ಅದು ಗೊತ್ತಾಗಿ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದ ವೀರಶೆಟ್ಟಿ ಕೊಡ್ಲಿ, ಸಾವಿತ್ರಿ ಸಣ್ಣವಳಾಗುತ್ತಾಳೆ. ಅವಳ ಅಕ್ಕ ಪುಷ್ಪಮಾಲಾಳನ್ನೆ ಇವನಿಗೆ ಮದುವೆ ಮಾಡಿದರೆ ಕಂಪನಿಗೆ ಮತ್ತೊಬ್ಬ ಹಾಡುಬಲ್ಲ ಶ್ರೇಷ್ಠನಟಿ ಸಿಗುತ್ತಾಳೆಂದು ನಿರ್ಧರಿಸಿ ತಾನೆ ಪೌರೋಹಿತ್ಯವಹಿಸಿ ಇವರ ಮದುವೆಗೆ ಅಣಿಯಾಗುತ್ತಾನೆ. ಅದಕ್ಕೆ

ಪುಷ್ಪಮಾಲಾ ಒಪ್ಪುವುದಿಲ್ಲ, ಆಗ ಕಂಪನಿಯಲ್ಲಿದ್ದ ಕುಂದಾಪೂರ ಸುಶೀಲಮ್ಮ ನೀನು ಮದುವೆಯಾಗಲು ಒಲ್ಲೆ ಎಂದರೆ, ಪೋಲೀಸರು ನಿನ್ನನ್ನು ಎಳೆದುಕೊಂಡು ಹೋಗಿ ಜೇಲಿಗೆ ಹಾಕುತ್ತಾರೆ ಸುಮ್ಮನೆ ಒಪ್ಪಿಕೊಂಡುಬಿಡು ಪುಷ್ಪಾ ಎಂದು ಹೆದರಿಸಿ ಒಪ್ಪಿಸುತ್ತಾಳೆ.

ಮದುವೆ ಎಂದರೇನೆಂದೇ ತಿಳಿಯದ ೧೮ ವರ್ಷದ ಮುಗ್ಧೆ ಪುಷ್ಪಮಾಲಾ ಪೋಲಿಸರೆಂದೊಡನೆ ಹೆದರಿ ಒಪ್ಪಿಕೊಳ್ಳುತ್ತಾಳೆ. ಕಂಪನಿಯಲ್ಲಿದ್ದ ಕೆಲವೇ ಕೆಲ ಕಲಾವಿದರ ಮಧ್ಯ ಹಾರ ಬದಲಾಯಿಸಿಕೊಳ್ಳುವುದರ ಮೂಲಕ ಪುಷ್ಪಮಾಲಾ ಅಬ್ದುಲ್ಲಸಾಬರ ರಂಗಬದುಕಿಗೆ "ಹಾರ"ವಾಗುತ್ತಾಳೆ. ಇತ್ತ ಅಣ್ಣನ ಪ್ರೀತಿಯ ತಮ್ಮ ಮಹಮ್ಮದಲಿ ಮತ್ತೆ ತನ್ನ ಅತ್ತಿಗೆ ಮೋಹಿದ್ದೀನ್‌ಬಿ ಅವರಿಗೆ ಅನ್ಯಾಯವಾಯಿತೆಂದು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸುತ್ತಾನೆ. ಕಂಪನಿಯಲ್ಲಿದ್ದ ಹಿರಿಯ ಕಲಾವಿದರು ಅನಿವಾರ್ಯತೆಯನ್ನು ಮನದಟ್ಟು ಮಾಡಿಕೊಟ್ಟು ಅವರನ್ನು ಸಮಾಧಾನಗೊಳಿಸುತ್ತಾರೆ. ಮತ್ತೊಬ್ಬ ಅರ್ಹ ರಂಗಸಂಗಾತಿಯೊಂದಿಗೆ ಅಬ್ದುಲ್ಲಸಾಬರ ದಾಂಪತ್ಯ ಮುಂದುವರೆಯುತ್ತದೆ. ಎಸ್.ಎಸ್. ಜೋಶಿಯವರ ನಾಟಕಗಳಾದ ರತ್ನಮಾಂಗಲ್ಯ, ಸೋತುಗೆದ್ದ ಸಾಧ್ವಿ, ಭಲೇಮಗಳು, ನಾಟಕಗಳು ವೈಭದಿಂದ ಪ್ರದರ್ಶನಗೊಳ್ಳುತ್ತವೆ. ಆ ನಂತರ ಥೆರೆಸಮ್ಮನವರ ಕಂಪನಿ ಬಿಟ್ಟು ಪುಷ್ಪಮಾಲಾರೊಂದಿಗೆ ಪ್ರಸಿದ್ಧ ನೃತ್ಯಕಲಾವಿದರಾದ ಧಾರವಾಡದ ಬಸವರಾಜ ಜವಳಿಮಠರೊಂದಿಗೆ ಪಾಲುಗಾರಿಕೆಯಲ್ಲಿ ಕಂಪನಿ ಮಾಡುತ್ತಾರೆ. ಕೆಲದಿನಗಳಲ್ಲಿಯೆ ಅವರೊಂದಿಗೆ ಭಿನ್ನಾಭಿಪ್ರಾಯ ಬಂದು ಅಲ್ಲಿಂದಲೂ ಹೊರಟು ಬಸವಾಪಟ್ಟಣದಲ್ಲಿ ಸ್ವಂತ ಕಂಪನಿ ಮಾಡುತ್ತಾರೆ. ಅದು ಹೆಚ್ಚುದಿನ ಬಾಳದೆ ಕೆಲದಿನಗಳ ಮಟ್ಟಿಗೆ ಅಣ್ಣಿಗೇರಿಗೆ ಬಂದು ನೆಲೆಸುತ್ತಾರೆ. ಈ ರಂಗದಂಪತಿಗಳ ೨ ವರ್ಷಗಳ ದಾಂಪತ್ಯದ ಫಲವಾಗಿ ಒಂದು ಮುದ್ದಾದ ಗಂಡುಮಗುವು ಜನಿಸುತ್ತದೆ. ಆತನಿಗೆ ಮಹಮ್ಮದ್ ಇಸ್ಮಾಯಿಲ್ (ಬಾಬು) ಎಂದು ಹೆಸರಿಡುತ್ತಾರೆ.

ಬೌದ್ಧಿಕ ಸಾಹಚರ್ಯದ ದಾಂಪತ್ಯ ಜೀವನ ಕಲಾವಿದರಲ್ಲಿ ತುಂಬಾ ವಿರಳ, ಆ ವಿಷಯದಲ್ಲಿ ಭಾಗ್ಯಶಾಲಿ ದಂಪತಿಗಳೆಂದರೆ ಪುಷ್ಪಮಾಲಾ, ಅಬ್ದುಲ್ಲಸಾಬ ಅಣ್ಣಿಗೇರಿ ದಂಪತಿಗಳು. ಅದೂ ಈ ನಾಟಕ ಕಂಪನಿಯ ಜೀವನದಲ್ಲಿ. ಇದ್ದುದರಲ್ಲಿಯೇ ನೆಮ್ಮದಿ ಕಾಣುವ ತ್ಯಾಗಮಯ ದಾಂಪತ್ಯ ಇವರದು ಎಂಬುದು ಒಂದು ಕಾಲಕ್ಕೆ ಪುಷ್ಪಮಾಲಾರನ್ನು ಕಂಡರೆ ಬೆಂಕಿ ಉಗುಳುತ್ತಿದ್ದ ಅಬ್ದುಲ್ಲಸಾಬರ ತಮ್ಮ ಮಹಮ್ಮದಲಿಯವರ ಮಾತಿದು. ಏಕೆಂದರೆ, ಹಾವು ಮುಂಗುಸಿಯಂತಹ ಎರಡು ವೈರುಧ್ಯ ಧರ್ಮಸಂಜಾತರಾದ ಈ ದಂಪತಿಗಳು ಕೋಮುಸೌಹಾರ್ದತೆಗೆ ಸೇತುವಾದವರು, ಧರ್ಮಸಮನ್ವಯಕ್ಕೆ ಸಾಕ್ಷಿಯಾದವರು. ನಂತರ ಈ ದಂಪತಿಗಳು ಕೆಲದಿನಗಳಲ್ಲಿ ಸುಳ್ಳದ ಮಲ್ಲನಗೌಡ್ರರು ದೇಸಾಯಿಯವರಿಂದ  ಕರೆ ಬಂದು ಆ ಕಂಪನಿಗೆ ತೆರಳುತ್ತಾರೆ.  ಮಧ್ಯ ಕನ್ನಡ ಸಿನಿಮಾ ರಂಗದ ನಂಟು ಬೆಳೆದು ಬದುಕು ಬಂಗಾರವಾಯಿತು, ರೇಣುಕಾ ಮಹಾತ್ಮೆ, ಪ್ರತಿಮಾ, ಆತ್ಮಶಕ್ತಿ, ಪ್ರೇಮಜ್ವಾಲೆ, ಕಪ್ಪುಕೊಳ, ಅಲ್ಲಾನೀನೆ ನೀನೆ ಈಶ್ವರ, ಗಾನಯೋಗಿ ಪಂಚಾಕ್ಷರಿ ಗವಾಯಿ, ಗುಲಾಬಿ ಟಾಕೀಜ, ಹಿಂದಿಯಲ್ಲಿ ಈಶ್ವರ ಅಲ್ಲಾ ತೇರೆನಾಮ, ಚಂಗ, ದಸ್ತಾನೆ ಮಜನೂ, ಮೈ ಚುಪ್ಪನಹೀ ರಹುಂಗಿ, ಮುಂತಾದ ಚಿತ್ರಗಳು ತೆರೆ

ಕಾಣುತ್ತವೆ. ಹಿಂದಿ ಚಿತ್ರರಂಗದ ಮೇರುನಟ ದಿಲೀಪಕುಮಾರರೊಂದಿಗೆ ಒಳ್ಳೆಯ ಸಖ್ಯ ಹೊಂದಿದ್ದ ಅಬ್ದುಲ್ಲಸಾಬರು ಮಹಮ್ಮದ ರಫೀಯವರೊಂದಿಗೆ ಯುಗಳಗೀತೆ ಹಾಡಿದ ಕೀರ್ತಿಗೂ ಪಾತ್ರರಾಗಿದ್ದರು. ಆದರೆ ಈ ಯಾವ ದಾಖಲೆಗಳೂ ಅವರಲ್ಲಿ ಉಳಿದಿಲ್ಲ.

ಬದುಕು ಬಂಗಾರವಾಯಿತು, ಈ ಚಿತ್ರದ ಡಬ್ಬಿಂಗ್ ನಡೆದಾಗ ಹಗಲು ಡಬ್ಬಿಂಗ್ ಕೆಲಸ ರಾತ್ರಿ ಗುಬ್ಬಿ ಕಂಪನಿಯಲ್ಲಿ ಪಾತ್ರ, ಹೀಗೆ ಏಕಕಾಲಕ್ಕೆ ರಂಗಭೂಮಿ ಹಾಗೂ ಚಿತ್ರರಂಗ ಎರಡರಲ್ಲೂ ಅಬ್ದುಲ್ಲಸಾಬರ ಸೇವೆ ಸಲ್ಲುತ್ತದೆ. ಈ ಚಿತ್ರ ೧೯೭೩ ರಲ್ಲಿ ಹುಬ್ಬಳ್ಳಿಯಲ್ಲಿ ರೀಲಿಸ್ ಆದಾಗ ಅಬ್ದುಲ್ಲಸಾಬರ ತಾಯಿ ವಜೀರಬಿಯವರು ಸದಾ ಮಗನ ಉತ್ಕರ್ಷವನ್ನೆ ಬಯಸುತ್ತಿದ್ದ ಈ ಮಮತಾಮಯಿ ತಾಯಿ ನಾಳೆ ಮಗನ ಸಿನಿಮಾ ನೋಡಲು ಹೋಗುವ ಸಂಭ್ರಮದಲ್ಲಿ ಇರುತ್ತಾರೆ. ಏಕೆಂದರೆ, ಅವರೂ ಓರ್ವ ಶ್ರೇಷ್ಠ ರಂಗಕರ್ಮಿಯಾದ ಅಣ್ಣಿಗೇರಿ ಹುಸೇನಸಾಬರ ಮಗಳಲ್ಲವೇ? ಆದರೆ ವಿಧಿಯಾಟ ಬೇರೆಯೇ ಆಗಿರುತ್ತದೆ. ಅವರು ಮಗನ ಸಿನಿಮಾ ನೋಡಲು ಹೊರಡಬೇಕೆಂದ ಹಿಂದಿನ ದಿನ ಮನೆಗೆ ಆಕಸ್ಮಿಕ ಬೆಂಕಿಬಿದ್ದು ತೀವ್ರವಾಗಿ ಗಾಯಗೊಂಡು ಮಾರನೆಯ ದಿನ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆಯುತ್ತಾರೆ. ಇತ್ತ ಮಗನ ಸಿನಿಮಾ ಟಾಕೀಸ್‌ನಲ್ಲಿ ಹೌಸಫುಲ್ಲ ಕಲೆಕ್ಷನ್‌ನಲ್ಲಿ ಸುರುಳಿ ಬಿಚ್ಚುತ್ತಿರುತ್ತದೆ. ವಿಧಿಲೀಲೆಯೆಂದರೆ, ಬಹುಶಃ ಇದೇ ಇರಬೇಕು.

ಇಲ್ಲಿ ಅಬ್ದುಲ್ಲಸಾಬರು ತಮ್ಮ ಸಿನಿಮಾ ರಂಗದ ಒಂದು ಅನುಭವವನ್ನು ಹೇಳಿದ್ದನ್ನು ಇಲ್ಲಿ ದಾಖಲಿಸಲೇಬೇಕು. ಒಂದು ಸಲ ಪ್ರತಿಮಾ ಚಿತ್ರದ ಚಿತ್ರೀಕರಣದ ಬಿಡುವಿನ ಸಮಯದಲ್ಲಿ ಕನ್ನಡ ಚಿತ್ರರಂಗದ ಖ್ಯಾತನಾಮ ಕಲಾವಿದರಾದ ವಿಷ್ಣುವರ್ಧನ್, ಭಾರತಿಯವರೊಂದಿಗೆ ಇವರು ಇಸ್ಪೇಟ್ ಆಡುತ್ತಾ ಕುಳಿತಿರುತ್ತಾರೆ. ರಂಗಭೂಮಿಯಿಂದ ಹೋದವರನ್ನು ಅಸಡ್ಡೆಯಿಂದ ಕಾಣುವುದು ಬೆಂಗಳೂರಿನ ಸಿನಿಮಾರಂಗದಲ್ಲಿರುವ ಕೆಲವರಿಗೆ ಹೊಸದೇನೂ ಅಲ್ಲ. ಅದರಲ್ಲಿಯೂ ಉತ್ತರ ಕರ್ನಾಟಕದ ಪ್ರತಿಭಾವಂತರನ್ನು ಕಂಡರೆ ಬೆಂಗಳೂರಿಗರಿಗೆ ಅದೇಕೊ ಹೊಟ್ಟೆಯುರಿ. ಅದಕ್ಕೇ ಡಾ॥ ಪಾಟೀಲ ಪುಟ್ಟಪ್ಪನವರು ಆಗಾಗ ಹೇಳುತ್ತಾ ಇರುತ್ತಾರೆ. ಬೆಂಗಳೂರಿಗರಲ್ಲಿ ಕೆಲವರಿಗೆ ಅಲ್ಲಿನ ಕತ್ತೆಗಳು ಕುದುರೆಗಳಾಗಿ ಕಾಣುತ್ತವೆ. ಈ ಭಾಗದ ಕುದುರೆಗಳು ಅವರಿಗೆ ಕತ್ತೆಗಳಾಗಿ ಕಾಣುತ್ತವೆ ಎಂದು. ಈ ಮಾತು ನಿಜ, ಯಾವುದೊ ಕಾರಣಕ್ಕೆ ವಿಷ್ಣುವರ್ಧನರ ಬಾಯಿಂದಾ ಅಬ್ದುಲ್ಲಸಾಬರಿಗೆ ರಂಗಕಲಾವಿದರ ಕುರಿತಾಗಿ ಏನೋ ಒಂದು ಅವಹೇಳನದ ಮಾತು ಬಂದುಬಿಡುತ್ತದೆ.

ಮೊದಲೇ ಸ್ವಾಭಿಮಾನವನ್ನು ಮೈತುಂಬಾ ಮೆತ್ತಿಕೊಂಡಂತಿದ್ದ ಅಬ್ದುಲ್ಲಸಾಬರು ಕೋಪೋದ್ರಿಕ್ತರಾಗಿ ಕೈಯಲ್ಲಿನ ಎಲೆಗಳನ್ನು ಚಲ್ಲಿ "ನಾಟಕದವರು ಕೊಟ್ಟಾಗಲೇ ಸಿನಿಮಾದವರು ಹುಟ್ಟಿದ್ದು, ಬೇಕಿದ್ದರೆ ಹೋಗಿ ಅಣ್ಣಾವ್ರನ್ನು (ಡಾ॥ ರಾಜಕುಮಾರ) ಕೇಳಿ" ಎಂದು ಹೇಳಿ ಎದ್ದು ಬಂದುಬಿಡುತ್ತಾರೆ. ಈ ಮಾತಿನಿಂದ ಅಲ್ಲಿದ್ದವರೆಲ್ಲರಿಗೂ ಕಾವೇರಿದ ಅನುಭವವಾಗುತ್ತದೆ. ವಿಷ್ಣುವರ್ಧನ, ಭಾರತಿ ದಂಪತಿಗಳು ಮೌನವಾಗಿ ಹೋಗಿ ತಮ್ಮ ಕೋಣೆಯನ್ನು ಸೇರಿಕೊಳ್ಳುತ್ತಾರೆ. ಸತ್ಯಾಂಶ ಬಹುಶಃ ಅವರಿಗೂ

ಅರ್ಥವಾಗಿರುತ್ತದೆ. ಏಕೆಂದರೆ, ಕನ್ನಡ ಚಿತ್ರರಂಗದ ಮುಂಚೂಣಿಯಲ್ಲಿದ್ದ ಗುಬ್ಬಿ ವೀರಣ್ಣನವರು, ಸುಬ್ಬಯ್ಯ ನಾಯ್ಡು, ಡಾ॥ ರಾಜಕುಮಾರ, ನರಸಿಂಹರಾಜು, ಉದಯಕುಮಾರ, ಬಾಲಕೃಷ್ಣ, ಲೋಕೇಶ, ಆರ್. ನಾಗೇಂದ್ರರಾಯರು, ಮುಸುರಿ ಕೃಷ್ಣಮೂರ್ತಿ, ಪಂಡರಿಬಾಯಿ, ಲೀಲಾವತಿ, ಎಂ.ವಿ. ರಾಜಮ್ಮ ಮುಂತಾದ ಕಲಾವಿದರು ಕನ್ನಡ ರಂಗಭೂಮಿಯಿಂದ ಚಿತ್ರರಂಗಕ್ಕೆ ಹೋದ ಅನರ್ಘ್ಯ ರತ್ನಗಳೇ ಅಲ್ಲವೇ?

ಇಂತಹ ನಿಷ್ಠೂರ ಮಾತುಗಳಿಂದ ಅಬ್ದುಲ್ಲಸಾಬರು ಚಿತ್ರರಂಗದಲ್ಲಿ ಒಳ್ಳೊಳ್ಳೆಯ ಅವಕಾಶಗಳಿಂದ ವಂಚಿತರಾಗುತ್ತಾರೆ. 'ಪ್ರತಿಮಾ' ಚಿತ್ರದಲ್ಲಿ ಕೊನೆಯವರೆಗೂ ಇರಬೇಕಿದ್ದ ಇವರ ಪಾತ್ರವನ್ನು ಮೊಟಕುಗೊಳಿಸಿ ಆ ಪಾತ್ರವನ್ನು ಸಾಯಿಸಿ ಫೋಟೊ ಹಾಕಿ ಅರ್ಧ ಚಿತ್ರದ ನಂತರ ಅದೇ ಪಾತ್ರಕ್ಕೆ ಬೇರೆ ರೂಪ ಕೊಟ್ಟು ಅಂಬರೀಷ ಅವರಿಂದ ಮಾಡಿಸುತ್ತಾರೆ. ಇದು ನಮ್ಮ ಚಿತ್ರರಂಗದಲ್ಲಿರುವ ರಾಜಕಾರಣಕ್ಕೆ ಒಂದು ಸಣ್ಣ ಉದಾಹರಣೆ. ಅದಕ್ಕೆ ಇವರ ನಿಷ್ಠೂರ ವರ್ತನೆ ಕಾರಣವಾದಂತೆ ಅವರ ಜಾತಿಯೂ ಮುಖ್ಯ ಕಾರಣವಾಗುತ್ತದೆ. ಪ್ರತಿಭೆ ಯಾರಸೊತ್ತೂ ಅಲ್ಲ, ಅದು ಒಲಿದುಬರಲು ವ್ಯಕ್ತಿಯ ಬದ್ಧತೆ, ಸಾಹಸ, ಶ್ರದ್ಧೆಯನ್ನು ಬೇಡುತ್ತದೆ ವಿನಹಃ ಆ ವ್ಯಕ್ತಿ ಹುಟ್ಟಿದ ಜಾತಿ, ಧರ್ಮವನ್ನು ನೋಡುವುದಿಲ್ಲ, ಆದರೆ ಎಲ್ಲದ್ದಕ್ಕೂ ಜಾತಿ ಧರ್ಮದ ಮಾನದಂಡವನ್ನೇ ಅನುಸರಿಸುವ ನಮ್ಮ "ಜಾತ್ಯಾತೀತ" ರಾಷ್ಟ್ರದಲ್ಲಿ ಎಲ್ಲ ರಂಗದ ಅನೇಕ ಮಹಾ ಮಹಾ ಪ್ರತಿಭೆಗಳು ಆ ಕಾರಣಕ್ಕಾಗಿಯೇ ಸೊರಗಿ ಹೋಗುತ್ತಿರುವುದು ನಮ್ಮ ಸಾಂಸ್ಕೃತಿಕ ಲೋಕದ ದುರಂತ.

# ಅಬ್ದುಲ್ಲಸಾಬ ಅಣ್ಣಿಗೇರಿ – ಅರವಿಂದ

ಹೌದು ಬದುಕಿನ ಅವಶ್ಯಕತೆಗೆ ಬದಲಾವಣೆ ಅನಿವಾರ್ಯ! ಬದಲಾವಣೆಗೆ ಹೊಂದಿಕೊಳ್ಳಲಾಗದ ಜೀವಿ ನಾಶವಾಗುತ್ತದೆ ಎಂಬುವುದು ವೈಜ್ಞಾನಿಕ ತರ್ಕ. ಬಹುಶಃ ಆ ಕಾರಣಕ್ಕಾಗಿಯೇ ನಿರ್ಧರಿಸುತ್ತಾರೆ. ಅಬ್ದುಲ್ಲಸಾಬರು ತಮ್ಮ ಹೆಸರನ್ನು ಬದಲು ಮಾಡಿಕೊಳ್ಳಲು. ರೂಪವಿದೆ, ವಯಸ್ಸಿದೆ, ಪ್ರತಿಭೆ ಇದೆ ನಿಜ! ಆದರೆ ಜಾತಿಬಲವಿಲ್ಲ, ಅಬ್ದುಲ್ಲಸಾಬರು  ಇಂತಹ ಪ್ರತಿಕೂಲ ವಾತಾವರಣದಲ್ಲಯೇ ತಮ್ಮ ಪ್ರತಿಭೆಯನ್ನು ರಂಗಭೂಮಿಯ ಮೂಲಕವೇ ಒರೆಗೆ ಹಚ್ಚಲು ಪ್ರಯಾಸ ಪಡುತ್ತಾರೆ. ಇವರ ಸ್ಟಾರ್ ಪರ್ಸ್ನಾಲಿಟಿ ರಂಗಭೂಮಿಯಲ್ಲಿ ಹೊಸ ಸಂಚಲನ ಮೂಡಿಸುತ್ತದೆ. ಅದಕ್ಕೆ ಕಾರಣ ಅದಾಗಲೇ ತೆಲಗು ಚಿತ್ರರಂಗದ ಅನಭಿಷಕ್ತ ಸಾರ್ವಭೌಮನಾಗಿ ಮೆರೆಯುತ್ತಿದ್ದ ಎನ್.ಟಿ. ರಾಮರಾವ್ ಅವರಿಗೆ ಅಬ್ದುಲ್ಲಸಾಬರ ಅಂಗಸೌಷ್ಠವ, ಹಾಗೂ ಮುಖ ಶೇ.೯೮% ರಷ್ಟು  ಹೋಲಿಕೆಯಾಗುತಿತ್ತು. ಎನ್.ಟಿ.ಆರ್.ರ ಮೂಗು, ಬಾಯಿ, ಕಣ್ಣು, ಕಿವಿ, ಕೇಶವಿನ್ಯಾಸ, ಯಾವುದಕ್ಕೂ ಕಡಿಮೆ ಇಲ್ಲದಷ್ಟು ಅಬ್ದುಲ್ಲಸಾಬರು ಅವರಿಗೆ ಹೋಲಿಕೆಯಾಗುತ್ತಿದ್ದರು. ಇದರ ಮೇಲೆ ರಂಗಾನುಭವದ ಕಲಾ ಶ್ರೀಮಂತಿಕೆ ಬೇರೆ.

ದುರ್ದೈವಿ ಅಬ್ದುಲ್ಲಸಾಬರು ಕಲಾಜ್ಞಾನ ಸಂಪಾದಿಸಿಕೊಂಡಂತೆ ವ್ಯವಹಾರ ಜ್ಞಾನವನ್ನೂ ಸಂಪಾದಿಸಿಕೊಂಡು ಬಿಟ್ಟಿದ್ದರೆ ಜೂನಿಯರ್ ಎನ್.ಟಿ. ರಾಮರಾವ್‌ಎಂದು ಹೇಳಿಕೊಂಡು ಹೊರಟಿದ್ದರೆ ಸಾಕಿತ್ತು ಇವರು ಆ ಕಾಲಕ್ಕೇ ಲಕ್ಷಾಂತರ ಹಣ ಗಳಿಸಬಹುದಿತ್ತು. ಏಕೆಂದರೆ, ಎನ್.ಟಿ.ಆರ್‌ರ ಆ ಕಾಲಘಟ್ಟ ಹಾಗಿತ್ತು. ದಕ್ಷಿಣ ಭಾರತದಲ್ಲಿಯೇ ಕನ್ನಡದಲ್ಲಿ ಡಾ॥ ರಾಜಕುಮಾರ, ತಮಿಳಿನಲ್ಲಿ ಎಂ.ಜಿ.ಆರ್. ಹಾಗೂ ತೆಲುಗಿನಲ್ಲಿ ಎನ್.ಟಿ.ಆರ್. ಚಿತ್ರರಂಗದಲ್ಲಿ ತಮ್ಮ ವಿಶೇಷ ಛಾಪನ್ನು ಮೂಡಿಸಿಬಿಟ್ಟಿದ್ದರು.

ನಮ್ಮ ಅಬ್ದುಲ್ಲಸಾಬರಿಗೆ ಯೌವನವಿತ್ತು. ಎನ್.ಟಿ.ಆರ್. ಹೋಲಿಕೆಯ ಆಕರ್ಷಕ ವ್ಯಕ್ತಿತ್ವವಿತ್ತು. ಸಿರಿಕಂಠದ ಸಂಗೀತ ಜ್ಞಾನವಿತ್ತು. ಇವರಿಗೆ ಇಲ್ಲದ್ದು ಅದೃಷ್ಟ ಒಂದೆ. ಆ ಅದೃಷ್ಟ ಸಂಪಾದನೆಗಾಗಿ ಹಿಡಿದ ದಾರಿಯೇ ಹೆಸರು ಬದಲಿಸಿಕೊಳ್ಳುವುದು. ಅಬ್ದುಲ್ಲಸಾಬ ಎಂಬುವುದು ಹೋಗಿ ಅರವಿಂದ ಆದರು. ಆದರೆ ಅದೃಷ್ಟ ಅರಪಾವಿನಷ್ಟೂ ಸಿಗಲಿಲ್ಲ. ಅದರಲ್ಲಿಯೇ ಶ್ರಮಪಟ್ಟು ಹತ್ತಾರು ಕನ್ನಡ, ಹಿಂದಿ ಚಿತ್ರಗಳಲ್ಲಿ ಅಭಿನಯಿಸಿದ್ದು ಅವರ ಹೆಚ್ಚುಗಾರಿಕೆಯೇ.

ಗುರುರಾಜ ಕಾಟೆ ನಿರ್ದೇಶನದ ಕನ್ನಡ ಹಾಗೂ ಹಿಂದಿ ಎರಡು ಭಾಷೆಯಲ್ಲಿ ತೆರೆಕಂಡ ಶಿಶುನಾಳ ಶರೀಫರ ಜೀವನಾಧಾರಿತ ಚಿತ್ರ "ಅಲ್ಲಾ ನೀನೇ ನೀನೇ ಈಶ್ವರ", (ಕನ್ನಡ), "ಈಶ್ವರ ಅಲ್ಲಾ ತೇರೆನಾಮ" (ಹಿಂದಿ) ಚಿತ್ರದಲ್ಲಿ ಶರೀಫರ ಗುರು ಗೋವಿಂದ ಭಟ್ಟರ ಪಾತ್ರದಲ್ಲಿ ಇವರ ಮನೋಜ್ಞ ಅಭಿನಯ ಪ್ರೇಕ್ಷಕರಲ್ಲಿ ಭಕ್ತಿ, ಭಾವವನ್ನು ಮೂಡಿಸುತಿತ್ತು. ನಂತರ ಇದೇ ಚರಿತ್ರೆಯನ್ನು ಆಧರಿಸಿ ಬಂದ ನಾಗಾಭರಣರ ನಿರ್ದೇಶನದ ಸಂತ ಶಿಶುನಾಳ ಶರೀಫ ಚಿತ್ರದಲ್ಲಿ ಗೋವಿಂದ ಭಟ್ಟರ ಪಾತ್ರದಲ್ಲಿದ್ದ ಗಿರೀಶ ಕಾರ್ನಾಡರಿಗಿಂತಲೂ ಸಮರ್ಥ ಅಭಿನಯ ನೀಡಿದ್ದು ಇವರಲ್ಲಿದ್ದ ವೃತ್ತಿ ರಂಗಭೂಮಿಯ ತಾಕತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದರೆ ಕಾರ್ನಾಡರಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆಯುತ್ತವೆ. ಅಬ್ದುಲ್ಲಸಾಬ(ಅರವಿಂದ)ರಿಗೆ ಇಲ್ಲ.

## ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸುಳ್ಳ

ಚಿತ್ರರಂಗದ ಜಾತಿ ರಾಜಕಾರಣಕ್ಕೆ ಬೇಸತ್ತು ಅಬ್ದುಲ್ಲಸಾಬರು ಮತ್ತೆ ರಂಗಭೂಮಿಯ ಕಡೆ ಮುಖ ಮಾಡುತ್ತಾರೆ. ಆದರೆ ಇಲ್ಲಿಯೂ ರಂಗರಾಜಕಾರಣದ ಬಿಸಿ ತಟ್ಟತೊಡಗುತ್ತದೆ. ಸುಳ್ಳದ ದೇಸಾಯಿಯವರ ಕಂಪನಿಯವರಲ್ಲಿ ಅಷ್ಟರಲ್ಲಾಗಲೇ ಕರ್ನಾಟಕದ ಆದ್ಯಂತ ಪ್ರಸಿದ್ಧರಾಗಿದ್ದ ಯಲಿವಾಳ ಸಿದ್ಧಯ್ಯಸ್ವಾಮಿಗಳು, ಡಿ. ದುರ್ಗಾದಾಸ, ಹಾವೇರಿ ಬಾಬಣ್ಣ ಲಕ್ಷ್ಮೇಶ್ವರದ ಶಿವಯ್ಯಸ್ವಾಮಿ ಹಣ್ಣಿ, ವೀರಭದ್ರಪ್ಪ, ಮುಂತಾದ ಕಲಾವಿದರ ಪ್ರಧಾನ ಭೂಮಿಕೆಯಲ್ಲಿ ಕರ್ನಾಟಕ ಶೇಕ್ಸ್‌ಪಿಯರ್ ಬಿರುದಾಂಕಿತರಾದ ಕಂದಗಲ್ಲ ಹನುಮಂತರಾಯರು "ರಕ್ತರಾತ್ರಿ" ನಾಟಕ ಸಿದ್ಧಪಡಿಸುತ್ತಿರುತ್ತಾರೆ. ಅಶ್ವತ್ಥಾಮನ ಪಾತ್ರದಲ್ಲಿ ರಾಯರಿಂದಲೇ "ಕಲಿಯುಗದ ಚಿರಂಜೀವಿ" ಎನ್ನಿಸಿಕೊಂಡಿದ್ದ ಯಲಿವಾಳ ಸಿದ್ಧಯ್ಯಸ್ವಾಮಿಯವರ ಹೆಸರು ಕರ್ನಾಟಕದಾದ್ಯಂತ ಮನೆ ಮಾತಾಗಿತ್ತು. ಅರ್ಜುನನ ಪಾತ್ರದಲ್ಲಿ ಡಿ. ದುರ್ಗಾದಾಸರು ಮಿಂಚಿದ್ದರು. ಆದರೆ ಅಷ್ಟರಲ್ಲಾಗಲೆ ಮಹಾಭಾರತ ಪುರಾಣ ಪ್ರಧಾನ ತೆಲಗು ಚಿತ್ರಗಳಾದ ಪಾಂಡವ ವನವಾಸಂ, ಮಾಯಾಬಜಾರ, ಮುಂತಾದ ಚಿತ್ರಗಳಲ್ಲಿ ಶ್ರೀಕೃಷ್ಣನ ಪಾತ್ರವಹಿಸಿ ಅಭಿಮಾನಿಗಳಿಂದ ಆಂಧ್ರದಾದ್ಯಂತ ದೇಗುಲಗಳನ್ನು ಕಟ್ಟಿಸಿಕೊಂಡಿದ್ದ ಎನ್.ಟಿ.ಆರ್.ರ ಹೋಲಿಕೆ ಇದೆ ಎಂಬ ಕಾರಣಕ್ಕೆ ಕೃಷ್ಣನ ಪಾತ್ರ ಇವರ ಕೈತಪ್ಪಿ ಬೇರೆ ಹಾಡು ಬಾರದ ಕಲಾವಿದನಿಗೆ ಹೋಗುತ್ತದೆ.

ಅಬ್ದುಲ್ಲಸಾಬರು ಕೃಷ್ಣನ ಪಾತ್ರ ಮಾಡಿದರೆ ತನ್ನ ಪ್ರತಿಭಾ ಮೋಡಿ ಹಾಗೂ ಎನ್.ಟಿ.ಆರ್. ಜಾಡಿನಿಂದ ತಮ್ಮನ್ನು ಮೂಲೋತ್ಪಾಟನೆ ಮಾಡಿಬಿಡುತ್ತಾನೆಂಬ ಹೆದರಿಕೆ ಯಲಿವಾಳ ಸಿದ್ಧಯ್ಯಸ್ವಾಮಿಗಳಿಗೆ ಇತ್ತಂತೆ.

ಅದಕ್ಕೆ ಅವರು ರಾಯರಿಗೆ ಹೇಳಿ "ಈ ಸಾಬನಿಗೆ ಯಾವ ಪಾತ್ರ ಹಾಕಿದರೂ ಸರಿ. ಆದರೆ ಕೃಷ್ಣನ ಪಾತ್ರ ಹಾಕಬೇಡಿ" ಎಂದು ಕಂದಗಲ್ಲ ರಾಯರನ್ನು ಅಬ್ದುಲ್ಲಸಾಬರ ಎದುರಿಗೇ ಬೇಡಿಕೊಳ್ಳುತ್ತಿದ್ದರಂತೆ ಈ ಮಾತನ್ನು ಅಬ್ದುಲ್ಲಸಾಬರು ತುಂಬಾ ವಿನೋದಭರಿತರಾಗಿ ಸ್ಮರಿಸಿಕೊಳ್ಳುತ್ತಾರೆ.

ಕೊನೆಗೆ ಲಕ್ಷ್ಮೇಶ್ವರದ ಶಿವಯ್ಯನವರಿಗೆ ದುರ್ಯೋಧನನ ಪಾತ್ರ ಒಪ್ಪುವುದಿಲ್ಲ ತುಂಬ ತೆಳ್ಳಗಿದ್ದಾರೆ, ಎಂಬ ಕಾರಣ ಮುಂದೊಡ್ಡಿ ಅವರಿಗೆ ಕೃಷ್ಣನ ಪಾತ್ರ ಹಾಕಿ ಅಬ್ದುಲ್ಲಸಾಬರಿಗೆ ದುರ್ಯೋಧನನ ಪಾತ್ರ ಹಾಕುತ್ತಾರೆ. ಆ ಪಾತ್ರದಲ್ಲಿ ಅಬ್ದುಲ್ಲಸಾಬರ ಸಿರಿಕಂಠದಿಂದ ಸಿಡಿದು ಬರುತ್ತಿದ್ದ, ರಾಯರ ಉಕ್ಕಿನ ಕಡಲೆಯಂತಹ ಸಿಡಿಲ ಶಬ್ದಗಳು, ಅವರು ರಂಗಕ್ಕೆ ಧುಮುಕುವ ಗಂಭೀರ ಗತ್ತು, ಗದೆಯನ್ನು ತಿರುಗಿಸಿ ಹೆಗಲಿಗೇರಿಸಿಕೊಂಡು ಹೇಳುತ್ತಿದ್ದ ಆ ಮಾತು...

ದುರ್ಯೋಧನ- (ಪ್ರವೇಶಿಸುತ್ತಾ) ಮಾಮಾ ನಗೆ, ಕುರುಸಂತಾನದ ಸಮಾಪ್ತಿಯ ಸಮಯದಲ್ಲಿ ನಗೆ ನಿಮಗೆ? ಈ ಕೌರವೇಶ್ವರನ ಮಾರ್ಬಲಕ್ಕೆ ಮೂಲಾಧಾರನಂತಿರ್ದ ಮುತ್ತಜ್ಜ ಭೀಷ್ಮಾರ್ಯರು ಹತ್ತು ದಿನ ಹೊಡೆದಾಡಿ ಆ ಕೃಷ್ಣನ ಕುಹಕದಲಿ ಪಾರುಗಾಣದೆ ಬಿಲ್ಲು ಬಾಣಗಳ ಚೆಲ್ಲಿ ಅರ್ಜುನನ ಅಂಬುವಿಗೆ ಆಹುತಿಯಾಗಿ ಬಾಣಮಂಚದ ಮೇಲೆ ಮಲಗಿರುವ ಸಮಯದಲ್ಲಿ ನಗೆ ನಿಮಗೆ? ದ್ರೋಣಾಚಾರ್ಯರರು ವೀರ ಮರಣ ಹೊಂದಿದ್ದಕ್ಕೆ ಕಳವಳಿಕೆಯ ಕತ್ತಲೊಳು ಕುರುದೇವತೆಯು ಕುರುಡಾದ ಸಮಯದಲ್ಲಿ ನಗೆ ನಿಮಗೆ, ಮಾಮಾ –– ಮತ್ತೆ ನಗೆ? ಇದಾವ ನಗೆ ಮಾಮಾ?

ಮಾಮಾ! ದುರ್ಲಭವಾದ ವೀರರತ್ನಗಳಿಂದ ರಂಜಿತವಾದ ದೃತರಾಷ್ಟ್ರನ ಸಿಂಹಾಸನಕ್ಕೆ ಸೋಲೆ? ಸೋಲಿಲ್ಲವೇ ಆ ಸೂಳೆಯ ಹೊಟ್ಟೆಯ ಕುನ್ನಿಗಳಿಗೆ? ಮಾಮಾ! ದ್ರೌಪದಿಯ ದಂಡೆಯ ದಾರವದೆಷ್ಟು ಗಟ್ಟಿಮುಟ್ಟಾಗಿದೆ! ಪಾಂಡವರನ್ನು ಹಡೆದ ಕುಂತಾ ಮಾದ್ರಿಯರು ಅರ್ಧಮಿಣಿಯರು. ಅವರ ಪಟ್ಟದರಸಿಯಂತೆ ಆ ದ್ರೌಪದಿ! ಅವಳಂತೂ ಪ್ರತಿ ಸೂಳೆ, ಇತ್ತ ಈ ಕೌರವನ ತಾಯಿಯಾದ ಗಾಂಧಾರಿ ಗರತಿರತುನ ಇವಳ ಪಾವಿತ್ರ್ಯದೊಡಲಿನ ಪುತ್ರರಿಗೆ ಪರಾಜಯವೇ? ಸಾವಿತ್ರಿ ಸದೃಶ್ಯಳಾದ ಭಾನುಮತಿಯ ಮುತ್ತೈದಿತನದ ಮೂಗುತಿಗೆ ಭಂಗ?

ಸುಳ್ಳದ ಶ್ರೀಮಂತ ದೇಸಾಯಿಯವರ ಕಂಪನಿಯ ರಾಜಸತ್ತೆಯನ್ನು ನೆನಪಿಸುವ ವೈಭವದ ರಂಗಸಜ್ಜಿಕೆ, ಸುತ್ತಲೂ ಸಮರ್ಥ ಕಲಾವಿದರ ಮೇಳೈಕೆ, ರಾಯರ ಕಡಲ ಮೊರೆತದಂತಹ ಗಂಭೀರಸಾಹಿತ್ಯ, ಸಂಗೀತದ ಅಬ್ಬರ! ಅಬ್ದುಲ್ಲಸಾಬರ ಅಭಿನಯಾಬ್ಬರಕ್ಕೆ ಕೊನೆ ಎಂತು?

ಅದು ರಾಯಚೂರ ಕ್ಯಾಂಪ್. ಯಲಿವಾಳ ಸಿದ್ಧಯ್ಯನವರ, ಡಿ. ದುರ್ಗಾದಾಸರ,

ಅಬ್ದುಲ್ಲಸಾಬರ, ಸುಭದ್ರಮ್ಮ ಮನಸೂರರ ಅಭಿನಯದ "ರಕ್ತರಾತ್ರಿ" ನಾಟಕ. ಇತ್ತ ನಾಟಕದ ಥೇಟರ್ ಅತ್ತ ಸಿನಿಮಾ ಟಾಕೀಸ ಮಧ್ಯದಲ್ಲಿ ರಸ್ತೆ. ಎನ್.ಟಿ.ಆರ್‌ರ ಪಡಿಯಚ್ಚನ್ನೇ ರಂಗಭೂಮಿಗೆ ಒಗ್ಗಿಸಿಕೊಂಡ ಅಬ್ದುಲ್ಲಸಾಬರ ಅಭಿನಯದ "ರಕ್ತರಾತ್ರಿ" ನಾಟಕದ ಹೊಡೆತಕ್ಕೆ ಸಿಕ್ಕು ಸಿನಿಮಾ ಟಾಕೀಜನವರು ಎನ್.ಟಿ.ಆರ್ ಕೃಷ್ಣನ ಪಾತ್ರದ ಅಭಿನಯದ ಅದೇತಾನೆ ಆಂಧ್ರದಾದ್ಯಂತ ಬಿಡುಗಡೆಯಾಗಿದ್ದ "ಪಾಂಡವ ವನವಾಸಂ" ಚಿತ್ರವನ್ನು ಹಾಕುತ್ತಾರೆ.

ಆದರೆ ರಾಯಚೂರಿನ ಜನಾ ಆ ಪರದೇ ಮೇಲಿನ ಎನ್.ಟಿ.ಆರ್.ನನ್ನು ನೋಡುವುದೇನು? ಇಲ್ಲಿ ನೈಜ ಎನ್.ಟಿ.ಆರ್.ನೇ ಇದ್ದಾನೆ ಎಂದು ಅಬ್ದುಲ್ಲಸಾಬರ ನಾಟಕಕ್ಕೆ ನುಗ್ಗುತ್ತಿದ್ದರಂತೆ, ಇದರ ಪರಿಣಾಮ ಎನ್.ಟಿ.ಆರ್. ಸಿನಿಮಾ ಪ್ರೇಕ್ಷಕರೇ ಇಲ್ಲದೆ ನಿಂತುಹೋಗುತ್ತದೆ. ಆಂಧ್ರಕ್ಕೆ ಸಮೀಪದಲ್ಲಿದ್ದ ರಾಯಚೂರಿನಲ್ಲಿ ಎನ್.ಟಿ.ಆರ್ ಸಿನಿಮಾ ಬಂದಾಯಿತೆಂದರೆ ಈ ತಾರಾಬಳಗದ ಹಾಗೂ ಅಬ್ದುಲ್ಲಸಾಬರ ಪಾತ್ರದ ಪ್ರಭಾವ ಆ ಜನರ ಮೇಲೆ ಎಷ್ಟು ಆಗಿರಬಹುದು, ಓದುಗರು ಊಹಿಸಬಹುದು. ಈ ಘಟನೆ ಆಗ ಕರ್ನಾಟಕದ ರಂಗಭೂಮಿಯಾದ್ಯಂತ ಚರ್ಚೆಯ ವಸ್ತುವಾಗಿತ್ತಂತೆ.

ಅದೇ ಸಮಯಕ್ಕೆ ರಾಯಚೂರ ಹತ್ತಿರ ಅಮರೇಶ್ವರ ಜಾತ್ರೆಗೆ ತಮ್ಮ ತಂಡದೊಂದಿಗೆ ನಾಟಕವಾಡಲು ಬಂದಿದ್ದ ಕನ್ನಡ ಚಿತ್ರರಂಗದ ಮತ್ತೊಬ್ಬ ಹಿರಿಯ ನಟ ಕಲ್ಯಾಣಕುಮಾರರು ತಮ್ಮ ಪತ್ನಿ ರೇವತಿಯವರೊಂದಿಗೆ ರಾಯಚೂರಿಗೆ ಬಂದು ರಕ್ತರಾತ್ರಿ ನಾಟಕ ನೋಡುತ್ತಾರೆ. ನಾಟಕ ಬಿಟ್ಟ ನಂತರ ಒಳಗೆ ಬರುತ್ತಲೇ ಅಶ್ವತ್ಥಾಮನ ಪಾತ್ರದಲ್ಲಿದ್ದ ಯಲಿವಾಳ ಸಿದ್ಧಯ್ಯ ಸ್ವಾಮಿಯವರಿಗೆ "ತಾತಾ ದುರ್ಯೋಧನನ ಪಾತ್ರ ಮಾಡಿದ ಕಲಾವಿದರ್‍ಯಾರು"? ಎಂದು ಕೇಳುತ್ತಾರೆ.

ಸಿದ್ಧಯ್ಯನವರು ಕಲ್ಯಾಣಕುಮಾರರಿಗೆ ಅಬ್ದುಲ್ಲಸಾಬರ ಪರಿಚಯ ಮಾಡಿಕೊಡುತ್ತಾರೆ. ಕಲ್ಯಾಣಕುಮಾರ ತುಂಬಾ ಸಂತಸದಿಂದ ಅಬ್ದುಲ್ಲಸಾಬರನ್ನು ಅಪ್ಪಿಕೊಂಡು "ಏನು ನಿಮ್ಮ ಪಾತ್ರ ಅದ್ಭುತಾಪ್ಪಾ! ನೀವು 'ಸಾಬಿ' ಅನ್ನುವುದೇ ನಂಬಲು ಆಗತಿಲ್ಲ" ಎಂದಾಗ ತುಂಟತನಕ್ಕೆ ಹೆಸರಾದ ಸಿದ್ಧಯ್ಯನವರು "ಅಬ್ದುಲಸಾಬಾ ಕಲ್ಯಾಣ ಕುಮಾರರಿಗೆ ನೀನು ಸಾಬಾ ಎಂಬುವುದನ್ನು ಸಾಬೀತುಪಡಿಸಲು ಸ್ವಲ್ಪ ಅವರನ್ನು ಕರೆದುಕೊಂಡು ಥೇಟರ ಹಿಂದುಗಡೆ ಹೋಗಿ ಬಾ" ಎಂದು ತಮಾಷೆ ಮಾಡುತ್ತಾರೆ.

ಅವರ ಮಾತಿನ ಮರ್ಮವನ್ನರಿತ ಕಲ್ಯಾಣಕುಮಾರ ಜೋರಾಗಿ ನಗುತ್ತಾ "ಅರ್ಥವಾಯಿತು ಅರ್ಥವಾಯಿತು ತಾತಾ, ನೀವು ಹೇಳಿದ ಮೇಲೆ ನಂಬಲೇಬೇಕು" ಎನ್ನುತ್ತ ಆಗಲಿದ್ದ ಮುಜುಗರದಿಂದ ತಪ್ಪಿಸಿಕೊಳ್ಳುತ್ತಾರೆ. ಮಾತ್ರವಲ್ಲ ತಮ್ಮ ಆ ಕಾಲಕ್ಕೇ ೫೦೦ ರೂಪಾಯಿ ಕೊಟ್ಟು ಕೊಂಡುಕೊಂಡಿದ್ದ ಹಸಿರು ಗ್ಲಾಸಿನ ಗೋಲ್ಡಫ್ರೇಮ್‌ನ ಚಸ್ಮಾ ತೆಗೆದು ಅಬ್ದುಲ್ಲಸಾಬರಿಗೆ ಹಾಕಿ ಇದು ನನ್ನ ಗಿಫ್ಟ ಎಂದು ಹಾರೈಸುತ್ತಾರೆ.

ನಂತರ ಇದೇ ಕಂಪನಿಯಲ್ಲಿ ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರದ ನಾಟಕಕಾರ ಜಿ.ಜಿ. ಹೆಗಡೆಯವರು ಬರೆದ ಸತ್ಯ ಹರಿಶ್ಚಂದ್ರ ನಾಟಕ ತಾಲಿಮು ಪ್ರಾರಂಭಿಸುತ್ತಾರೆ.

ಎಲ್ಲದರಲ್ಲಿಯೂ ಪ್ರಧಾನ ಭೂಮಿಕೆಗೇ ಹಾತೊರಿಯುತ್ತಿದ್ದ ಮತ್ತು ಅದನ್ನು ತಮ್ಮ ಪ್ರಬುದ್ಧ ಅಭಿನಯದಿಂದ ಸಾರ್ಥಕಗೊಳಿಸುತ್ತಿದ್ದ ಯಲಿವಾಳ ಸಿದ್ಧಯ್ಯನವರು ಇಲ್ಲಿ ಹರಿಶ್ಚಂದ್ರನ ಪಾತ್ರಕ್ಕೆ ಅಬ್ದುಲ್ಲಸಾಬರನ್ನು ಸೂಚಿಸಿ ತಾವು ಸಾಂಬ ಎಂಬ ವಿಶ್ವಾಮಿತ್ರನ ಶಿಷ್ಯನ ಪಾತ್ರ ಮಾಡುತ್ತಾರೆ.

ಆಗ ಅಬ್ದುಲ್ಲಸಾಬರು "ಯಾಕ? ಬೆಳತನಕ ಎಲ್ಲಾ ಕಳಕೊಂಡು ಗೋಳಾಡು ಪಾರ್ಟಂತ ನನಗ ಬಿಟ್ಟೇನು?" ಎಂದು ಛೇಡಿಸುತ್ತಾರೆ. ಆ ಪಾತ್ರವನ್ನು ಲೀಲಾಜಾಲವಾಗಿ ಅಭಿನಯಿಸಿ ಪ್ರಸಿದ್ಧರಾಗುತ್ತಾರೆ.

ಮುಂದೆ ಕೆ.ಎಸ್.ಸಾಳುಂಕೆಯವರ "ವರ ನೋಡಿ ಹೆಣ್ಣು ಕೊಡು" ನಾಟಕ ಸಿದ್ದಗೊಳ್ಳುತ್ತದೆ. ಯಲಿವಾಳ ಸಿದ್ದಯ್ಯನವರು ಶಿವಣ್ಣನ ಪಾತ್ರವಾದರೆ ಅಬ್ದುಲ್ಲಸಾಬರದು ಕನಕಮೂರ್ತಿ ವಕೀಲನ ಪಾತ್ರ ಹಾವೇರಿ ಬಾಬಣ್ಣ ಕುಂಬಾರಬಸಪ್ಪ ಹಾಗೂ ಲಕ್ಷ್ಮೇಶ್ವರ ಶಿವಯ್ಯಸ್ವಾಮಿ ಗಿರಿಯ ಪಾತ್ರದಲ್ಲಿದ್ದ ಈ ನಾಟಕ ಕರ್ನಾಟಕದ ತುಂಬಾ ಜಯಭೇರಿ ಬಾರಿಸುತ್ತದೆ. ವಕೀಲನ ಪಾತ್ರದಲ್ಲಿದ್ದ ಅಬ್ದುಲ್ಲಸಾಬರು ಪ್ರಥಮ ಸನ್ನಿವೇಶದಲ್ಲಿ ಕಥಾ ನಾಯಕಿ ಶೈಲಾ ಹಾಡುತ್ತಿದ್ದ ವರಕವಿ ಬೇಂದ್ರೆಯವರ ಇಳಿದುಬಾ ತಾಯಿ ಇಳಿದುಬಾ ಹಾಡನ್ನು ಹಾಡಿ ಮುಗಿಸುತ್ತಿದ್ದಂತೆಯೆ ಆಕರ್ಷಕ ಉಡುಪಿನಲ್ಲಿ ಡ್ಯಾಂ ಮೇಲೆ ಹಾಡುತ್ತಿದ್ದ,

**ನಿನ್ನ ಹುಸಿನಗೆಯ ಶರಗಳಿರಿತದಲಿ**

**ಸಾವಿರ ಸಲ ನಾ ಮಡಿದಿಹೆನು**

**ಯಾಕೊ ಏನೋ ನಿನಗೋಸ್ಕರವೇ**

**ಇಂದಿಗೂ ಜೀವನ ಹಿಡಿದಿಹೆನು.**

ಎಂದು ಹಾಡುತ್ತಾ ಕೆಳಗಿಳಿದು ಬಂದು ತನ್ನ ಪ್ರೇಮಿಯನ್ನು ವರ್ಣಿಸುವ ಪರಿ ಕನ್ನಡ ನಾಟಕದ ಶೃಂಗಾರ ರಸ ಸಾಹಿತ್ಯದ ಮೇರು ಎಂದರೆ ತಪ್ಪಾಗಲಾರದು.

ಕನಕಮೂರ್ತಿ : ಓ ಸೌಂದರ್ಯ ಸುನಾದಗಳ ರಸಮಂಜರಿ, ನಾಕ ನಾಚುವಂತೆ ರಸಋಷಿಗಳೆಲ್ಲ ಕರಚಾಚುವಂತೆ ಸೌರಭದ ಸವಿಸುಗ್ಗಿಗಾಹ್ವಾನವಿತ್ತು ಹಿಗ್ಗಿನಲಿ ಮೈಮರೆತು ಮತ್ತೇರಿ ಬಳುಕುತಿಹ ಈ ಲಲಿತಾಂಗಿಯನ್ನು ಕಂಡು...

ಶೈಲಾ : ಏನು ಅನಿಸುತ್ತೆ ನಿಮಗೆ?

ಕನಕಮೂರ್ತಿ : ಹಚ್ಚುಹಸಿರಿನ ಸಸ್ಯ ಪ್ರಪಂಚಕ್ಕೆ ಜನ್ಮವಿತ್ತು ಹಚ್ಚಡವ ಹೊದ್ದಂತೆ ಪಚ್ಚೆಯುಡುಗೊರೆ ಉಟ್ಟು ಶೋಭಿಸುತಿಹ ರಾಧಾರಮಣಿಯ ಉಡಿ ತುಂಬಲು ಧವಲ ಮೌಕ್ತಿಕಗಳ ರಾಶಿಯನ್ನೇ ಸುರಿಸುವಂತೆ ಕಂಗೊಳಿಸುತಿಹ ಈ ಮಂಗಲಾಂಗಿಗೆ ತುಂಗಭದ್ರೆಯ ಸಮ್ಮುಖದಲ್ಲಿ ಇಂಚರದಿ ವರಕವಿಯ ಕವನವನ್ನುಸುರುತಿಹ ಈ ಮನೋಹರಿಯನ್ನು ಕಂಡು... ಅಂಚೆವಾಹನನೆಯ ಪತಿವಿರಂಚಿ ತನ್ನ ಕಲಾಕುಂಚಿನಿಂದ ನಿರ್ಮಿಸಿದ ರಂಜಿಕೆಯೋ? ಇಂದ್ರಲೋಕದಿ

ಚಂದ್ರಶಿಲೆಯನು ಕೊರೆದು ನಿಲ್ಲಿಸಿದ ಬಂಜಿಕೆಯೊ? ಅಥವಾ ಮದನಸತಿ ರತಿಗೆ ತಾನು ಹಿಂದುಳಿದೆನೆಂಬ ಅಂಜಿಕೆಯೋ ಎನ್ನುವಂತೆ ಭಾಸವಾಗುತ್ತದೆ.

ಶೈಲಾ : (ನಸುನಕ್ಕು) ಆಹಾ ಸಾಕ್ಷಾತ್ ಪುರುಷ ಸರಸ್ವತಿ ನೀವು. ಅಲ್ಲಾ ನಿಮಗೆ ಕವಿಯಾಗಬೇಕೆಂಬ ಹುಚ್ಚಿದೆಯೋ ಅಥವಾ ನಿಮ್ಮ ಹೃದಯದಲ್ಲಿ ಕಾಮಜ್ವಾಲೆಯ ಕಿಚ್ಚಿದೆಯೋ ಅರ್ಥವಾಗಲಿಲ್ಲಾ.

ಕನಕಮೂರ್ತಿ : ಹಾಗೇನು? ಹಾಗಿದ್ದರೆ ಈ ನಲ್ಮಾತುಗಳು ಬೇಡ, ನುಣ್ಬುಟಿಯ ಜೇನ್ಮುತ್ತಿಗಾಗಿ ಹತ್ತಿರಕೆ ಬಾ, ಆಗ ತಾನೇ ಎಲ್ಲಾ ಗೊತ್ತಾಗತ್ತೆ.

ಇದರಂತೆ ಮುಂದಿನ ಸನ್ನಿವೇಶದಲ್ಲಿ ಮತ್ತೋರ್ವ ಪ್ರೇಮಿಯೊಂದಿಗೆ ಚಕ್ಕಂದವಾಡುತ್ತಾ ಹೊಗಳಿಕೆಯ ಹೊನ್ನ ಮುತ್ತುಗಳನ್ನೆ ಪ್ರೇಯಸಿಯ ಮೇಲೆ ಸೂರೆಗೈವ ಈ ಮಾತು...

ಕನಕಮೂರ್ತಿ : ಋತುರಾಜನಾಜ್ಞೆಗನುಸರಿಸಿ ಚಿಗುರೆಲೆಗಳ ಚಾಚಿ ಮಿಂಚುವ ತೆಂಗರಿ, ಮಾಂದಳಿರ ಗೊಂಚಲಲಿ ಯಾರಿಗೊ ಹೊಂಚು ಹಾಕಿ ಕುಳಿತು ಇಂಚರದಿ ಉಲಿವ ಗೀಳಿಡುವ ಗಿಳಿ ಕೋಗಿಲೆ ಕಾಮಳ್ಳಿಗಳು ನಾಚಬೇಕು ನಿನ್ನ ಕಂಬು ಕಂಠದ ಕಲರವದ ಹಾಡಿಗೆ. ದುಂಬಿ ಝೇಂಕಾರವಿದು ಹೊಸತೊಂದು ಅಲಂಕಾರ ತಂದಿದೆ ನಾವಲೆವ ಈ ಕಾಡಿಗೆ, ನಮ್ಮೀ ಅನುರಾಗವಿದು ಅನುಕರಣೀಯವಾಗಲಿ ಪ್ರೇಮಿಗಳಜೋಡಿಗೆ, ಸುಳಿಗಾಳಿಯಿಂದಾಗಿ ತಿಳಿಗೊಳದಿ ಏಳುತಿಹ ಅಲೆ ಅಲೆಗಳ ತಲೆ ತಲೆಯ ಮೇಲೀಜುತಿಹ ಅಂಚೆ, ಪ್ರಪಂಚವನ್ನೇ ಮರೆತು ಭ್ರಮೆಗೊಳ್ಳಬೇಕು ಈ ನಿನ್ನ ವನಪಿನಾ ನಡಿಗೆಗೆ, ಹರ್ಷೋದ್ಗಾರದಿ ಕೇಕೆಹಾಕಿ ಮೇಘನಾಥನಿಗಾಹ್ವಾನವಿತ್ತು ಮತ್ತೇರಿ ಗರಿಗೆದರಿ ನಾಟ್ಯವಾಡುವ ಮೃದು ಯೌವನದ ಮಯೂರ ಬೆರಗಾಗಬೇಕು ಈ ಹುಡುಗಿಗೆ ನಾಟ್ಯವಾಡಿದ ಬೆಡಗಿಗೆ...

"ವರ ನೋಡಿ ಹೆಣ್ಣು ಕೊಡು" ನಾಟಕದ ಈ ಎರಡು ಸನ್ನಿವೇಶದಲ್ಲಿ ನಾಟಕಕಾರ ಕೆ.ಎನ್. ಸಾಳುಂಕೆಯವರು ಶೃಂಗಾರ ರಸವನ್ನು ಪ್ರೇಕ್ಷಕರ ಕಿವಿಯಲ್ಲಿ ಹಿಂಡಿಬಿಟ್ಟಿದ್ದಾರೆ. ಯಾರೋ ಸಾಹಿತ್ಯಾಸಕ್ತ ರಸಿಕ ಮಹಾಶಯರು ಅವರಿಗೆ ಕಲಿಯುಗದ ಕಾಳಿದಾಸ ಎಂದು ಕರೆದಿದ್ದರಂತೆ. ಬಹುಶ ಆ ಮಾತು ಈ ಸಾಹಿತ್ಯವನ್ನು ಕುರಿತೇ ಹೇಳಿರಬಹುದು.

ಆ ನಂತರ ಅಬ್ದುಲ್‌ಸಾಬರು ಇದೆ ಕಂಪನಿಯ ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಮೊದಲು ಮಲ್ಲಮ್ಮನ ಆರಾಧ್ಯದೈವ ಮಲ್ಲಿಕಾರ್ಜುನನ ಪಾತ್ರವಹಿಸಿ ನಂತರ ಮಲ್ಲಮ್ಮನ ಮೈದುನನಾದ ವೇಮಣ್ಣನ ಪಾತ್ರದಲ್ಲಿ ಅಭಿನಯಿಸುತ್ತಿದ್ದರು. ಈ ಎರಡೂ ಪಾತ್ರಗಳು ವಿಭಿನ್ನವಾದವುಗಳು. ಒಂದು ಭಕ್ತಿಭಾವವನ್ನೆ ಮೈವೆತ್ತಿದಂತೆ ಉದ್ದೀಪಿಸುವ ಶ್ರೀಶೈಲ ಕ್ಷೇತ್ರಾಧಿದೇವತೆ ಮಲ್ಲಿಕಾರ್ಜುನನ ಪಾತ್ರ. ಮತ್ತೊಂದು ವಿಲಾಸ ವೈಭೋಗಗಳನ್ನೆ ಆವಾಹಿಸಿಕೊಂಡಂತಿದ್ದ ವೇಮಣ್ಣನ ಪಾತ್ರ. ಎರಡೂ ಸಂಗೀತಮಯ ಪಾತ್ರಗಳೆ ಆದ್ದರಿಂದ ಸಂಗೀತಬಲ್ಲ ಅಬ್ದುಲ್‌ಸಾಬರು ಈ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಲು ಕಷ್ಟವಾಗುತ್ತಿರಲಿಲ್ಲ. ಈ ನಾಟಕದ ಉತ್ತರಾರ್ಧದಲ್ಲಿ ಬರುವ ಭೋಗಿ

ವೇಮಣ್ಣ ಅತ್ತಿಗೆ ಮಲ್ಲಮ್ಮನ ಮಹಿಮೆಯಿಂದ ತ್ಯಾಗಿ, ವಿರಾಗಿ, ಯೋಗಿವೇಮಣ್ಣನಾಗಿ ಬದಲಾಗುವ ಸನ್ನಿವೇಶದಲ್ಲಿ ಅಬ್ದುಲ್‌ಸಾಬರ ಅಭಿನಯ ಸಾಮರ್ಥ್ಯವನ್ನು ಕಣ್ಣಾರೆ ಕಂಡ ಲಕ್ಷಾಂತರ ಪ್ರೇಕ್ಷಕರಲ್ಲಿ ನಾನೂ ಒಬ್ಬ.

ಅದು ೧೯೮೮ರಲ್ಲೇ ಇಸ್ವಿ, ನಾನು ರಾಣೆಬೆನ್ನೂರಿನ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ರೋಣತಾಲೂಕ ಮುಸಿಗೇರೆ ಕ್ಯಾಂಪಿನಲ್ಲಿ ಇದೇ ಹೇಮರೆಡ್ಡಿ ಮಲ್ಲಮ್ಮನ ನಾಟಕಕ್ಕೆ ಅತಿಥಿ ಕಲಾವಿದರನ್ನಾಗಿ ಅಬ್ದುಲ್‌ಸಾಬರನ್ನು ನಮ್ಮ ಸಂಘದ ಮುಖ್ಯಸ್ಥರಾಗಿದ್ದ ಮದ್ದೂರ ಮರಿಯಣ್ಣನವರು ಆಮಂತ್ರಿಸಿದಾಗ ನಾನು ಮಲ್ಲಮ್ಮನ ಮಾವ ಹೇಮರೆಡ್ಡಿಯ ಪಾತ್ರ ಮಾಡುತ್ತಿದ್ದೆ. ಹೀಗಾಗಿ ಅಬ್ದುಲ್‌ಸಾಬರ ವೇಮಣ್ಣನ ಪಾತ್ರವನ್ನು ನೋಡುವ ಸುಯೋಗ ನನಗೆ ಲಭಿಸಿತ್ತು. ಸದಾ ಭೋಗಲಾಲಸೆಯಿಂದ ವೇಶ್ಯಾ ಸಹವಾಸದಲ್ಲಿದ್ದ ವೇಮಣ್ಣನಿಗೆ ಪರಿವರ್ತನೆ ಕಾಲ ಕೂಡಿಬರುತ್ತದೆ.

ವೇಶ್ಯೆಯ ಕೋರಿಕೆಯಂತೆ ವೇಮಣ್ಣ ಅತ್ತಿಗೆಯಾದ ಮಲ್ಲಮ್ಮನ ಮುತ್ತಿನ ಮೂಗುತಿಯನ್ನು ಬೇಡುತ್ತಾನೆ. ಆಗ ಮಲ್ಲಮ್ಮ 'ಆ ವೇಶ್ಯೆಯು ಬತ್ತಲೆಯಾಗಿ ಬಂದು ನಿನ್ನ ಮಂಚವನ್ನು ಮೂರು ಸಲ ಸುತ್ತು ಹಾಕುವ ಕರಾರಿನೊಂದಿಗೆ ನೀನು ಈ ಮೂಗುತಿಯನ್ನು ನಿನ್ನ ಸೂಳೆಗೆ ಕೊಡು' ಎಂದು ಮೂಗುತಿ ಕೊಟ್ಟು ಕಳಿಸುತ್ತಾಳೆ. ಈ ಕರಾರನ್ನು ಕೇಳಿದ ವೇಶ್ಯೆ ನಗುತ್ತಾ ನತ್ತು ಪಡೆದು ವೇಮಣ್ಣನ ಎದುರಿನಲ್ಲಿ ವಿವಸ್ತ್ರಳಾಗಿ ಆತನ ಮಂಚವನ್ನು ಮೂರು ಸಲ ಸುತ್ತು ಹಾಕುತ್ತಾಳೆ. ಈ ಸನ್ನಿವೇಶವನ್ನು ಶ್ಯಾಡೋ ಪರದೆಯಲ್ಲಿ ತುಂಬಾ ಪರಿಣಾಮಕಾರಿಯಾಗಿ ತೋರಿಸಲಾಗುತ್ತಿತ್ತು.

ಆ ದೃಶ್ಯದಲ್ಲಿ ಭೋಗಜೀವನದಿಂದ ತ್ಯಾಗಜೀವನಕ್ಕೆ ಪರಿವರ್ತಿತವಾಗುವಲ್ಲಿನ ಅಬ್ದುಲ್‌ಸಾಬರ ಅಭಿನಯ ಹೃದಯಸ್ಪರ್ಶಿಯಾಗಿರುತ್ತಿತ್ತು. ಕರ್ನಾಟಕ ಕವಿಚಂದ್ರ ಬಿರುದಾಂಕಿತರಾದ ನಲವಡಿ ಶ್ರೀಕಂಠಶಾಸ್ತ್ರಿಗಳು ಆ ಸಂದರ್ಭಕ್ಕೆ ರಚಿಸಿದ ಹೃದಯಂಗಮ ಸಾಹಿತ್ಯ, ಅದನ್ನು ಅನುಭವಿಸಿ ಆವಾಹಿಸಿಕೊಂಡು ಅಭಿವ್ಯಕ್ತಗೊಳಿಸಿದ ಪರಿ ಅಬ್ದುಲ್‌ಸಾಬರಲ್ಲಿನ ಪರಿಪೂರ್ಣ ಕಲಾವಿದನನ್ನು ಒರೆಗೆ ಹಚ್ಚಿ ಹೊರಗೆಡವಿ ಬಿಡುತ್ತಿತ್ತು.

ವೇಮಣ್ಣ : (ಪಶ್ಚಾತ್ತಾಪದಿಂದ) ನೋಡಿದೆನು ತಬ್ಬಿ ಮುದ್ದಿಟ್ಟು ಮೋಹಿಸಿದ ಬತ್ತಲೆಯಾಗಿ ಬಂದ ವೇಶ್ಯೆಯನು ಕಣ್ತೆರೆದು ನೋಡಿದೆನು. ಮುಟ್ಟಿ, ಆಲಂಗಿಸಿ, ಮುಳುಗಿ, ತೇಲಿದ ನರಕದ ಕುಂಡವನ್ನು ನೋಡಿದೆನು. ಬಿಗಿದು ಅಗಿದು ಬಾಯಿಟ್ಟು ಭೋಗಿಸಿದೆ, ಸದಾಸ್ರವಿಸುವ ಮೂತ್ರಲಾಲಾ ಮಲಕ್ಲಿನ್ನವಾದ ಮಾಂಸ ಮಜ್ಜಾಸ್ಥಿಗಳ ಪಂಜರವನ್ನು ನೋಡಿದೆನು, ಹೇಸಿಕೆಯಲ್ಲಿ ಮೊಳೆತ ಹೇಯವಾದ ಕಾರ್ಯಗಳನ್ನು ಕಂಡು ಹೇಸಿದೆನು, ಮೂಗುತಿಯನ್ನು ಕೊಟ್ಟು ಪಾಪದಿಂದ ಎಚ್ಚೆತ್ತೆನು. ತಾಯೇ, ಮಲ್ಲಮಾಂಬೆ ಈ ರೀತಿ ನೀನು ನನ್ನ ಕಣ್ಣ ಕತ್ತಲೆಯನ್ನು ಬಿಡಿಸಿದೆ. ದಿಗಂಬರೆಯಾಗಿ ಬಂದು ನನ್ನ ಮಂಚವನ್ನು ಸುತ್ತುತ್ತಿದ್ದ ವೇಶ್ಯೆಯನ್ನು ನೋಡಿ ನನ್ನ ಮೋಹವಳಿದು ಪ್ರೇಮ ಸಡಿಲಿತು ಬೆಳಕು ಮೊಳೆಯಿತು ಹೇ ಅಮೋಘ ಜ್ಞಾನಪ್ರಧಾಯಿನಿ

ಮಾತೃಸ್ವರೂಪಿಣಿ ಮಲ್ಲಮಹಾದೇವಿ...

ಪಶ್ಚಾತ್ತಾಪದಿಂದ ಪರಿತಪಿಸುತ್ತಾ ಈ ಮಾತನ್ನು ಹೇಳುವಾಗಿನ ಅಬ್ದುಲ್‌ಸಾಬರ ಅಭಿನಯ ಅದ್ಭುತ.

ಪದ – ಆನಂದ ಭೈರವಿ

ದೀಪಚಂದ ಎನಗಾಯಿತೀದಿನವು ಸುಜ್ಞಾನ ಘನವು ॥ಪ॥ ಕನಸಿನಲ್ಲಿ ಜಾಗ್ರದಲಿ ಮಲ್ಲಮ್ಮ ಜನನಿ ಮನಸಿಗೆಗೆ ನಿತ್ಯ ನೆನಪು ॥ ಅ.ಪ॥ ಹರಿವ ಕರಣಗಳನ್ನು ಕಟ್ಟಿದೆಯೇ। ಮಲ್ಲಾಂಬೆ ನೀನ್ನಾಭರಣಾವನ್ನು ಕೊಟ್ಟು । ಮುತ್ತಿನ ಮೂಗುತಿಯ ಕೊಟ್ಟು । ದುರಿತ ಸೊಳೆಯ ಸಂಗಬಿಡಿಸಿದೆ ಕರುಣೆ ನಾ ಕಡೆಗಾಣುವ ಕ್ಷಣವು ॥೧॥

ತಾಯೆ ಹೇಯವಾದ ಭೋಗಕ್ಕಾಶಿಸಿ ದಾಸಿಗೆ ದಾಸನಾದೆ, ಮಲವನ್ನು ಅಮೃತವೆಂದು ಸವಿದೆ, ಮದ್ಯವನ್ನು ಸುರಚಿಯಾದ ಪೇಯವೆಂದು ಪಾನ ಮಾಡಿದೆ, ಪಶುವದಾಚಣೆಯಿಂದ ಜಗತ್ತಿನಲ್ಲಿ ನಿಂಧ್ಯನಾದೆ, ಕೀವುನೆತ್ತರ ಕುಡಿದು ಅದರಲ್ಲಿಯೇ ಬಿದ್ದು ಹೊರಳಿ, ಕಡೆಮುಟ್ಟದಿರುವ ನೊಣದಂತೆ, ಆತ್ಮವಿನಾಶಕ್ಕೆಡೆಯಾದವನನ್ನು ಕಾರುಣ್ಯದಿಂದ ಪಿತಾಂಬರಗಳಿಂದಲೂ ಚಿನ್ನದಾಭರಣಗಳಿಂದಲೂ ಮುಚ್ಚಿ ಬಹಿರಂಗ ಸುಂದರವಾಗಿ, ದುರ್ಗಂಧ ರಾಶಿಯಾಗಿರುವ ತರುಣಿ ಶರೀರವನ್ನು ಮೋಹಿಸಿದೆನಲ್ಲವೇ? ಇದಕ್ಕಿಂತ ಅಸ್ಥಹ್ಯವಾವುದು ಅಸ್ಪ್ರಶ್ಯವಾದು, ಹೊಲಸಾವುದು?

ಭೋಗೊನ್ಮತ್ಥನಾದ ವೇಮಣ್ಣನನ್ನು ಯೋಗಿಸಮರ್ಥನನ್ನಾಗಿ ಪರಿವರ್ತಿಸಿದ ಈ ಸನ್ನಿವೇಶದಲ್ಲಿ ಅಬ್ದುಲ್ಲಸಾಬರ ಪರಕಾಯ ಪ್ರವೇಶ ಸಿದ್ಧಿ ನಾಟಕ ನೋಡಲು ಕುಳಿತ ಪ್ರೇಕ್ಷಕರಲ್ಲಿ ರೋಮಾಂಚನವನ್ನುಂಟು ಮಾಡುತ್ತಿತ್ತು. ಅಂತೂ ಕರ್ನಾಟಕಕವಿಚಂದ್ರ ನಲವಡಿ ಶ್ರೀಕಂಠ ಶಾಸ್ತ್ರೀಗಳು ರಚಿಸಿದ ಸಂಪೂರ್ಣ ಹೇಮರಡ್ಡಿಮಲ್ಲಮ್ಮ ನಾಟಕ ಅಬ್ದುಲ್ಲಸಾಬರ ಅಭಿನಯದಲ್ಲಿ "ಸಂಪೂರ್ಣ"ಗೊಂಡಿತ್ತು.

# ಗುಬ್ಬಿ ಕಂಪನಿ ಪ್ರವೇಶ

ಡಾ॥ ಗುಬ್ಬಿ ವೀರಣ್ಣನವರ "ಗುಬ್ಬಿ ಚನ್ನಬಸವೇಶ್ವರ ಸ್ವಾಮಿ ಥಿಯೇಟ್ರಿಕಲ್ ಕಂಪನಿ ತುಮಕೂರು" ಹೌದು! ಆ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಶಾರದಾ ಸಂಗೀತ ನಾಟಕ ಮಂಡಳಿ, ಗೋಕಾಕ ಹಾಗೂ ಹಳೇ ಮೈಸೂರ ಭಾಗದಲ್ಲಿ ಈ ಗುಬ್ಬಿ ಕಂಪನಿ ಇವೆರಡೂ ಕನ್ನಡ ವೃತ್ತಿ ರಂಗಭೂಮಿಯ "ಹೆಡ್‌ಮಾಸ್ತರ್" ಇದ್ದಂತೆ. ದೃಶ್ಯವೈಭವದಲ್ಲಿ, ರಂಗತಂತ್ರದಲ್ಲಿ, ಸಮರ್ಥ ಕಲಾವಿದರನ್ನು ಪಳಗಿಸಿ ಪೋಷಿಸುವಲ್ಲಿ, ಹೊಸ ಹೊಸ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನಾಟಕಗಳನ್ನು ಬರೆಯಿಸಿ ಪ್ರದರ್ಶಿಸುವಲ್ಲಿ ಮುಂಚೂಣಿಯಲ್ಲಿದ್ದ ಕಂಪನಿಗಳು. ಗುಬ್ಬಿ ಕಂಪನಿ ಕನ್ನಡ ಚಿತ್ರರಂಗದ ಪ್ರಾರಂಭದ ಕಾಲ ಘಟ್ಟದಲ್ಲಿ ಆ ರಂಗಕ್ಕೆ ತನ್ನದೆ ಆದ ಐತಿಹಾಸಿಕ ಕೊಡುಗೆ ನೀಡಿದ ಕಂಪನಿ. ನಮ್ಮ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ಮಹಾನ್ ಕಲಾರತ್ನಗಳಾದ ಡಾ॥ ರಾಜಕುಮಾರ, ನರಸಿಂಹರಾಜು, ಉದಯಕುಮಾರ, ಬಾಲಕೃಷ್ಣ, ಪಂಡರಿಬಾಯಿ, ಮುಸರಿ ಕೃಷ್ಣಮೂರ್ತಿ, ಮುಂತಾದ ಕಲಾರತ್ನಗಳನ್ನು ಚಿತ್ರರಂಗಕ್ಕೆ ನೀಡಿದ ಹೆಗ್ಗಳಿಕೆಗೆ ಪಾತ್ರವಾದ ಕಂಪನಿ. ಅಂತಹ ಕಂಪನಿಯಲ್ಲಿ ಸೇವೆಸಲ್ಲಿಸುವ ಸದವಕಾಶ ನಮ್ಮ ಅಬ್ದುಲ್ಲಸಾಬರಿಗೆ ಆಯಾಚಿತವಾಗಿ ದೊರೆಯುತ್ತದೆ. ನುರಿತ, ನುರಿಯುವ ಸಾಮರ್ಥ್ಯವಿರುವ ಪ್ರತಿಭೆಗಳನ್ನು ಪರಿಶೋಧಿಸುವ ಚಿಕಿತ್ಸಕ ಕಣ್ಣಿನ ಗುಬ್ಬಿ ವೀರಣ್ಣನವರಿಗೆ ಅಬ್ದುಲ್ಲಸಾಬರ ಪ್ರತಿಭಾ ಪರಿಚಯ ತಿಳಿಯಲು ಹೆಚ್ಚುಸಮಯ ಬೇಕಾಗುವುದಿಲ್ಲ. ಈ ಹಿಂದೆ ಅಬ್ದುಲ್ಲಸಾಬರು ಯಾವ ಯಾವ ಕಂಪನಿಯಲ್ಲಿ ಯಾವ ಯಾವ ನಾಟಕಗಳಲ್ಲಿ, ಯಾವ ಯಾವ ಪಾತ್ರವಹಿಸಿ ಎಂತೆಂಥವರನ್ನು ಮೆಚ್ಚಿಸಿದ್ದಾರೆಂಬ ವಿಷಯ ಮನವರಿಕೆಯಾಗಿರುತ್ತದೆ.

ಅಷ್ಟರಲ್ಲಿಯೇ ಗುಬ್ಬಿ ಕಂಪನಿಯಲ್ಲಿ ದಶಾವತಾರ, ಲವಕುಶ, ಯಡೆಯೂರ ಸಿದ್ಧಲಿಂಗೇಶ್ವರ ಮಹಾತ್ಮೆ, ಸಾಹುಕಾರ, ಎಚ್ಚಮ ನಾಯಕ, ಸದಾರಮೆ, ಮುಂತಾದ ನಾಟಕಗಳು ರಂಗಭೂಮಿಯ ೨೦–೩೦ ಅಡಿ ಜಾಗೆಯಲ್ಲಿಯೇ ತಮ್ಮ ದೃಶ್ಯ, ಅಭಿನಯ, ಸಂಗೀತ, ತಂತ್ರಗಳಿಂದ ಕಿನ್ನರ ಲೋಕವನ್ನೆ ಸೃಷ್ಟಿಸಿ ಲೋಕಪ್ರಸಿದ್ಧಿ ಪಡೆದಿರುತ್ತವೆ. ಅಂಥ ಏರಿಕೆಯ ಸಮಯದಲ್ಲಿ ಅಬ್ದುಲ್ಲಸಾಬ ಪುಷ್ಪಮಾಲಾ ದಂಪತಿಗಳು ಗುಬ್ಬಿ ಕಂಪನಿ ಪ್ರವೇಶಿಸುತ್ತಾರೆ. ಹತ್ತಾರು ವರ್ಷಗಳ ಕಾಲ ಗುಬ್ಬಿ ಕಂಪನಿಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿದ ಅಬ್ದುಲ್ಲಸಾಬರಿಗೆ ಸಹಕಲಾವಿದರಾಗಿದ್ದವರು ನಟಭಯಂಕರ ರಟ್ಟಿಹಳ್ಳಿ ಗಂಗಾಧರಪ್ಪನವರು, ಗುಬ್ಬಿವೀರಣ್ಣನವರ ಮಕ್ಕಳಾದ ಜಿ.ವಿ ಚನ್ನಬಸಪ್ಪ, ಜಿ.ವಿ. ಶಿವಾನಂದ, ಹೊಸದುರ್ಗ ಚನ್ನಬಸಪ್ಪ, ವಾಸುದೇವರಾವ್ (ಬೇಬಣ್ಣ), ಜಿ.ವಿ. ಕೃಷ್ಣಾ, ರಾಧಾ, ರುಕ್ಮಿಣಿ, ಜಿ.ವಿ. ಶಾರದಾ, ರಂಗನಾಯಕಮ್ಮ, ಶಾಂತಮ್ಮ ಮುಂತಾದವರು. ಗುಬ್ಬಿ ಕಂಪನಿಯಲ್ಲಿ ಮೊದಲು ಇವರಿಗೆ ಚಿಕ್ಕ ಪುಟ್ಟ ಪಾತ್ರಗಳೆ ದೊರೆಯುತ್ತವೆ.

ಬೇರೆಯವರಾಗಿದ್ದರೆ, ಉತ್ತರ ಕರ್ನಾಟಕದ ಕಂಪನಿಗಳಲ್ಲಿ ಪ್ರಧಾನ ಭೂಮಿಕೆಯಲ್ಲಿ ಮೆರೆದ ನಟ ನಾನು, ಇಲ್ಲೇಕೆ ಸಣ್ಣ ಪಾತ್ರ ಮಾಡಲಿ? ಎನ್ನುತ್ತಿದ್ದರೊ ಏನೊ? ಆದರೆ ಅಬ್ದುಲ್ಲಸಾಬರು ಅಷ್ಟು ಸಮರ್ಥರಿದ್ದರೂ ಗುಬ್ಬಿ ಕಂಪನಿಯ ಲವಕುಶ ನಾಟಕದಲ್ಲಿ ಶತ್ರುಘ್ನನ ಹತ್ತಾರು ಮಾತುಗಳ ಚಿಕ್ಕ ಪಾತ್ರ ಮಾಡುತ್ತಾರೆ. ಇವರು ಶತ್ರುಘ್ನನ ಪಾತ್ರವನ್ನು ಮಾಡಿದ್ದನ್ನು ಕಂಡ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಗುಬ್ಬಿ ವೀರಣ್ಣನವರಿಗೆ "ಇವಾ ನಮ್ಮ ಭಾಗದಲ್ಲಿ ಮೆರೆದ ಕಲಾವಿದ. ಅಂತವನಿಗೆ ನೀವು ಸೈಡ್ ಪಾರ್ಟ ಹಾಕಿದ್ದೀರಲ್ಲಾ ವೀರಣ್ಣನವರೆ" ಎಂದು ಕೇಳಿದ್ದರಂತೆ.

ಅಬ್ದುಲ್ಲಸಾಬರು ಸೂಕ್ತ ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಆ ಅವಕಾಶ ಬರಲು ಹೆಚ್ಚು ಸಮಯ ಹಿಡಿಯುವುದಿಲ್ಲ. ಲವಕುಶದಲ್ಲಿ ಅದುವರೆಗೂ ಶ್ರೀರಾಮಚಂದ್ರನ ಪಾತ್ರ ಮಾಡುತ್ತಿದ್ದ ವೀರಣ್ಣನವರ ಪುತ್ರ ಜಿ.ವಿ. ಚನ್ನಬಸಪ್ಪನವರಿಗೆ ಕಾರಣಾಂತರಗಳಿಂದ ಎಲ್ಲಗೋ ಹೋಗುವ ಅನಿವಾರ್ಯತೆ ಬರುತ್ತದೆ. ಆದರೆ ರಾಮನ ಪಾತ್ರ ಯಾರಿಗೆ ಹಾಕುವುದು? ಆಗ ಅವರು ವೀರಣ್ಣನವರಿಗೆ ಕೇಳಲಾಗಿ ಅವರು ಹಾಕಯ್ಯ ಅಬ್ದುಲ್ಲಸಾಬನಿಗೆ ಎಂದು ಹೇಳುತ್ತಾರೆ. ನಾಲ್ಕುದಿನದ ಮಟ್ಟಿಗೆ ರಾಮಚಂದ್ರನ ಪಾತ್ರ ಮಾಡಲು ಅವಕಾಶ ಸಿಗುತ್ತದೆ. ಮೊದಲೇ ಆ ಪಾತ್ರದ ಮೇಲೆ ಕಣ್ಣಿಟ್ಟು ಒಳಗೊಳಗೆ ಆ ಪಾತ್ರವನ್ನು ಆವಾಹಿಸಿಕೊಂಡು ಹದವಾಗಿ ಕುಳಿತಿದ್ದ ಅಬ್ದುಲ್‌ಸಾಬರು ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಮೊದಲ ದಿನ ಸ್ವಲ್ಪ ಅಸ್ತವ್ಯಸ್ಥವಾದ ಪಾತ್ರ ಮಾರನೇ ದಿನದಿಂದ ದಿನಕ್ಕೆ ಪರಿಪಕ್ವವಾಗುತ್ತಾ ಇನ್ನು ಆ ಪಾತ್ರ ಬೇರೆಯವರು ಮಾಡಬಾರದು ಎಂಬಷ್ಟರ ಮಟ್ಟಿಗೆ ಅಬ್ದುಲ್‌ಸಾಬರ ಅಮೋಘ ಅಭಿನಯ ಹಾಡುಗಾರಿಕೆಯಿಂದ ಮೆರಗು ಪಡೆಯುತ್ತದೆ. ಚನ್ನಬಸಪ್ಪನವರು ವೀರಣ್ಣನವರು ಹೇಳಿದಂತೆ ರಾಮನ ಪಾತ್ರವನ್ನೇನೊ ಇವರಿಗೆ ಹಾಕುತ್ತಾರೆ ಆದರೆ ಒಳಗೊಳಗೇ ಅಳುಕು, ಹೇಗೆ ಮಾಡುತ್ತಾನೋ ಎಂದು. ಆ ಕಾರಣಕ್ಕೆ ಅಂದೇ ಹೊರಡಬೇಕಿದ್ದ ಅವರು ಅಂದು ನಾಟಕ ನೋಡಲು ಕುಳಿತುಕೊಳ್ಳುತ್ತಾರೆ.

ಉತ್ತರ ಕರ್ನಾಟಕದ ಹಲವಾರು ಜನಪ್ರಿಯ ಕಂಪನಿಗಳಲ್ಲಿ ಅತಿರಥ ಮಹಾರಥರ ಸತ್ಸಂಗದಲ್ಲಿ ಪಳಗಿದ್ದ ಅಬ್ದುಲ್‌ಸಾಬರು ರಾಮನ ಪಾತ್ರದಲ್ಲಿ ಅಮೋಘ ಅಭಿನಯ ನೀಡಿರುತ್ತಾರೆ. ಆಗಲೇ ಚನ್ನಬಸಪ್ಪನವರು ಧೈರ್ಯದಿಂದ ಊರಿಗೆ ಹೋಗುತ್ತಾರೆ. ನಾಲ್ಕು ದಿನದ ನಂತರ ಮರಳಿ ಬಂದ ಅವರಿಗೆ ವೀರಣ್ಣನವರು ಅಬ್ದುಲ್‌ಸಾಬನೇ ಆ ಪಾತ್ರ ಮಾಡಲಿ ಎಂದು "ಅಬ್ದುಲ್‌ಸಾಬ ಆ ಪಾತ್ರ ನೀನೆ ಮುಂದುವರೆಸಿಬಿಡು" ಎಂದು ಸಂಪೂರ್ಣ ಅವಕಾಶ ನೀಡುತ್ತಾರೆ. ಆದರೆ ೫೦–೧೦೦ನೇ ವಿಶೇಷ ಪ್ರಯೋಗಕ್ಕೆ ಚನ್ನಬಸಪ್ಪನವರೇ ರಾಮನ ಪಾತ್ರ ಮಾಡುತ್ತಾರೆ. ಏಕೆಂದರೆ ಆ ಪ್ರದರ್ಶನಕ್ಕೆ ಮಠಾಧೀಶರು, ಸಾಹಿತಿಗಳು, ಮಂತ್ರಿ ಮಹೋದಯರು, ಅತಿಥಿಗಳಾಗಿ ಬಂದಿರುತ್ತಾರಲ್ಲ ಬಹುಶಃ ಇದು ಎಲ್ಲ ಕಂಪನಿ ಮಾಲಕರ ಸ್ವಾರ್ಥಬುದ್ಧಿ ಎಂದು ಹೇಳದೆ ವಿಧಿ ಇಲ್ಲ. ಬಹುಶಃ ಈ ಕಾರಣಕ್ಕೇ ಇರಬೇಕು ಅಬ್ದುಲ್‌ಸಾಬರು "ನೀವು ಕಂಬಾ ಸುತ್ತು ಅಂದ್ರೂ ಸರಿ ಪಗಾರ ಕೊಡ್ರಿ" ಎಂದು ನಿರ್ಲಿಪ್ತವಾಗಿ ಮಾತಾಡಿದ್ದು.

ಅಬ್ದುಲ್‌ಸಾಬರು ರಾಮನ ಪಾತ್ರ ಮಾಡುತ್ತ ಒಂದು ವಾರ ಕಳೆದಿರುತ್ತದೆ. ಅವರ ಪಾತ್ರ ನೋಡಿದ ಪ್ರೇಕ್ಷಕರಿಗಷ್ಟೇ ಅಲ್ಲ ಕಂಪನಿಯಲ್ಲಿರುವ ಹಿರಿ ಕಿರಿಯ ಕಲಾವಿದರಿಗೂ ತುಂಬಾ ಮೆಚ್ಚುಗೆಯಾಗಿ ಈ ವಿಷಯ ವೀರಣ್ಣನವರಿಗೆ ತಲುಪಿ ಅವರು ಒಂದುದಿನ ಮುಸುಕು ಹಾಕಿಕೊಂಡು ಜನರಲ್ಲಿ ಕುಳಿತು ನಾಟಕ ನೋಡುತ್ತಾರೆ. ಆದರೆ ತಮ್ಮ ಮಗ ಚನ್ನಬಸಪ್ಪ ಹಾಕುತ್ತಿದ್ದ ರಾಮನ ಪಾತ್ರದ ಪೋಷಾಕುಗಳು ಅಬ್ದುಲ್‌ಸಾಬನ ಮೈ ಮೇಲೆ ಇರುವುದೇ ಇಲ್ಲ. ಅಲ್ಲಲ್ಲಿ ಹರಿದ ರಾಮನ ಪೋಷಾಕುಗಳನ್ನು ನೋಡಿದ ವೀರಣ್ಣನವರು ಮಾರನೇದಿನ ಚನ್ನಬಸಪ್ಪನವರಿಗೆ "ಚನ್ನಬಸಪ್ಪ ನೀನು ಮಾಡುವ ರಾಮಾ, ಅಬ್ದುಲ್‌ಸಾಬ ಮಾಡುವ ರಾಮ ಬೇರೆ ಬೇರೆ ಏನಯ್ಯಾ? ಯಾಕಯ್ಯಾ ಹೀಗೆ ಮಾಡ್ತೀರಿ, ಕೊಡಯ್ಯಾ ಅಬ್ದುಲ್‌ಸಾಬನಿಗೆ ನೀ ಹಾಕುತ್ತಿದ್ದ ಎಲ್ಲಾ ಪೋಷಾಕುಗಳನ್ನು" ಎಂದು ಹೇಳಿ ಹೊಸ ಹೊಸ ಡ್ರೆಸ್‌ಗಳನ್ನು ಕೊಡಿಸುತ್ತಾರೆ.

ಹೊಸ ಹೊಸ ಉಡುಪುಗಳು ಮೈ ಮೇಲಿನ ಆಭರಣಗಳು ಕೇಳಬೇಕೆ? ಅಬ್ದುಲ್‌ಸಾಬರ ಗಾನಾಭಿನಯದ ಶ್ರೀರಾಮಚಂದ್ರ ಮತ್ತಷ್ಟು ಮೆರಗು ಪಡೆಯುತ್ತಾನೆ. ಅವರಿಗೆ ಮೊದಲು ಕೊಟ್ಟಿದ್ದ ಹಳೆ ಡ್ರೆಸ್‌ಗಳನ್ನು ಗುಬ್ಬಿ ವೀರಣ್ಣನವರು ತಾವೇ ಮುಂದೆ ನಿಂತು ಥೇಟರ್ ಹಿಂದೆ ಸುಟ್ಟು ಹಾಕಿಸುತ್ತಾರೆ. ಆ ಡ್ರೆಸ್ ಸುಟ್ಟಾಗ ಅದರಲ್ಲಿ ೮೦ ಗ್ರಾಂ ಬೆಳ್ಳಿ ದೊರೆಯುತ್ತದೆ. ಗುಬ್ಬಿ ಕಂಪನಿಯ ವೈಭವಕ್ಕೆ ಇದೊಂದು ಸಣ್ಣ ಉದಾಹರಣೆ.

ಅಂತೂ ಗುಬ್ಬಿ ಕಂಪನಿಯಲ್ಲಿ ಲವಕುಶ ನಾಟಕದಲ್ಲಿ ಶ್ರೀರಾಮಚಂದ್ರನ ಪಾತ್ರ! ಅದೂ ಒಬ್ಬ ಮುಸಲ್ಮಾನ ಕಲಾವಿದನಿಂದ. ಯಾವ ಲೋಕೋತ್ತಮನಾದ ಶ್ರೀರಾಮಚಂದ್ರನ ಹೆಸರನ್ನೇ ಮುಂದಿಟ್ಟುಕೊಂಡು ಒಂದು ವರ್ಗ ಹಿಂದುತ್ವವನ್ನು ಪ್ರತಿಪಾದಿಸುತ್ತಾ ಹೊರಟಿದೆಯೋ ಅದೇ ಶ್ರೀರಾಮಚಂದ್ರನ ಪಾತ್ರವನ್ನು ಒಬ್ಬ ಮುಸ್ಲಿಂ ಕಲಾವಿದ ನಿರ್ವಹಿಸಿದ್ದು, ಇದೇ ನಮ್ಮ ರಂಗಭೂಮಿಯ ಹಿರಿಮೆ. ಕಲೆಗೆ ಜಾತಿಇಲ್ಲಾ, ಧರ್ಮವಿಲ್ಲಾ, ಆ ದೇವರು ಈ ದೇವರೆಂಬ ಭಿನ್ನ ಭೇದವಿಲ್ಲಾ. ಕೇವಲ ಕಲೆ, ಕಲೆ, ಕಲೆ. ಭಲೇ ರಂಗಭೂಮಿ.

# ಶ್ರೀ ಯಡೆಯೂರು ಸಿದ್ದಲಿಂಗೇಶ್ವರ ಮಹಾತ್ಮೆ

ಗುಬ್ಬಿ ಕಂಪನಿಯಲ್ಲಿ ಈ ನಾಟಕ ಅಬ್ದುಲ್‌ಸಾಬರ ಸಿದ್ದಲಿಂಗೇಶ್ವರರ ಪಾತ್ರಾಭಿನಯದಲ್ಲಿ ಕರ್ನಾಟಕದಾದ್ಯಂತ ಜಯಭೇರಿ ಬಾರಿಸುತ್ತದೆ. ೧೫ ನೇ ಶತಮಾನದಲ್ಲಿ ಅವತರಿಸಿದ, ೧೨ನೇ ಶತಮಾನದ ಅಲ್ಲಮಪ್ರಭುಗಳ ಅವತಾರವೆಂದೇ ಪ್ರತೀತಿ ಇರುವ ಶರಣ ಶ್ರೇಷ್ಠರಾದ ತೋಂಟದ ಸಿದ್ದಲಿಂಗ ಯತಿಗಳ ಅಮರ ಚರಿತ್ರೆಯನ್ನೊಳಗೊಂಡ ಈ ನಾಟಕ ತನ್ನ ದೃಶ್ಯ ವೈಭವದಿಂದ ಸಿನಿಮಾಕ್ಕೇ ಸವಾಲೊಡ್ಡುವ ತೆರದಲ್ಲಿ ಪ್ರಯೋಗಗೊಳ್ಳುತ್ತದೆ. ಹುಬ್ಬಳ್ಳಿಯಲ್ಲಿ ಈ ನಾಟಕ ಪ್ರದರ್ಶನ ನಡೆದಾಗ ಇದನ್ನು ಸಿನಿಮಾಕ್ಕೆ ಅಳವಡಿಸುವ ಪ್ರಯತ್ನವಾಗಿ ಖ್ಯಾತ ಚಲನಚಿತ್ರ ನಿರ್ದೇಶಕ ಹುಣಸೂರು ಕೃಷ್ಣಮೂರ್ತಿಯವರು ತಮ್ಮ ಸಿಬ್ಬಂದಿಯವರೊಂದಿಗೆ ಹುಬ್ಬಳ್ಳಿಯಲ್ಲಿ ಒಂದುವಾರ ಕ್ಯಾಂಪ್ ಮಾಡಿ ನಿತ್ಯವು ಅಬ್ದುಲ್ಲಸಾಬರ ಅಭಿನಯದ ಯಡೆಯೂರು ಸಿದ್ಧಲಿಂಗೇಶ್ವರ ನಾಟಕ ನೋಡುತ್ತಾರೆ.

ಅಬ್ದುಲ್ಲಸಾಬರನ್ನು ತಾವಿದ್ದ ಆನಂದ ಲಾಜ್‌ಗೆ ಬರಮಾಡಿಕೊಂಡು ಸಿದ್ಧಲಿಂಗೇಶ್ವರರ ಪಾತ್ರವನ್ನು ನಿನಗೇ ಹಾಕುತ್ತೇನೆ. ಎಂಬ ಆಶ್ವಾಸನೆ ಕೊಡುತ್ತಾರೆ. ಆದರೆ ಚಿತ್ರರಂಗದವರ ಒಳರಾಜಕಾರಣ ಅಬ್ದುಲ್ಲಸಾಬರಿಗಿದ್ದ ಪಾತ್ರವನ್ನು ತಪ್ಪಿಸಿ ಚಿತ್ರನಟ ಲೋಕೇಶ ಅವರಿಗೆ ವರ್ಗಾಯಿಸುವಲ್ಲಿ ಸಫಲವಾಗುತ್ತದೆ. ಅದಕ್ಕೆ ಕಾರಣ ಜಾತಿ!... ಒಬ್ಬ ಸಾಬನಿಂದ ಶರಣರ ಪಾತ್ರ ಮಾಡಿಸುವುದೇ? ನಾಳೆ ಚಿತ್ರ ರಿಲೀಸ್ ಆದ ನಂತರ ಜನ ಚಿತ್ರ ನೋಡಿ ಮೆಚ್ಚಿಕೊಂಡು ಸಿದ್ಧಲಿಂಗೇಶ್ವರರ ಪಾತ್ರದಲ್ಲಿದ್ದ ಸಾಬನನ್ನು ಪೂಜಿಸಲು ನಿಂತರೆ? ಈ ಪೂರ್ವಗ್ರಹ ಚಿತ್ರರಂಗದಲ್ಲಿ ಕೆಲವರಿಗೆ ಕಾಡಿ ಹುಣಸೂರರ ಮನವೊಲಿಸಿ ಅಬ್ದುಲ್ಲಸಾಬರಿಗಿದ್ದ ಸಿದ್ಧಲಿಂಗೇಶ್ವರರ ಪಾತ್ರವನ್ನು ತಪ್ಪಿಸಿ ಲೋಕೇಶರಿಗೆ ಹಾಕಿಸುವಲ್ಲಿ ಯಶ ಕಾಣುತ್ತಾರೆ. ಲೋಕೇಶರು ಕೂಡಾ ಸಮರ್ಥ ಕಲಾವಿದರೆ ಅದರಲ್ಲಿ ಎರಡು ಮಾತಿಲ್ಲ. ಅವರಿಗೇನಾದರೂ ಈ ಜನರ ಒಳರಾಜಕಾರಣ ಕುತಂತ್ರ ತಿಳಿದಿದ್ದರೆ ಬಹುಶಃ ಅವರೆ ಆ ಪಾತ್ರಕ್ಕೆ ಒಪ್ಪದೆ ಅಬ್ದುಲ್ಲಸಾಬರಿಂದಲೇ ಆ ಪಾತ್ರ ಮಾಡಿಸುತ್ತಿದ್ದರೇನೋ. ಏಕೆಂದರೆ, ಅವರೂ ಕೂಡಾ ನಮ್ಮ ಕನ್ನಡ ರಂಗಭೂಮಿಯ ಕೊಡುಗೆಯೇ ಅಲ್ಲವೇ? ರಂಗಭೂಮಿಯ ಹುಲಿ ಸುಬ್ಬಯ್ಯನಾಯ್ಡು ಅವರ ಸುಪುತ್ರರಲ್ಲವೇ?

ಬಹುಶಃ ಈ ಜಾತಿಪೀಡಿತ ಸಾಂಸ್ಕೃತಿಕ ರಾಜಕಾರಣಿಗಳಿಗೆ ಶರಣರ ತತ್ವಸಿದ್ಧಾಂತಗಳು ತಿಳಿದಿರಲಿಲ್ಲವೆಂದು ಕಾಣುತ್ತದೆ. "ಇವನಾರವ ಇವನಾರವನೆಂದೆಣಿಸದೇ ಸಕಲ ಜೀವಾತ್ಮರನ್ನು ಇವನಮ್ಮವ ಇವನಮ್ಮವ" ಎಂದು ಗೌರವಿಸಿದ ಶರಣರ ತತ್ವಾದರ್ಶಗಳು ಇವರಿಗೆ ಅರ್ಥವಾಗಿದ್ದರೆ ಅಬ್ದುಲ್ಲಸಾಬರು ಸಿನಿಮಾದಲ್ಲಿ ಯಡೆಯೂರು ಸಿದ್ಧಲಿಂಗೇಶ್ವರರ ಪಾತ್ರದಿಂದ ವಂಚಿತರಾಗುತ್ತಿರಲಿಲ್ಲ. ದುರ್ದೈವಿ ಅಬ್ದುಲಸಾಬ್.

ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಅದೊಂದು ಹಾಡು ಬರುತ್ತದೆ.

ಕಳಕೊಂಡೆ ನಾ ಕಳಕೊಂಡೆ

ಮೂರು ಮಲಗಳನು ತೊಳಕೊಂಡೆ

ಸತ್ಯ ಯಾವುದೆಂಬುದನು ತಿಳಕೊಂಡೆ.

ಮನಸ್ಸಿಗೆ ಈ ತರಹದ ನೋವಾದಾಗಲೆಲ್ಲ ಅಬ್ದುಲ್ಲಸಾಬರು ಈ ಹಾಡು ಗುನುಗುಡುತ್ತಾ ನೊವು ಮರೆಯುವ ಪ್ರಯತ್ನ ಮಾಡುತ್ತಾರೆ.

ಉತ್ತರ ಕರ್ನಾಟಕದಲ್ಲಿ ದೊರೆಯದಿದ್ದ ಒಂದು ವಿಶೇಷ ಗೌರವ ಲಾಭ ಗುಬ್ಬಿ ಕಂಪನಿಗೆ ಹೋದ ನಂತರ ಇವರಿಗೆ ಸಿಗುತ್ತದೆ. ಅದೆ ಪ್ರತಿಕಾ ವಿಮರ್ಶೆಗಳು ಈ ಭಾಗದ ನಾಟಕ ಕಂಪನಿಗಳಲ್ಲಿ ವೈವಿಧ್ಯಮಯ ನಾಟಕಗಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಿದ್ದರೂ ಒಂದೇ ಒಂದು ಪ್ರತಿಕಾ ವಿಮರ್ಶೆ ಬಂದಿರುವುದಿಲ್ಲ. ಆದರೆ ಗುಬ್ಬಿ ಕಂಪನಿಯಲ್ಲಿ ಶ್ರೀರಾಮಚಂದ್ರನ ಪಾತ್ರಕ್ಕೆ ತೋಂಟದ ಸಿದ್ಧಲಿಂಗೇಶ್ವರರ ಪಾತ್ರಕ್ಕೆ ತುಂಬಾ ಮೆಚ್ಚುಗೆಯ ಮಾತುಗಳನ್ನು ದೊಡ್ಡ ದೊಡ್ಡ ಪತ್ರಿಕೆಗಳು ಬರೆದು ಪ್ರೋತ್ಸಾಹಿಸಿದವು. ಶ್ರೀರಾಮನ ಪಾತ್ರವನ್ನು ಸ್ವತಹಾ ಗುಬ್ಬಿ ವೀರಣ್ಣನವರೆ ಮೆಚ್ಚಿಕೊಂಡಿದ್ದನ್ನು ಈ ಹಿಂದೆಯೇ ಹೇಳಲಾಗಿದೆ. ಒಂದು ಸಲ ರಾಮನ ಪಾತ್ರದಲ್ಲಿದ್ದ ಅಬ್ದುಲ್ಲಸಾಬರು ಪಾದಕ್ಕೆ ಸರಿಯಾಗಿ ಬಣ್ಣ ಹಚ್ಚಿರಲಿಲ್ಲವಂತೆ. ಏಕೆಂದರೆ, ರಾಮನ ಪಾತ್ರವೆಂದರೆ ಮೈತುಂಬಾ ಕಂದು ನೀಲಿ ಬಣ್ಣವನ್ನು ಬಳೆಯುತ್ತಿದ್ದರಂತೆ. ಅಂದು ಸ್ವಲ್ಪ ಪಾದದ ಬಣ್ಣ ಕಡಿಮೆ ಆಗಿದ್ದಕ್ಕೆ ವೀರಣ್ಣನವರು ಅದನ್ನು ಗಮನಿಸಿ ಅಬ್ದುಲ್ಲಸಾಬರನ್ನು ಕರೆತರಲು ಕಳಿಸುತ್ತಾರೆ. ಯಜಮಾನರು ಕರೆಯುತ್ತಿದ್ದಾರೆ ಎಂದು ಹೇಳಿದಾಗ ಅಬ್ದುಲ್ಲಸಾಬರು ಅಂಜಂಜುತ್ತಲೇ ಅವರ ಬಳಿಗೆ ಹೋಗುತ್ತಾರೆ.

"ಅಬ್ದುಲಸಾಬಾ ಗುಬ್ಬಿ ಕಂಪನಿಯಲ್ಲಿ ಬಣ್ಣಕ್ಕೆ ಕೊರತೆಯಾಗಿದೆಯೇನಯ್ಯ"? ಎಂದು ಕೇಳಿದ್ದರಂತೆ.

ತಕ್ಷಣವೇ ಎಚ್ಚತ್ತುಕೊಂಡ ಅಬ್ದುಲ್ಲಸಾಬರು ವೀರಣ್ಣನವರಲ್ಲಿ ಕ್ಷಮೆ ಕೇಳಿ ಮರುದಿನದಿಂದ ಪಾದದ ಬಣ್ಣ ಸರಿಪಡಿಸಿಕೊಂಡರಂತೆ. ವಿಶೇಷ ಪ್ರದರ್ಶನದಂದು ತಮ್ಮ ಮಗ ಚನ್ನಬಸಪ್ಪನವರು ರಾಮನ ಪಾತ್ರ ಮಾಡಿದರೆ ಗುಬ್ಬಿ ವೀರಣ್ಣನವರು "ಏಕೆ? ಅಬ್ದುಲ್ಲಸಾಬ ಇಲ್ಲವೇನಯ್ಯ, ಅಯ್ಯೋ ಏನು ನಿನ್ನ ರಾಮನ ಪಾತ್ರವೋ" ಎಂದು ಅಸಮಾದಾನ ವ್ಯಕ್ತಪಡಿಸುತ್ತಿದ್ದರಂತೆ.

ಮಗನೆಂಬ ಮಮಕಾರವನ್ನೂ ಬದಿಗಿಟ್ಟು ಅಬ್ದುಲ್ಲಸಾಬರ ಪಾತ್ರದ ಬಗ್ಗೆ ಒಲವು ತೋರುತ್ತಿದ್ದ ವೀರಣ್ಣನವರು ಅಬ್ದುಲ್ಲಸಾಬರ ಪ್ರತಿಭಾ ಸಾಮರ್ಥ್ಯವನ್ನು ಅರಿತಿರುತ್ತಾರೆ. ಗುಬ್ಬಿವೀರಣ್ಣನವರಂತಹ ಹಿರಿಯ ರಂಗಕರ್ಮಿಗಳಿಂದ ಶಾಹಭ್ಬಾಶಗಿರಿ ಪಡೆದವರು ಅಬ್ದುಲ್ಲಸಾಬರು. ಮಗನನ್ನೂ ಬದಿಗಿಟ್ಟು ಕಲಾವಿದನನ್ನು ಕೊಂಡಾಡಿದವರು ಗುಬ್ಬಿವೀರಣ್ಣನವರು.

ಇದಕ್ಕೂ ಮಿಗಿಲಾದ "ಗುಬ್ಬಿ ವೀರಣ್ಣ ಪ್ರಶಸ್ತಿ" ಇದೆಯೇ? ದೊಡ್ಡದು ಯಾವಾಗಲೂ ದೊಡ್ಡದೇ. ಗುಬ್ಬಿವೀರಣ್ಣನವರು ಅಬ್ದುಲ್ಲಸಾಬರಿಗೆ ಕೊಟ್ಟ ಈ ಪ್ರಶಸ್ತಿಗೆ

ನಮ್ಮ ಘನ ಸರ್ಕಾರ ಕೊಡುವ "ಗುಬ್ಬಿ ವೀರಣ್ಣ ಪ್ರಶಸ್ತಿ" ಸಮನಾಗಬಲ್ಲದೆ?

ಗುಬ್ಬಿ ಕಂಪನಿಯ ನಂತರ ಅಬ್ದುಲ್ಲಸಾಬರು ನಾಡಿನ ಬೇರೆ ಬೇರೆ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಾರೆ. ಪದ್ಮಶ್ರೀ ಚಿಂದೋಡಿ ಲೀಲಮ್ಮನವರ ಕಂಪನಿಯ ನಾಟಕಗಳು ಚಿಂದೋಡಿ ಶ್ರೀಕಂಠೇಶ ಅವರ ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲಿ ಬಿ. ಶಿವಶಂಕರ ವಿರಚಿತ ಉಕ್ಕಡಗಾತ್ರಿ ಕರಿಬಸವೇಶ್ವರ ಮಹಾತ್ಮೆ ಹಾಗೂ ಮಂಗಳೂರ ಕಡೆಯ ರೈ ಎಂಬುವವರ ಕಂಪನಿಯ ನಾಟಕ ಅದರಲ್ಲಿ ಚಿತ್ರನಟಿ ಕಲ್ಪನಾರೊಂದಿಗೆ 'ಮನೆಮಗಳು' ನಾಟಕ ಆಡುತ್ತಾರೆ. ಅದರಲ್ಲಿ ಕಲ್ಪನಾ ಮನೆಮಗಳ ಪಾತ್ರದಲ್ಲಿ ಹಾಗೂ ಅಬ್ದುಲ್ಲಸಾಬರು ಶ್ರೀಪತಿ ಎಂಬ ವಿಲನ್ ಪಾತ್ರದಲ್ಲಿ ಅಭಿನಯಿಸುತ್ತಾರೆ. ಒಮ್ಮೆ ನಾಟಕ ನಡೆದಾಗ ಕಲ್ಪನಾರನ್ನು ಕೈಹಿಡಿದು ಜಗ್ಗಿ ರೇಪ್ ಮಾಡುವ ಸನ್ನಿವೇಶದಲ್ಲಿ ಇವರು ಸ್ವಲ್ಪ ಜೋರಾಗಿಯೆ ಜಗ್ಗಿ ಬಿಡುತ್ತಾರೆ. ಮೊದಲೇ ತೆಳ್ಳನೆಯ ನೀಳಕಾಯದ ಕಲ್ಪನಾ ಇವರು ಜಗ್ಗಿದ ರಭಸಕ್ಕೆ ಜೋಲಿತಪ್ಪಿ ಪ್ರೇಕ್ಷಕರ ಗುಂಡಿಗೆ ಬೀಳುವ ಸ್ಥಿತಿಯಲ್ಲಿರುತ್ತಾರೆ. ಇವಳಿನ್ನು ಪ್ರೇಕ್ಷಕರ ಗುಂಡಿಗೆ ಹೋಗಿ ಬೀಳುತ್ತಾಳೆ ಎಂದವರೇ ಅವಳು ತೊಟ್ಟಿದ್ದ ರವಿಕೆಯನ್ನು ಹಿಡಿದು ರಭಸದಿಂದ ಜಗ್ಗಿ ಪ್ರೇಕ್ಷಕರ ಮೇಲೆ ಬೀಳಲಿದ್ದ ಕಲ್ಪನಾರನ್ನು ರಂಗಭೂಮಿಯ ಮಧ್ಯದಲ್ಲಿದ್ದ ಸೋಪಾದ ಮೇಲೆ ಬೀಳುವಂತೆ ಮಾಡುತ್ತಾರೆ.

ಮರುದಿನ ಬೆಳಿಗ್ಗೆ ಕಲ್ಪನಾ ತಾನು ಉಳಿದುಕೊಂಡಿದ್ದ ಲಾಜ್‌ಗೆ ಅಬ್ದುಲ್ಲಸಾಬರಿಗೆ ಬರಲು ತಿಳಿಸುತ್ತಾಳೆ. ಓ ನಿನ್ನಿನ ಘಟನೆಯಿಂದ ಇವಳಿಗೆ ಸಿಟ್ಟು ಬಂದಿರಬಹುದು ತನ್ನನ್ನು ಬೈದು ಕಂಪನಿಯಿಂದ ಹೊರಗೆ ಹಾಕಿಸಬಹುದೆಂದು ಯೋಚಿಸಿದ ಅಬ್ದುಲ್ಲಸಾಬರು ತನ್ನ ಬಟ್ಟೆ ಬರೆಗಳನ್ನೆಲ್ಲಾ ಪ್ಯಾಕ್ ಮಾಡಿ ಅವಳೇನಾದರೂ ಬೈದರೆ ಗುಡ್‌ಬಾಯ್ ಹೇಳಿ ಹೋಗಿಬಿಟ್ಟರಾಯಿತೆಂದು ಅವಳಿದ್ದ ಲಾಜ್‌ಗೆ ಹೋಗುತ್ತಾರೆ. ಗಂಭೀರವದನೆಯಾಗಿ ಕುಳಿತ್ತಿದ್ದ ಕಲ್ಪನಾರನ್ನು ಕಂಡು ಸ್ವಲ್ಪ ಅಧೀರರಾಗುತ್ತಾರೆ.

ಆಗ ಕಲ್ಪನಾ "ರಂಗಭೂಮಿಯ ಮೇಲೆ ಕಲಾವಿದೆಯರ ಮಾನಪಮಾನದ ಜವಾಬ್ದಾರಿ ಅವರೊಂದಿಗಿದ್ದ ಸಹಕಲಾವಿದರ ಮೇಲೆ ಇರುತ್ತದೆ. ನಿನ್ನೆ ನೀವು ನನ್ನ ಗೌರವ ಕಾಪಾಡಿದ್ದೀರಿ. ನೀವು ಪುನಃ ಈಚೆ ಎಳೆಯದೆ ಇದ್ದರೆ ನಾನು ಹೋಗಿ ಪ್ರೇಕ್ಷಕರ ಮೇಲೆ ಬೀಳುತ್ತಿದ್ದೆ. ನೀವು ಸಮಯ ಪ್ರಜ್ಞೆಯಿಂದ ನನ್ನ ಮಾನ ಗೌರವ ಎರಡನ್ನೂ ಉಳಿಸಿದ್ದೀರಿ ನಿಮಗೆ ತುಂಬಾ ಥ್ಯಾಂಕ್ಸ್" ಎಂದು ಹೇಳಿ ತನ್ನ ರೂಮಿನಲ್ಲಿದ್ದ ಎರಡು ಎಳೆನೀರನ್ನು ಅಬ್ದುಲ್ಲಸಾಬರಿಗೆ ನೀಡಿ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದ್ದರಂತೆ. ದೊಡ್ಡ ಸಿನಿಮಾ ನಟಿ ಎಲ್ಲಿ ಬೈದಾಡಿಬಿಡುತ್ತಾಳೋ ಎಂದು ಹೆದರಿದ್ದ ಅಬ್ದುಲ್ಲಸಾಬರಿಗೆ ಹೋದ ಜೀವ ಬಂದಂತಾಯಿತಂತೆ.

ಮಿನುಗುತಾರೆ ಕಲ್ಪನಾ ನಿಜಕ್ಕೂ ದೊಡ್ಡಗುಣದ ದೊಡ್ಡಕಲಾವಿದೆಯೇ. ಇಲ್ಲಿ ಅಬ್ದುಲ್ಲಸಾಬರಿಗೆ ತೋರಿದ ಸಹನಶೀಲತೆಯನ್ನು, ಮುಂದೆ ೧೯೭೯ರಲ್ಲಿ ಸಂಕೇಶ್ವರ ಕ್ಯಾಂಪಿನಲ್ಲಿದ್ದ ಗುಡಗೇರಿ ಕಂಪನಿಯಲ್ಲಿ ಎನ್.ಬಸವರಾಜರಿಗೆ ತೋರಿಸಿದ್ದರೆ ಬಹುಶಾ ಕಲ್ಪನಾ ಈಗಲೂ ನಮ್ಮ ಚಿತ್ರರಂಗದಲ್ಲಿ ತಾಯಿ, ಅತ್ತೆ, ದೊಡ್ಡಮ್ಮ ಮುಂತಾದ ಪಾತ್ರಗಳಲ್ಲಿ ಅವರ ಅಭಿನಯ ನೋಡುವ ಭಾಗ್ಯ ನಮಗೆ ಲಭಿಸುತ್ತಿತ್ತೋ ಏನೋ.

ಆದರೆ ದುರ್ದೈವಿ ಕಲ್ಪನಾಜಿ ಅಲ್ಪಾಯುಷಿ. (ಓದುಗರು ಕಲ್ಪನಾಜಿಯವರ ಕೊನೆ ದಿನದ ಡೀಟೈಲ್ಸ್ ಬೇಕೆಂದರೆ ನಾನೇ ಬರೆದ "ರಂಗ ನಟಸಾರ್ವಭೌಮ" ಎನ್. ಬಸವರಾಜ ಆತ್ಮಕಥನ ಓದಬಹುದು.)

ಆ ನಂತರ ಯೋಗಾನರಸಿಂಹಮೂರ್ತಿಗಳ ಕಂಪನಿಯಲ್ಲಿ ಕಳ್ಳಭಟ್ಟಿ ಚಿರಂಜೀವಿ ನಾಟಕದಲ್ಲಿ ಪಾತ್ರ, ಗದುಗಿನ ವೀರೇಶ್ವರ ಕಂಪನಿಯಲ್ಲಿ ಸಾಳುಂಕೆಯವರ ಹಸಿರುಕ್ರಾಂತಿ ನಾಟಕದಲ್ಲಿ, ಮೈಸೂರ ಕಂಪನಿಯ ಎಚ್ಚಮನಾಯಕ ನಾಟಕದಲ್ಲಿ ಚಾಂದಖಾನ, ಹಾಗೂ ೧೯೮೮ ರಲ್ಲಿ ಮುಸಿಗೇರೆ ಕ್ಯಾಂಪ್‌ನಲ್ಲಿ ಓಂಕಾರೇಶ್ವರ ನಾಟ್ಯಸಂಘ ರಾಣೇಬೆನ್ನೂರ ಕಂಪನಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ಮಲ್ಲಿಕಾರ್ಜುನ, ವೇಮಣ್ಣ ಪಾತ್ರದಲ್ಲಿ, ಬೆಳವಣಿಕೆ ಕಂಪನಿಯ ಎಚ್.ಎನ್. ಹೂಗಾರರ ಸೊಲ್ಲಾಪೂರ ಸಿದ್ಧರಾಮೇಶ್ವರ ನಾಟಕದಲ್ಲಿ ಸಿದ್ಧರಾಮೇಶ್ವರರ ಪಾತ್ರವಹಿಸಿ ಅಬ್ದುಲ್ಲಸಾಬರು ಜನಪ್ರಿಯರಾಗುತ್ತಾರೆ. ಹೊನ್ನಿಗನೂರು ಸಂಗಣ್ಣನವರು ಇವರಿಗಾಗಿ ಹೊಸ ಹೊಸ ರಾಗಗಳನ್ನು ಸೃಷ್ಟಿಸಿ ಸಾಹಿತ್ಯ ರಚಿಸುತ್ತಾರೆ. ಇವರು ಹಿನ್ನೆಲೆಯಲ್ಲಿ ಹಾಡುತ್ತಿರುವಾಗ ಮನಸೋತ ಪ್ರೇಕ್ಷಕರು ಇಷ್ಟು ಸುಶ್ರಾವ್ಯವಾಗಿ ಹಾಡುತ್ತಿರುವವರು ಯಾರಿರಬಹುದೆಂದು ಒಳಗೆ ಬಂದು ನೋಡುತ್ತಿದ್ದರಂತೆ.

ಇಷ್ಟೆಲ್ಲಾ ಸಾಮರ್ಥ್ಯ ಹೊಂದಿದ ಅಬ್ದುಲ್ಲಸಾಬರು ಕೆಲ ಕಂಪನಿಗಳಲ್ಲಿನ ರಂಗ ರಾಜಕಾರಣಕ್ಕೆ ಜಾತಿ ರಾಜಕಾರಣಕ್ಕೆ ಬೇಸತ್ತು ಮನೆ ಹಿಡಿದು ಕುಳಿತುಬಿಡುತ್ತಾರೆ. ಚಿತ್ರರಂಗ, ರಂಗಭೂಮಿ, ಇವರ ಪ್ರತಿಭಾ ಸಾಮರ್ಥ್ಯವನ್ನು ಹೀರಿಕೊಂಡು ಸಿಪ್ಪೆಯಂತೆ ಎಸೆದುಬಿಡುತ್ತವೆ. ಎಷ್ಟೆಲ್ಲಾ ಪ್ರತಿಭೆ ಇದ್ದರೂ ಸಾಮಾನ್ಯವಾಗಿ ಎಲ್ಲ ಕಲಾವಿದರಂತೆ ಇವರಿಗೂ ವ್ಯವಹಾರ ಜ್ಞಾನದ ಕೊರತೆ ಇವರನ್ನು ಆರ್ಥಿಕ ಅಧಃಪತನಕ್ಕೆ ತಳ್ಳಿಬಿಡುತ್ತದೆ. ಕೈಬೀಸಿದರೆ ಕೈಲಾಸವೆಂಬ ಅಮೃತಘಳಿಗೆಯಲ್ಲಿ ಇವರು ಪ್ರೇಕ್ಷಕರನ್ನು ಪ್ರಸನ್ನಗೊಳಿಸುವ ಪಾತ್ರಪೋಷಣೆಯಲ್ಲಿ ಮಾತ್ರ ತಲ್ಲೀನರಾಗಿ ಕೀರ್ತಿ ಶನಿಯನ್ನು ಬೆಂಬತ್ತಿಬಿಡುತ್ತಾರೆ. ಈ ಮಾತು ಬಹಳಷ್ಟು ಜನ ಕಲಾವಿದರಿಗೆ ಅನ್ವಯಿಸುತ್ತದೆ.

# ಗ್ರಾಮೀಣ ರಂಗ ಕಲಾವಿದೆ

ತಾರಾಪತ್ನಿ ಪುಷ್ಪಮಾಲಾ ಅವರು ಗ್ರಾಮೀಣ ಭಾಗದ ವಿಲಾಸಿ ಕಲಾವಿದರು ತಮ್ಮೂರ ಹಬ್ಬ ಹರಿದಿನ ಜಾತ್ರೆ ಸಮಯದಲ್ಲಿ ಆಡುತ್ತಿದ್ದ ನಾಟಕಗಳಿಗೆ ಪಾತ್ರವಹಿಸಲು ಹೋಗುತ್ತಾರೆ. ಅಬ್ದುಲ್ಲಸಾಬರ ಸತ್ಸಂಗದಲ್ಲಿ ಕಲಾಪ್ರಬುದ್ಧತೆಯನ್ನು ಸಂಪಾದಿಸಿಕೊಂಡ ಈ ಕಲಾವಿದೆ ಹೇಮರಡ್ಡಿ ಮಲ್ಲಮ್ಮನ ಪಾತ್ರ, ದ್ರೌಪದಿಪಾತ್ರ, ಉತ್ತರೆಪಾತ್ರ, ಭಾನುಮತಿ ಪಾತ್ರ, ಚಿತ್ರಾಂಗದ ಪಾತ್ರ, ಕಿತ್ತೂರ ಚೆನ್ನಮ್ಮನ ಪಾತ್ರ, ರೇಣುಕಾ ಯಲ್ಲಮ್ಮನ ಪಾತ್ರ, ಬೆಳವಡಿ ಮಲ್ಲಮ್ಮನ ಪಾತ್ರ, ಶಿವಾಜಿ ತಾಯಿ ಜೀಜಾಬಾಯಿ ಪಾತ್ರ, ಅಕ್ಕಮಹಾದೇವಿ ಪಾತ್ರ, ಮುಂತಾದ ಪಾತ್ರಗಳನ್ನು ಮಾಡಿ ನಾಡಿನ ತುಂಬಾ ಜನಪ್ರಿಯರಾಗಿದ್ದಾರೆ. ಮೊದಲೇ ಕಲಾವಿದರ ಕುಟುಂಬ, ಅದಕ್ಕೆ ಪೂರಕವಾಗಿ ಪತಿ ಅಬ್ದುಲ್ಲಸಾಬರ ಸಂಗೀತ ಕಲಾಸಂಸ್ಕಾರ, ಸಾಂಸ್ಕೃತಿಕ ರಾಜಕಾರಣದ ಗಂಧವೂ ತಿಳಿಯದ, ಮುಗ್ಧತನ, ಸಹಕಲಾವಿದರನ್ನು ಹಿರಿಕಿರಿಯರೆಂಬ ಬೇದಭಾವವಿಲ್ಲದೆ ಗೌರವದಿಂದ ಕಾಣುವ ಹೃದಯ ಸಂಪನ್ನತೆ, ತನ್ನಿಂದ ಮತ್ತೊಬ್ಬರಿಗೆ ಸಾಧ್ಯವಿದ್ದಷ್ಟು ಒಳ್ಳೆಯದನ್ನೇ ಮಾಡಿ, ಮತ್ತೊಬ್ಬರಿಗೆ ಕೆಟ್ಟದ್ದನ್ನು ಕನಸು ಮನಸ್ಸಿನಲ್ಲಿಯೂ ಯೋಚಿಸಲಾರದ ಸುಸಂಸ್ಕೃತ ಗುಣಸ್ವಭಾವದಿಂದ ಸಮಕಾಲಿನ ಕಲಾವಿದೆಯರಲ್ಲಿ ಅಂಬುಜಮ್ಮ ಗೋಕಾಕ, ಅಂಜಲಿದೇವಿ ಗದಗ, ಸುಭದ್ರಮ್ಮ ಮನಸೂರ ಮುಂತಾದ ಕೆಲವೇ ಕೆಲವು ಕಲಾವಿದೆಯರಲ್ಲಿ ಅವರಷ್ಟೆ ಸಮರ್ಥವಾಗಿ ಎದ್ದು ಕಾಣುವ ಗೌರವದ ವ್ಯಕ್ತಿತ್ವ ಪುಷ್ಪಮಾಲಾರವರದು.

ಅಬ್ದುಲ್ಲಸಾಬರ ಕೈಹಿಡಿದಾಗಿನಿಂದಲೂ ಅವರ ನೆರಳಾಗಿ ಅವರ ಕಷ್ಟಸುಖಗಳಲ್ಲಿ ಸಹಭಾಗಿಯಾಗಿ ರಂಗಭೂಮಿಯೊಂದಿಗೆ ಅಬ್ದುಲ್ಲಸಾಬರ ಸೇವೆಯನ್ನು ಮನಮುಟ್ಟಿ

ಸಲ್ಲಿಸಿದವರು. ಮನೆತನದ ಖರ್ಚು ವೆಚ್ಚಗಳನ್ನು ನಿಭಾಯಿಸಲು ಅಬ್ದುಲ್ಲಸಾಬರು ಕೆಲಕಾಲ ಕಿರಾಣಿ ಅಂಗಡಿ ನಡೆಸುತ್ತಾರೆ. ಯಾರಾದರೂ ಕರೆದರೆ ಒಂದೆರಡು ದಿನದ ಮಟ್ಟಿಗೆ ರಂಗ ನಿರ್ದೇಶನಕ್ಕೆ ಹೋಗುತ್ತಾರೆ.

ಇದೇ ಸಮಯದಲ್ಲಿಯೆ ಹಲವು ಕ್ಯಾಸೆಟ್ ಕಂಪನಿಗಳು ಇವರ ಪ್ರತಿಭೆಯನ್ನು ಕ್ಯಾಸೆಟ್ ಮಾಧ್ಯಮಕ್ಕೆ ಬಳಸಿಕೊಳ್ಳುತ್ತವೆ. ಹಾವೇರಿ ಬಸವಲಿಂಗಶಾಸ್ತ್ರಿಗಳ ರೇಣುಕಾ ಯಲ್ಲಮ್ಮ ನಾಟಕದಲ್ಲಿ ಜಮದಗ್ನಿ ಪಾತ್ರ, ಕಂದಗಲ್ಲ ಹನುಮಂತರಾಯರ ರಕ್ತರಾತ್ರಿಯಲ್ಲಿ ಧರ್ಮರಾಯ, ಜಿ.ಜಿ. ಹೆಗಡೆಯವರ ಸತ್ಯಹರಿಶ್ಚಂದ್ರದಲ್ಲಿ ವಿಶ್ವಾಮಿತ್ರ, ಬಸವರಾಜ ಬೆಂಗೇರಿ ವಿರಚಿತ ಶಿರಹಟ್ಟಿ ಫಕೀರೇಶ್ವರ ಮಹಾತ್ಮೆಯಲ್ಲಿ ಖಾಜಾಅಮಿನುವುದ್ದೀನ್ ಪಾತ್ರ, ಡಾ॥ ಮಹದೇವ ಬಣಕಾರರ ಜಗಜ್ಯೋತಿ ಬಸವೇಶ್ವರರ ನಾಟಕದಲ್ಲಿ ಅಲ್ಲಮ್ಮಪ್ರಭು, ನಲವಡಿ ಶ್ರೀಕಂಠಶಾಸ್ತ್ರೀಗಳ ಹೇಮರಡ್ಡಿ ಮಲ್ಲಮ್ಮದಲ್ಲಿ ಮಲ್ಲಿಕಾರ್ಜುನನ ಪಾತ್ರ, ಮಾತಂಗಕನ್ಯೆಯಲ್ಲಿ ದೇವಕೇತು, ರೇಡಿಯೋ ಪ್ರಸಾರಿತ ನಾಟಕಗಳಾದ ನೀನೂ ಸಾಹುಕಾರನಾಗು, ಹರಗಿರಿಜೆ, ಛತ್ರಪತಿ ಶಿವಾಜಿ ಮುಂತಾದ ನಾಟಕಗಳಲ್ಲಿ ತಮ್ಮ ಕರ್ಣಾನಂದಕರವಾದ ಧ್ವನಿಮಾಧುರ್ಯದಿಂದ ರೇಡಿಯೊ ನಾಟಕಗಳನ್ನು ಯಶಸ್ವಿಗೊಳಿಸುತ್ತಾರೆ.

ಆಯ್ತು. ರಂಗಭೂಮಿಯಾಯ್ತು, ಚಿತ್ರರಂಗವಾಯ್ತು, ಕ್ಯಾಸೆಟ್ ಪ್ರಪಂಚವಾಯ್ತು, ರೇಡಿಯೊ ಆಯ್ತು, ಟಿ.ವ್ಹಿ. ಮಾಧ್ಯಮವೂ ಆಯ್ತು. ಆದರೂ ಅಬ್ದುಲ್ಲಸಾಬ ಅಣ್ಣಿಗೇರಿ ಎಂಬ ಒಬ್ಬ ಸಮರ್ಥ ಕಲಾವಿದ ನಮ್ಮ ಸಾಂಸ್ಕೃತಿಕ ವಲಯದಲ್ಲಿ ಇದ್ದಾನೆ ಎಂಬುವುದು ಯಾವ ಪ್ರಚಾರ ಮಾಧ್ಯಮಗಳಿಗೂ ಕಾಣಲಿಲ್ಲ ಯಾವ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೂ ತಿಳಿಯಲಿಲ್ಲ. ಕಾಣಲಿಲ್ಲ. ತಿಳಿಯಲಿಲ್ಲ, ಅಲ್ಲ! ಕಂಡರು, ತಿಳಿದರು ಆದರೆ ಜಾಣಕುರುಡು, ಜಾಣಮರೆವು.

# ವೃತ್ತಿರಂಗದಿಂದ ಹವ್ಯಾಸಿ ರಂಗಭೂಮಿಯತ್ತ

ಹೌದು! ಕನ್ನಡ ರಂಗಭೂಮಿಯಲ್ಲಿ ಎರಡು ಕವಲುಗಳು ಒಡೆದು ಎರಡೂ ಊರ್ಧ್ವ ದಿಕ್ಕನ್ನೆ ಅನುಸರಿಸಿದವು. ಪೂಜ್ಯರಾದ ಕುವೆಂಪು, ಬೇಂದ್ರೆ, ಬಿ.ವಿ. ಕಾರಂತ, ಶ್ರೀರಂಗ, ಲಂಕೇಶ, ಕೈಲಾಸಂ, ಪರ್ವತವಾಣಿ, ಜಡಭರತ, ಕಾರ್ನಾಡ, ಕಂಬಾರ, ಚಂಪಾ, ಮೊದಲುಗೊಂಡು ಅನೇಕ ಮಹನೀಯರು, ಅನೇಕ ತೆರನಾದ ಚಿಂತನಾಪರವಾದ ಸಂಕೀರ್ಣ ನಾಟಕಗಳನ್ನು ನೀಡಿ ಕನ್ನಡ ರಂಗಭೂಮಿಯ ಮೇಲ್ ಹೊಸ ಅಲೆ ಏಳಲು ಕಾರಣರಾದರು. ಆದರೆ ಆ ಅಲೆಯಮೇಲೆ ಕೇವಲ ಶಹರ ಪ್ರದೇಶದ ಸುಶಿಕ್ಷಿತ ಬುದ್ಧಿಜೀವಿ ಪ್ರೇಕ್ಷಕರು ತೇಲಿದರೇ ಹೊರತು ವೃತ್ತಿ ರಂಗಭೂಮಿಯನ್ನು ಶತಮಾನ ಕಾಲ ಸಲಹಿಕೊಂಡು ಬಂದಿದ್ದ ಗ್ರಾಮೀಣ ಭಾಗದ ಭಾವಜೀವಿ ಪ್ರೇಕ್ಷಕರು ತೇಲಲೇ ಇಲ್ಲ. ಆ ಅಸಂಗತ ಕಥೆ, ಕೃತಕ ಅಭಿನಯ, ಕಠಿಣ ನಿರ್ದೇಶನ, ಡೊಂಬರಾಟವನ್ನು ನಾಚಿಸುವ ಚಿತ್ರವಿಚಿತ್ರ ರಂಗತಂತ್ರಗಳು ನಮ್ಮ ಸಾಮಾನ್ಯ ಪ್ರೇಕ್ಷಕನಿಗೆ ಹಿಡಿಸದಾದವು. ಆದರೆ ಆ ಹವ್ಯಾಸಿ ರಂಗಕರ್ಮಿಗಳಲ್ಲಿನ ರಂಗಶಿಸ್ತು, ಪ್ರಯೋಗಾತ್ಮಕವಾದ ವಿಶೇಷ ಗುಣಲಕ್ಷಣಗಳು ಮಾತ್ರ ನಮ್ಮ ವೃತ್ತಿರಂಗಭೂಮಿಯಲ್ಲಿ ಕಂಡುಬರಲೇ ಇಲ್ಲಾ. ಈ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿ ಎಂಬ ವ್ಯತಿರಿಕ್ತ ಗುಣಲಕ್ಷಣಗಳು ಕನ್ನಡ ರಂಗಭೂಮಿಯ ಮೇಲೆ ತುಂಬಾ ದೊಡ್ಡ ಕಂದಕವನ್ನೇ ತೋಡಿದವು.

ನಾನೊಮ್ಮೆ ೧೯೮೮ರಲ್ಲಿ ನಮ್ಮ ವೃತ್ತಿರಂಗಭೂಮಿಯ ಹಿರಿಯ ನಾಟಕಕಾರರಾದ ಪಿ.ಬಿ. ದುತ್ತರಗಿಯವರನ್ನು ಒಂದು ಪ್ರಶ್ನೆ ಕೇಳಿದ್ದೆ. ಈ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯವರು ಅಂದ್ರೆ ಏನು ಕವಿಗಳೆ? ಎಂದು ಕೇಳಿದಾಗ ಅವರು ತುಂಬಾ ವಿನೋದಭರಿತವಾಗಿ ಉತ್ತರಿಸಿದ್ದರು.

"ನೋಡ ತಮ್ಮಾ ನಮ್ಮ ಈ ವೃತ್ತಿ ಕಲಾವಿದರಂದ್ರ ಯಾವಾಗ ನಾಟಕ ಬಿಟ್ಟೇತೋ ಯಾವಾಗ ಸೆರೆದ ಅಂಗಡಿ ಕದಾ ತೆಗೆಸೆವ್ರೋ ಅಂತ ಚಡಪಡಿಸವ್ರ ನಮ್ಮ ವೃತ್ತಿ ರಂಗಭೂಮಿಯವರು. ಇನ್ನ ಹವ್ಯಾಸಿಯವರಂದ್ರ ನಾಟಕ ಚಾಲು ಆಗೋದಕ್ಕಿಂತ ಮುಂಚೇನೇ ಚೊಲೋ ಬ್ರ್ಯಾಂಡಿನ್ ಸೆರೆ ತಂದ ಇಟ್ಟಕೊಂಡು ಚೆಂದಾಗಿ ನಾಟಕ ಮಾಡಿ, ನಾಟಕ ಬಿಟ್ಟ ನಂತರ ನಾಟಕ ಎಷ್ಟ ಚೆಂದ ಮಾಡಿರ್‍ತಾರೊ ಅಷ್ಟೇ ಚೆಂದಾಗಿ ಎಲ್ಲಾರೂ ಸೇರಿ ಪಾನಗೋಷ್ಠಿ ಮಾಡಿ ಮನೆಗೆ ಹೋಗವ್ರ ಹವ್ಯಾಸಿಗಳು. ಇಷ್ಟೇ ನೋಡ ತಮ್ಮಾ, ಇವರ ಮಧ್ಯದ ವ್ಯತ್ಯಾಸ" ಎಂದು ನಗುತ್ತಾ ಹೇಳಿ ನನ್ನನ್ನೂ ನಗಿಸಿದ್ದರು. ಅಷ್ಟೇ ಅಲ್ಲದೇ ನಮ್ಮ ವೃತ್ತಿಕಲಾವಿದರ ಮುಗ್ಧತನವನ್ನು ದುತ್ತರಗಿಯವರು ತುಂಬಾ ವಿಡಂಬನಾತ್ಮಕವಾಗಿ ಹೇಳುತ್ತಿದ್ದರು. ಕೆಲ ವೃತ್ತಿಕಲಾವಿದರ ಮುಂದೆ ರಾಜೀವಗಾಂಧಿಯವರು ಸತ್ರು ಎಂದು ಹೇಳಿದಾಗ ಅಯ್ಯೋ ಪಾಪ! ಅವರು ಯಾವ ಕಂಪನ್ಯಾಗ ಇದ್ರು? ಎಂದು ಕೇಳುವವರೆಂದು ಹಾಸ್ಯ ಮಾಡುತ್ತಿದ್ದರು.

ಇದಕ್ಕೆ ಒಂದರೆಡು ಕಂಪನಿಗಳು ಕೆಲ ಕಲಾವಿದರು ಅಪವಾದವಾಗಿರಬಹುದು ದೊಡ್ಡವಾಡ ಸಿದ್ಧಯ್ಯನವರ ಕಂಪನಿಯಲ್ಲಿದ್ದ ಒಬ್ಬ ಆಡೂರ ಯಲ್ಲಪ್ಪ ಎಂಬ ಸ್ಟೇಜ್ ಮೇಸ್ತ್ರಿ ೧೦-೩೦ಕ್ಕೆ ನಾಟಕ ಚಾಲು ಆಗಬೇಕೆಂದರೆ ೧೦-೨೦ಕ್ಕೆ ಮೊದಲ ಘಂಟೆ ೧೦-೨೫ಕ್ಕೆ ೨ನೇ ಘಂಟೆ ೧೦-೩೦ಕ್ಕೆ ಸರಿಯಾಗಿ ೩ನೇ ಘಂಟೆ ಹೊಡೆದು ಅಂಕದಪರದೆ ಎಳೆದು ಬಿಡುತ್ತಿದ್ದನಂತೆ. ಆತನಿಗಿದ್ದ ಸಮಯಪ್ರಜ್ಞೆ ಎಷ್ಟೋ ಕಲಾವಿದರಿಗೆ ಇರಲಿಲ್ಲ. ಆರ್.ನಾಗೇಂದ್ರರಾಯರ ಕಂಪನಿಯ ನಾಟಕ ಚಾಲು ಆಗಿದ್ದು ನೋಡಿ ಪ್ರೇಕ್ಷಕರು ತಮ್ಮ ವಾಚಿನ ಮುಳ್ಳು ಸರಿಪಡಿಸಿಕೊಳ್ಳುತ್ತಿದ್ದರಂತೆ. ಹೀಗೆ ಶಿಸ್ತು ಅಶಿಸ್ತಿನ ಎರಡು ಅತಿಶಯಗಳಿಗೆ ಉದಾಹರಣೆಗಳಿವು. ಹೀಗೆ ಕೆಲವು ಕಂಪನಿಯ ಶಿಸ್ತಿನ ಕೊರತೆಯಿಂದ ಕೆಲವು ಕಂಪನಿಗಳು ಸುಶಿಕ್ಷಿತ, ಸುಸಂಸ್ಕೃತ ಪ್ರೇಕ್ಷಕರನ್ನು ಕಳೆದುಕೊಂಡರೆ ಅತೀ ಶಿಸ್ತಿನ ಅತಿಶಯದಿಂದ ಹಾಗೂ ತಾವು ಮಾಡಿದ್ದೆಲ್ಲವೂ "ಪ್ರಯೋಗ"ವೆಂಬ ಕಾರಣಕ್ಕೆ ಹವ್ಯಾಸಿ ರಂಗಭೂಮಿಯವರು ಸಾಮಾನ್ಯ ಪ್ರೇಕ್ಷಕರನ್ನು ತಲುಪದೆ ಹೋದರು. ಇಂತಹ ಹವ್ಯಾಸಿ ರಂಗಭೂಮಿ ಹುಬ್ಬಳ್ಳಿ_ಧಾರವಾಡ ಭಾಗದಲ್ಲಿ ಅದೇ ತಾನೇ ಕಣ್ಣು ತೆರೆದಿದ್ದ ಕಾಲಘಟದಲ್ಲಿ ನಮ್ಮ ಅಬ್ದುಲ್‌ಸಾಬರಿಗೆ ಹವ್ಯಾಸಿ ತಂಡದಿಂದ ಅವಕಾಶ ದೊರೆಯುತ್ತದೆ. ಅದೇ ಅನಿಲ ಠಕ್ಕರ್ ನಿರ್ದೇಶನದ "ಸೂರ್ಯನ ಪ್ರಥಮ ಕಿರಣದಿಂದ ಅಂತಿಮ ಕಿರಣದವರೆಗೆ"

ಹೌದು! ಇದೊಂದು ಹಿಂದಿ ನಾಟಕದ ಕನ್ನಡ ರೂಪಾಂತರ. "ಸೂರ್ಯಕಿ ಪೆಹಲೇ ಕಿರಣಸೇ ಅಂತಿಮ ಕಿರಣತಕ್" ನಾಟಕದ ಕನ್ನಡ ಅನುವಾದ. ಈ ನಾಟಕದಲ್ಲಿ ಓರ್ವ ಸ್ಪುರದ್ರೂಪಿ ಷಂಡರಾಜನ ಪಾತ್ರಕ್ಕಾಗಿ ಪ್ರತಿಭಾಶೋಧದಲ್ಲಿದ್ದ ಅನಿಲ ಠಕ್ಕರ್ ಆ ಕಾಲದ ಹುಬ್ಬಳ್ಳಿ-ಧಾರವಾಡ ಹವ್ಯಾಸಿ ರಂಗಭೂಮಿಯ ಪ್ರೇರಕ ಶಕ್ತಿಯಾಗಿರುತ್ತಾರೆ. ವೃತ್ತಿಯಲ್ಲಿ ನ್ಯಾಯವಾದಿಗಳಾದ ಈ ಶ್ರೀಮಂತ ಕಲಾವಿಲಾಸಿಗೆ ವೃತ್ತಿರಂಗಭೂಮಿಯ ಧೀಮಂತಕಲಾವಿದ ರಂಗಭೂಮಿ ಚಿತ್ರರಂಗಗಳೆರಡರಲ್ಲೂ ಪಳಗಿದ್ದ ಅಬ್ದುಲಸಾಬ್ ಅಣ್ಣಿಗೇರಿಯವರು ಅನಾಯಾಸವಾಗಿ ದೊರೆಯುತ್ತಾರೆ. ಇವರ ಆಕರ್ಷಕ ಅಂಗಸೌಷ್ಟವ, ತಮ್ಮ ನಾಟಕದ ಪ್ರಧಾನ ಪಾತ್ರಕ್ಕೆ ತಕ್ಕದಾಗಿದ್ದರಿಂದ ಆ

ಪಾತ್ರಕ್ಕೆ ಅಬ್ದುಲಸಾಬ್ ಅಣ್ಣಿಗೇರಿಯವರನ್ನು ಹಾಕಿಕೊಂಡು ನಾಟಕ ಪ್ರದರ್ಶಿಸುತ್ತಾರೆ.

ನಿರ್ದೇಶಕ, ನಟ, ನಿರ್ಮಾಪಕ, ಅನುವಾದಕ, ರಂಗಸಂಘಟಕರಾದ ಅನಿಲ ಠಕ್ಕರ್ ಅವರು. ಇವರಿಗೆ ಸಾತ್ ಕೊಡಲು ಆ ಕಾಲಕ್ಕೆ ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ಹವ್ಯಾಸಿ ರಂಗ ಕಲಾವಿದರ ದೊಡ್ಡ ಹಿಂಡೇ ನಿಂತಿರುತ್ತದೆ. ಅದರಲ್ಲಿ ಪ್ರಮುಖರಾದವರೆಂದರೆ, ನಿರ್ದೇಶಕ ಚಿತ್ತರಂಜನ ಚಟರ್ಜಿ ಇವರು ದೂರದ ಬಂಗಾಳದಿಂದ ಬಂದವರು.

ಡಾ॥ ಜಂಗಣ್ಣವರ ನಟ, ಹಾಗೂ ಮಾಜಿಮೇಯರ್, ಡಾ॥ ಪಾಂಡುರಂಗ ಪಾಟೀಲ, ಚಿತ್ರಕಲಾವಿದ ಎಮ್.ಬಿ. ಪಾಟೀಲ, ನಟ ನಿರ್ದೇಶಕ ಸುಭಾಷ ನರೇಂದ್ರ ಇವರು ಧಾರವಾಡ ರಂಗಾಯಣದ ನಿರ್ದೇಶಕರಾಗಿ ಸೇವೆ ಸಲ್ಲಿಸಿದವರು. ಸುಭಾಷ ಕ್ಷತ್ರಿ, ತಾನಾಜೀ ಕವಳೆಕರ, ನ್ಯಾಯವಾದಿ ಸುರೇಶ ಕಿಣಿ, ನಿರ್ದೇಶಕ ಜಯತೀರ್ಥ ಜೋಶಿ, ಅರವಿಂದ ಕುಲಕರ್ಣಿ, ಪತ್ರಕರ್ತರಾದ ಕವಿ ಗೋಪಾಲ ವಾಜಪೇಯಿ, ನಾಟಕಕಾರ ಜಿ.ಎಚ್. ರಾಘವೇಂದ್ರ, ಡಾ॥ ಗೋವಿಂದ ಮಣ್ಣೂರ, ಗಣೇಶ ಜೋಶಿ, ನ್ಯಾಯವಾದಿ ಶ್ರೀಮತಿ ಇಂದಿರಾ ಕದಂ ಮುಂತಾದವರ ಪ್ರಯತ್ನದಿಂದ ಸೂರ್ಯನ ಪ್ರಥಮ ಕಿರಣದಿಂದ ಅಂತಿಮ ಕಿರಣದವರಗೆ ನಾಟಕ ಆಗ ಹಲವಾರು ಪ್ರಯೋಗಗಳಾಗಿ ವೃತ್ತಿ ಮತ್ತು ಹವ್ಯಾಸಿ ಎರಡೂ ರಂಗಪ್ರೇಮಿಗಳನ್ನು ಆರ್ಕಷಿಸುತ್ತದೆ.

ಅದಕ್ಕೆ ಕಾರಣ ಹವ್ಯಾಸಿ ರಂಗದ ಅನಿಲ ಠಕ್ಕರ್‌ರ ನಿರ್ದೇಶನದಲ್ಲಿ ವೃತ್ತಿ ರಂಗದ ಅಬ್ದುಲ್ಲಸಾಬರ ಅಭಿನಯ ಕೌಶಲ್ಯ. ನಮ್ಮ ಕನ್ನಡ ರಂಗಭೂಮಿ ಮೈಕೊಡವಿ ಏಳಲು ಈ ಎರಡೂ ರಂಗಪ್ರಕಾರಗಳ "ಕಸಿ" ಇಂದಿನ ಅನಿವಾರ್ಯವಾಗಿದೆ. ಹವ್ಯಾಸಿಗಳ ಶಿಸ್ತು ಸಮಯಪಾಲನೆ, ವೃತ್ತಿಯವರ ಸಹಜ ಪ್ರತಿಭೆಯ "ಸಂಲಗ್ನ"ವಾದಾಗ ಮಾತ್ರ ಕನ್ನಡ ರಂಗಭೂಮಿಯ ಭವಿಷ್ಯ ಉಜ್ವಲವಾಗಲು ಸಾಧ್ಯವಾಗುತ್ತದೆ.

## ಆಧ್ಯಾತ್ಮದತ್ತ ಮುಖ

ಬರಬರುತ್ತ ಅಬ್ದುಲ್ಲಸಾಬರ ಚಿತ್ತ ಆಧ್ಯಾತ್ಮದತ್ತ ವಾಲತೊಡಗಿತು. ಕೈಯಲ್ಲಿ ಸದಾ ಜಪಮಣಿ ಹಿಡಿದು ಅಲ್ಲಾನ ಧ್ಯಾನದಲ್ಲಿಯೇ ಲೀನರಾಗತೊಡಗಿದರು. ನಿತ್ಯ ಎರಡು ಬಾರಿ ನಮಾಜಿಗೆ ಮಾತ್ರ ಹೋಗಿ ಮತ್ತೆ ಮನೆಗೇ ಹಿಂತಿರುಗುತ್ತಿದ್ದರು. ರಂಗಭೂಮಿಯ ಮೇಲೆ ಅಬ್ದುಲ್ಲಸಾಬ ಅಣ್ಣಿಗೇರಿಯವರ ಕಾಲ ಅಂತ್ಯವಾಯ್ತು. ಹಾಗೆ ಭಾವಿಸಿ ಇಸ್ಲಾಂ ಧರ್ಮಪದ್ಧತಿಯಂತೆ ಗಡ್ಡಬಿಟ್ಟರು. ಇನ್ನೇನು ತಮ್ಮ ರಂಗಭೂಮಿಯ ಋಣ ತೀರಿತೆಂದೇ ಭಾವಿಸಿದ್ದರು. ಆದರೆ ಅಬ್ದುಲ್ಲಸಾಬರನ್ನು ರಂಗಭೂಮಿ ಮನೆಹಿಡಿದು ಕುಳಿತುಕೊಳ್ಳಲು ಬಿಡಲಿಲ್ಲ. ನಮ್ಮ ವಿಶ್ವಭಾರತಿ ರಮ್ಯ ನಾಟಕಸಂಘದ ಮೂಲಕ ಮತ್ತೆ ೨೦೦೬ರಿಂದ ೨೦೧೨ರ ವರೆಗೆ ೬ ವರ್ಷ ಜಗಜ್ಯೋತಿ ಬಸವೇಶ್ವರ, ಛತ್ರಪತಿ ಶಿವಾಜಿ, ಶಿರಹಟ್ಟಿ ಫಕೀರೇಶ್ವರ ಮಹಾತ್ಮೆ ನಾಟಕಗಳ ಮೂಲಕ ರಂಗಭೂಮಿಗೆ ಸೇವೆ ಸಲ್ಲಿಸಿದರು.

## ವಿಶ್ವಭಾರತಿ ರಮ್ಯ ನಾಟಕಸಂಘ, ಶಿರೂರ

ಇದು ನನ್ನ ಬಹುದಿನದ ಅದಮ್ಯ ಉತ್ಸಾಹದ ಸ್ಫೂರ್ತಿಫಲ. ೨೦೦೪ರ ಜನೇವರಿ ೧೪ ರಂದು ಕನ್ನಡದ ಕಟ್ಟಾಳು, ನಾಡೋಜ ಡಾ॥ ಪಾಟೀಲ ಪುಟ್ಟಪ್ಪನವರು, ಹಾಗೂ ನಾಡೋಜ ಡಾ॥ ಎಂ.ಎಂ. ಕಲಬುರ್ಗಿಯವರು, ನಾಡೋಜ ಡಾ॥ ಚನ್ನವೀರ ಕಣವಿಯವರಿಂದ ಉದ್ಘಾಟನೆಗೊಂಡ ಈ ಸಂಘದ ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಬಸವಣ್ಣನವರ ಗುರುಗಳಾದ ಈಶಾನ್ಯ ಮುನಿಗಳ ಪಾತ್ರ ಹಾಗೂ ಅಲ್ಲಮಪ್ರಭು ದೇವರ ಪಾತ್ರದಲ್ಲಿ ಅಬ್ದುಲ್ಲಸಾಬರು ಮನೋಜ್ಞ ಅಭಿನಯ ನೀಡಿದರು. ಪತ್ರಿಕೆಗಳು ಅಲ್ಲಮನ ಆಧ್ಯಾತ್ಮಿಕ ಎತ್ತರವನ್ನು ತಲುಪುವಲ್ಲಿ ಅಬ್ದುಲ್ಲಸಾಬರು ಸಫಲರಾಗುತ್ತಾರೆ ಎಂದು ಮುಕ್ತಕಂಠದಿಂದ ಪ್ರಶಂಸಿಸಿದವು.

ಈ ನಾಟಕದಲ್ಲಿ ಪಾತ್ರವಹಿಸಲು ನಾನು ಅವರನ್ನು ಕೇಳಿಕೊಂಡಾಗ "ಏನ್ ಮಾಡತೀರಿ ಬಸಣ್ಣ ನಮ್ಮ ರಂಗಭೂಮಿ ಕಾಲ ಮುಗೀತು ಅಂತನ ಗಡ್ಡ ಬಿಟ್ಟಗೊಂಡು ಕುಂತೀನಿ" ಎಂದಾಗ ನಾನು "ಅಣ್ಣಾವರೇ ನಿಮ್ಮ ಗಡ್ಡಾನ ನಮ್ಮ ನಾಟಕಕ್ಕ ಅಗತ್ಯ ಬೀಳತಾವ, ಬಸವಣ್ಣನವರ ನಾಟಕದೊಳಗ ನೀವು ಅಲ್ಲಮ ಪ್ರಭುಗಳ ಪಾತ್ರ ಮಾಡಬೇಕು. ಏಕೆಂದರೆ ಅದು ಗಡ್ಡಧಾರಿ ಪಾತ್ರವೇ" ಎಂದಾಗ "ಆಯಿತ್ರಿಪ್ಪಾ ರಂಗಭೂಮಿನ ನಾ ಬಿಡಬೇಕು ಅಂದ್ರೂ ಅದು ನನ್ನ ಬಿಡಲೊಲ್ಲದು" ಎಂದು ಒಪ್ಪಿಕೊಂಡರು ಚಾಮರಾಜನಗರ, ಮೈಸೂರಿನಿಂದ ಬೆಳಗಾಂವಿವರೆಗೆ, ಬೆಂಗಳೂರಿನಿಂದ ಬೀದರ, ಭಾಲ್ಕಿ, ಬಸವಕಲ್ಯಾಣದವರೆಗೆ ಕರ್ನಾಟಕದಾದ್ಯಂತ ಹಾಗೂ ಆಂಧ್ರಪ್ರದೇಶದ ಜಹೀರಾಬಾದ್, ಸದಾಶಿವಪೇಟೆ, ಸಕ್ಕರಗಾ, ಉಜ್ಜನಪಾಡ ಮಹಾರಾಷ್ಟ್ರದ ಬಸವಣ್ಣನವರ ಪ್ರಥಮ ಕಾಯಕಭೂಮಿ ಮಂಗಳವೇಡೆ, ಲಾತೂರ, ದೆಗಲೂರ ಮುಂತಾದ ಕಡೆಗೆ ಸುಮಾರು ೮೫ ಪ್ರಯೋಗಗಳಲ್ಲಿ ಪಾತ್ರವಹಿಸಿದರು.

ಈ ಸಂದರ್ಭದಲ್ಲಿನ ೨ ವಿಶೇಷ ಘಟನೆಗಳನ್ನಿಲ್ಲಿ ಪ್ರಸ್ತಾಪಿಸಲೇಬೇಕು. ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯರಾದ ಡಾ॥ ಬಸವಲಿಂಗ ಪಟ್ಟದೇವರ ಸಾನಿಧ್ಯದಲ್ಲಿ ಆಂಧ್ರಪ್ರದೇಶದ ಹೈದ್ರಾಬಾದ ಹತ್ತಿರದ ಜಹೀರಾಬಾದನಲ್ಲಿ ಬಸವೇಶ್ವರರ ನಾಟಕವಾಡಿದೆವು. ಮೊದಲ ದೃಶ್ಯದಲ್ಲಿ ಈಶಾನ್ಯಮುನಿಗಳ ಪಾತ್ರದಲ್ಲಿ ಅಬ್ದುಲ್ಲಸಾಬರನ್ನು ಕಂಡ ಅಲ್ಲಿನ ಕಲಾಪ್ರೇಮಿಗಳು ಅರೇ ಇವರು ನಮ್ಮ ಎನ್.ಟಿ. ರಾಮರಾವ್ ಇದ್ದಂತೆ ಇದ್ದಾರಲ್ಲ ಎಂದು ಆ ದೃಶ್ಯ ಮುಗಿಯುತ್ತಲೇ ಇವರಿಗೆ ಎನ್.ಟಿ. ರಾಮರಾವ್ ಎಂದು ಮುಗಿಬಿದ್ದುಬಿಟ್ಟರು. ಅವರ ಅಭಿಮಾನದ ರಭಸ ಎಷ್ಟು ಪ್ರಖರವಾಗಿತ್ತೆಂದರೆ ನಮಗೆ ಮುಂದಿನ ದೃಶ್ಯಕ್ಕೆ ಹೋಗಲು ತೊಂದರೆಯಾಯ್ತು.

ಕೊನೆಗೆ ನಾಟಕ ಬಿಟ್ಟ ನಂತರ ಆ ಅಭಿಮಾನಿಗಳು ಅಬ್ದುಲ್ಲಸಾಬರೊಂದಿಗೆ ಫೋಟೋ ತೆಗೆಸಿಕೊಂಡು ತಮ್ಮ ಅಭಿಮಾನವನ್ನು ಪ್ರದರ್ಶಿಸಿದರು. ಅದೇ ಸಮಯಕ್ಕೆ ಮಹಾರಾಷ್ಟ್ರದ ಮಂಗಳವೇಡೆಯಲ್ಲಿ ಬಸವಣ್ಣನವರ ನಾಟಕ ಪ್ರದರ್ಶನಗೊಂಡಾಗ ಅಲ್ಲಿನ ಬಸವಾಭಿಮಾನಿಗಳು ಅಲ್ಲಮಪ್ರಭುಗಳ ಪಾತ್ರ ವಹಿಸಿದ್ದ ಅಬ್ದುಲ್ಲಸಾಬರಿಗೆ

ಅಕ್ಕಮಹಾದೇವಿ ಪಾತ್ರವಹಿಸಿದ್ದ ಅವರ ಶ್ರೀಮತಿ ಪುಷ್ಪಮಾಲಾ ಅವರಿಗೆ ಹಾಗೂ ಬಸವೇಶ್ವರರ ಪಾತ್ರವಹಿಸಿದ್ದ ನನಗೆ ಕಾಲಿಗೆ ಬಿದ್ದು ನಮಸ್ಕರಿಸಿದ ಆ ದೃಶ್ಯ ಈಗಲೂ ನನ್ನ ಸ್ಮೃತಿಪಟಲದ ಮೇಲೆ ಅಚ್ಚಳಿಯದೇ ಉಳಿದಿದೆ. ಏಕೆಂದರೆ ನಾವು ಆ ಪಾತ್ರದ ಪೋಷಾಕಿನಲ್ಲಿದ್ದಾಗ ಅವರು ನಮಸ್ಕರಿಸಿದ್ದರೆ ಇವರು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯವರಿಗೆ ನಮಸ್ಕರಿಸಿದ್ದಾರೆ ಎನ್ನಬಹುದಿತ್ತು ಬಸವಣ್ಣನವರು ಹೇಳಿದಂತೆ "ಲಾಂಛನಕ್ಕೆ ಶರಣೆಂಬೆ" ಎಂಬ ತತ್ವದಂತೆ ಲಾಂಛನಕ್ಕೆ ನಮಸ್ಕರಿಸಿದ್ದಾರೆ ಎನ್ನಬಹುದಿತ್ತು. ಆದರೆ ನಾವು ನಮ್ಮೆಲ್ಲ ಶರಣರ ಪೋಷಾಕುಗಳನ್ನು ತೆಗೆದು ಊಟಕ್ಕೆ ಹೊರಟಾಗ ಬಂದು ಆ ಕಲಾಭಿಮಾನಿಗಳು ಕಾಲಿಗೆ ನಮಸ್ಕರಿಸಿ ತಮ್ಮ ಅಭಿಮಾನವನ್ನು ತೋರ್ಪಡಿಸಿದರಲ್ಲಾ ಅದು ನಮ್ಮ ಮನಃಪಟಲದಲ್ಲಿ ಸ್ಥಿರವಾಗಿ ಉಳಿಯಲು ಕಾರಣವಾದದ್ದು. ಅವರು ನಮಸ್ಕರಿಸಿದ್ದು ನಮಗಲ್ಲ ನಮ್ಮೊಳಗಿನ ಆ ಕಲಾಚೈತನ್ಯಕ್ಕೆ. ಧನ್ಯ ಕಲಾಚೇತನ!

ಅಬ್ದುಲ್ಲಸಾಬರು ರಂಗಭೂಮಿಯಲ್ಲಿ ನಿರಂತರವಾಗಿ ಸಕ್ರಿಯರಾಗಿದ್ದ ಕಾಲದಲ್ಲಿ ಕಾಣದ ಮಾನ ಸನ್ಮಾನಗಳು ಈಗ ಇವರನ್ನು ಹುಡುಕಿಕೊಂಡು ಬರತೊಡಗಿದವು. ಕನ್ನಡ ಜಗದ್ಗುರುಗಳಾದ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಗೌರವಸನ್ಮಾನ, ಭಾಲ್ಕೀ ಹಿರೇಮಠ ಸಂಸ್ಥಾನದ ಡಾ॥ ಬಸವಲಿಂಗ ಪಟ್ಟದ್ದೇವರಿಂದ ಸನ್ಮಾನ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ರಾಜ್ಯೋತ್ಸವ ರಂಗಸನ್ಮಾನ, ಬೆಂಗಳೂರಿನ ಡಾ॥ ದಯಾನಂದ ಸಾಗರ ಪ್ರತಿಷ್ಠಾನದ ವಿಶೇಷ ರಂಗದಂಪತಿ ಸನ್ಮಾನ, ಗಾನಯೋಗಿ ಪುಟ್ಟರಾಜ ಕವಿ ಗವಾಯಿಗಳಿಂದ ಸನ್ಮಾನ, ಚಿಂದೋಡಿ ಲೀಲಮ್ಮನವರು ಅಕಾಡಮಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಡಾ॥ ಯು. ಆರ್. ಅನಂತಮೂರ್ತಿಯವರಿಂದ ನಾಟಕ ಅಕಾಡಮಿ ಪ್ರಶಸ್ತಿ, ಶಿರೂರಿನ ವಿಶ್ವಭಾರತಿ ರಮ್ಯ ನಾಟಕ ಸಂಘದ ದಶಮಾನೋತ್ಸವದಲ್ಲಿ ರೂ. ೫೦೦೦/-ನಗದಿನೊಂದಿಗೆ "ಬಸವರಂಗಕಲಾ ಭೂಷಣ" ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿ ಮಾನ ಸನ್ಮಾನಗಳು ಅಬ್ದುಲ್ಲಸಾಬರನ್ನು ಹುಡುಕಿಕೊಂಡು ಬಂದವು.

ಆದರೆ ಬರಲೇ ಬೇಕಾದ ಗುಬ್ಬಿ ವೀರಣ್ಣ ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಇದುವರೆಗೂ ಬಾರದೇ ಉಳಿದಿವೆ. ಹಿರಿಯ ಲೇಖಕರಾದ ಗುಡಿಹಳ್ಳಿ ನಾಗರಾಜ, ಪಕ್ಕಣ್ಣ ಅರಗೋಳ, ಗವೀಶ ಹಿರೇಮಠ, ಗಣೇಶ ಅಮೀನಗಡ, ಮಲ್ಲಿಕಾರ್ಜುನ ಸಿದ್ದಣ್ಣವರ, ಅಜಿತ ಘೋರ್ಪಡೆ, ಪ್ರೇಮಾ ಬದಾಮಿ ಸೇರಿದಂತೆ ಅನೇಕ ಪತ್ರಿಕಾ ರಂಗದ ಮಿತ್ರರು ಅಬ್ದುಲ್ಲಸಾಬರ ರಂಗಸಾಧನೆ ಕುರಿತು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ವಿಶೇಷ ಚಿತ್ರ ಲೇಖನಗಳನ್ನು ಪ್ರಕಟಿಸಿ ಇವರ ರಂಗಸೇವೆಯನ್ನು ದಾಖಲೀಕರಣಗೊಳಿಸಿದರು. ಗದುಗಿನ ತೋಂಟದಾರ್ಯ ಸಂಸ್ಥಾನ ಮಠದ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳಂತೂ ಅಬ್ದುಲ್ಲಸಾಬ, ಪುಷ್ಪಮಾಲಾ ದಂಪತಿಗಳ ಬಗ್ಗೆ ತುಂಬಾ ಗೌರವದ ಮಾತನ್ನಾಡಿದ್ದಾರೆ.

ಈ ರಂಗ ದಂಪತಿಗಳ ಬಾಯಲ್ಲಿ ಅಲ್ಲಮಪ್ರಭುಗಳು ಹಾಗೂ

ಅಕ್ಕಮಹಾದೇವಿಯವರ ಆಧ್ಯಾತ್ಮಿಕ ತಾರ್ಕಿಕ ಸಂಭಾಷಣೆಗಳನ್ನು ಕೇಳುವುದೇ ಒಂದು ಸೊಗಸು, ಇವರ ಅಭಿನಯದಲ್ಲಿ ೧೨ ನೇ ಶತಮಾನದ ಅನುಭವ ಮಂಟಪವೇ ರಂಗಭೂಮಿಯ ಮೇಲೆ ಅನಾವರಣಗೊಳ್ಳುತ್ತದೆ ಎಂದು ಬಣ್ಣಿಸಿದ್ದಾರೆ. ಭಾಲ್ಕೀ ಹಿರೇಮಠದ ಪೂಜ್ಯರಾದ ಡಾ॥ ಬಸವಲಿಂಗ ಪಟ್ಟದೇವರು ಅಬ್ದುಲ್ಲಸಾಬ ಅಣ್ಣಿಗೇರಿ ಇವರ ಅಭಿನಯದ ಬಸವೇಶ್ವರರ ನಾಟಕವನ್ನು ಸುಮಾರು ಸಲ ನೋಡಿದ್ದೇನೆ, ಒಂದೊಂದು ಪ್ರದರ್ಶನಕ್ಕೂ ನಾಟಕದ ಅಭಿನಯದಲ್ಲಿ ಹೊಸ ಹೊಳಪು ಮೂಡಿ ಹೊಸ ಚಿಂತನೆಗೆ ಹಚ್ಚುತ್ತಿತ್ತು ಎಂದು ಕೊಂಡಾಡಿದ್ದಾರೆ. ನಾಟಕದ ಸ್ವಾಮಿಜಿಗಳೆಂದೇ ಖ್ಯಾತರಾದ ಸಾಣೇಹಳ್ಳಿ ತರಳಬಾಳು ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು 'ಇಷ್ಟು ವಯಸ್ಸಾದ ಈ ಜನ ಏನು ನಾಟಕ ಮಾಡಬಲ್ಲರು? ಎಂದು ಭಾವಿಸಿದ್ದೆ. ಆದರೆ ಡಾ॥ ಮಹಾದೇವ ಬಣಕಾರರ ಜಗಜ್ಯೋತಿ ಬಸವೇಶ್ವರರ ನಾಟಕ ಸಾಣೇಹಳ್ಳಿಯಲ್ಲಿ ೨೦೧೦ ರ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡಾಗ ನೋಡಿ ದಂಗಾಗಿ ಹೋದೆ. ಏನೆಲ್ಲಾ ಸರ್ಕಸ್ ಮಾಡಿ ನಾಟಕವನ್ನು ಯಶಸ್ವಿಗೊಳಿಸುವ ನಮ್ಮ ಹವ್ಯಾಸಿ ರಂಗದವರು ಈ ಹಿರಿಯ ಕಲಾವಿದರಿಂದ ಕಲಿಯುವುದು ತುಂಬಾ ಇದೆ ಎನಿಸಿತು. ಏಕೆಂದರೆ ಅತ್ಯಂತ ಸರಳ ರಂಗ ಸಜ್ಜಿಕೆ, ಯಾವ ರಂಗ ತಂತ್ರಗಳೂ ಇಲ್ಲದೆ ಕೇವಲ ತಮ್ಮ ಅಭಿನಯ, ಹಾಗೂ ಮಾತುಗಳ ಸ್ವರವಿನ್ಯಾಸದಿಂದಲೇ ಪ್ರೇಕ್ಷಕರನ್ನು ಸಮ್ಮೋಹನಗೊಳಿಸುವ ಪರಿ ನಮಗೆ ತುಂಬ ಮೆಚ್ಚುಗೆಯಾಗಿತ್ತು' ಎಂದು ಬಣ್ಣಿಸಿದ್ದಾರೆ.

ಕೂಡಲ ಸಂಗಮದ ಪಂಚಮಸಾಲಿ ಪೀಠಾಧಿಪತಿ ಪೂಜ್ಯ ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು ಹಿಂದೆ ಏಣಗಿ ಬಾಳಪ್ಪನವರು ಆಡುತ್ತಿದ್ದ ಭಕ್ತಿಭಂಡಾರಿ ಬಸವಣ್ಣನವರ ನಾಟಕ ಈಗ ಅಬ್ದುಲ್ಲಸಾಬ ಅಣ್ಣಿಗೇರಿ ಹಾಗೂ ಬಸವರಾಜ ಬೆಂಗೇರಿಯವರ ಅಭಿನಯದಲ್ಲಿ ವಿಚಾರ ಭಂಡಾರಿ ಬಸವಣ್ಣನವರ ನಾಟಕವಾಗಿ ಪ್ರಯೋಗಗೊಳ್ಳುತ್ತಿರುವುದು ಶ್ಲಾಘನಿಯ ಎಂದಿದ್ದಾರೆ. ಖ್ಯಾತ ಚಲನಚಿತ್ರ ನಿರ್ದೇಶಕ ಚಿಂದೋಡಿ ಬಂಗಾರೇಶ ಅವರು ಯಾವ ಪಾತ್ರವಾದರೂ ಸರಿ ಲೀಲಾಜಾಲವಾಗಿ ಅಭಿನಯಿಸಬಲ್ಲ ಅಪರೂಪದ ಪ್ರತಿಭೆ ಅಬ್ದುಲಸಾಬ ಅಣ್ಣಿಗೇರಿ. ಎಂದು ಅಭಿಪ್ರಾಯ ಪಡುತ್ತಾರೆ.

ವೃತ್ತಿ ರಂಗಭೂಮಿಯ ಹಿರಿಯ ಕಲಾವಿದರಾದ ಎಚ್.ಟಿ. ಅರಸುರವರು ಅಬ್ದುಲ್ಲಸಾಬರೇ ನನಗಿಂತಲೂ ಮೊದಲು ನಿಮಗೆ ಗುಬ್ಬಿವೀರಣ್ಣ ಪ್ರಶಸ್ತಿ ಬರಬೇಕಿತ್ತಪಾ ಏಕೆಂದರೆ ನೀವು ಹಾಡು ನಟರು, ಸಂಗೀತ ಬಲ್ಲವರು ನಿಮ್ಮ ಅನೇಕ ಪಾತ್ರಗಳನ್ನು ನಾನು ನೋಡಿ ಮೆಚ್ಚಿಕೊಂಡಿದ್ದೇನೆ ಎಂದು ಪ್ರಾಂಜಲ ಮನಸ್ಸಿನಿಂದ ಹೊಗಳಿದ್ದನ್ನು ನಾನು ಕಿವಿಯಾರೇ ಕೇಳಿದ್ದೇನೆ. ಅವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ ಬಂದಾಗ ಅಬ್ದುಲ್ಲಸಾಬರು ತುಂಬಾ ಸಂತಸದಿಂದ "ಬಸಣ್ಣ ಅರಸರೂ ನಾನೂ ಕೂಡಿ ಸರ್ವಿಸ ಮಾಡಿದವರು ಅವರಿಗೆ ಗುಬ್ಬಿವೀರಣ್ಣ ಪ್ರಶಸ್ತಿ ಬಂದೈತಿ ಹೋಗಿ ಅವರಿಗೆ ಅಭಿನಂದಿಸಿ ಬರೋಣ ಬರ್ರಿ" ಎಂದು ನನ್ನನ್ನು ಅರಸರಿದ್ದ ಹನುಮಸಾಗರಕ್ಕೆ ಕರೆದುಕೊಂಡು ಹೋಗಿದ್ದರು. ರಂಗಭೂಮಿಯಲ್ಲಿ ಅಪ್ರತಿಮ ಸಾಧನೆ ಮಾಡಿ ಖ್ಯಾತರಾಗಿದ್ದ ಎಚ್.ಟಿ.

ಅರಸುರನ್ನು ನೋಡುವ ಭಾಗ್ಯ ನನ್ನದಾಗಿತ್ತು ಅರಸುರರವರು "ಈ ಬಾರಿ ನನ್ನ ಅಧ್ಯಕ್ಷತೆಯಲ್ಲಿಯೇ ಗುಬ್ಬಿ ವೀರಣ್ಣ ಪ್ರಶಸ್ತಿಗೆ ಆಯ್ಕೆ ಪ್ರಕ್ರಿಯೇ ನಡೆಯುತ್ತದೆ. ಈ ಬಾರಿ ನಾನು ನಿಮ್ಮನ್ನೇ ಶಿಫಾರಸ್ಸು ಮಾಡುತ್ತೇನೆ ನಿಮ್ಮ ಹಿಂದಿನ ಫೋಟೋ, ಪತ್ರಿಕಾ ವಿಮರ್ಶೆಗಳೆನಾದರೂ ಇದ್ದರೆ ಕಳಿಸಿಕೊಡಿರಿ" ಎಂದು ಹೇಳಿದ್ದರು. ಆ ಪ್ರಕಾರ ನಾನೇ ಮುತುವರ್ಜಿ ವಹಿಸಿ ಅಬ್ದುಲ್ಲಸಾಬರ ಎಲ್ಲ ದಾಖಲಾತಿಗಳನ್ನು ಅರಸರಿಗೆ ಕಳಿಸಿದ್ದೆ. ಆದರೆ ಮುಂದೇನಾಯಿತೋ ಆ ಬಾರಿ ಪ್ರಶಸ್ತಿ ಬೇರೆಯವರ ಪಾಲಾಗಿತ್ತು ಎಂದು ಅಬ್ದುಲ್ಲಸಾಬರು ಅದೇ ನಿರ್ವಿಕಾರದ ನಿರ್ಲಿಪ್ತ ನಗೆ ನಕ್ಕರು. ಆ ನಗೆಯ ಹಿಂದೆ ಎಂಥ ನೋವಿತ್ತೊ ಅವರಿಗೇ ಗೊತ್ತು.

ಇದಕ್ಕೂ ಮೊದಲು ಎನ್. ಬಸವರಾಜರಿಗೆ ಗುಬ್ಬಿ ಪ್ರಶಸ್ತಿ ಬಂದಾಗ ಹುಬ್ಬಳ್ಳಿಯ ಕಲಾವಿದರು ಸೇರಿ ಅವರಿಗೆ ಅಭಿನಂದನ ಕಾರ್ಯಕ್ರಮ ಹುಬ್ಬಳ್ಳಿ ಪ್ರಕಾಶ ಹೋಟಲ್‌ನಲ್ಲಿ ಏರ್ಪಡಿಸಿದ್ದಾಗ ಅಂದಿನ ಸಭೆಯಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿದ್ದ ಅಬ್ದುಲ್ಲಸಾಬರನ್ನು ಕುರಿತು ಎನ್. ಬಸವರಾಜರು "ಈ ಪ್ರಶಸ್ತಿ ನನಗಿಂತ ಮೊದಲು ಅಬ್ದುಲಬಯ್ಯಾಗ ಬರಬೇಕಾಗಿತ್ತು ಯಾಕಂದ್ರ ಅಂವಾ ನನಗಿಂತ ದೊಡ್ಡ ಕಲಾವಿದ" ಎಂದು ಪ್ರಾಂಜಲ ಮನಸ್ಸಿನಿಂದ ಮಾತನಾಡಿದ್ದರು. ಒಮ್ಮೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಮ್ಮ ಸಂಘದ ಜಗಜ್ಯೋತಿ ಬಸವೇಶ್ವರ ನಾಟಕಕ್ಕೆ ಡಾ॥ ಎಂ. ಎಂ. ಕಲಬುರ್ಗಿ, ಡಾ॥ ಪಾಟೀಲ ಪುಟ್ಟಪ್ಪ , ಡಾ॥ ಚನ್ನವೀರ ಕಣವಿಯವರೊಂದಿಗೆ ಆಗಮಿಸಿದ್ದ ಎನ್. ಬಸವರಾಜರವರು ಆ ಸಂದರ್ಭದಲ್ಲಿಯೂ ಅಬ್ದುಲ್ಲಸಾಬರ ವ್ಯಕ್ತಿತ್ವವನ್ನು ವರ್ಣನೆ ಮಾಡಿದ್ದರು. "ಈ ನಮ್ಮ ಅಬ್ದುಲಬಯ್ಯಾ ಅದಾನಲ್ಲಾ ಈ ನಾಟಕದೊಳಗ ಅಲ್ಲಮ ಪ್ರಭುಗಳ ಪಾರ್ಟ ಮಾಡಿದಾಂವ ಅಂವಾ ನನಗಿಂತ ದೊಡ್ಡ ಕಲಾವಿದ ಅವನ ಹಲವಾರು ಪಾರ್ಟ ನಾನು ನೋಡೇನಿ ಸಂತಸ ಪಟ್ಟೇನಿ" ಎಂದು ಬಣ್ಣಿಸಿದ್ದರು.

ಅಬ್ದುಲ್ಲಸಾಬರು ಯಾವ ಪ್ರಶಸ್ತಿ ಪುರಸ್ಕಾರಳಿಗೂ ಆಶಿಸದೇ ನಿರ್ಲಿಪ್ತ ಭಾವದಿಂದ ಕನ್ನಡ ರಂಗಭೂಮಿಗೆ ಪ್ರಾಮಾಣಿಕವಾದ ಸೇವೆ ಸಲ್ಲಿಸಿದರು. ಯಾವ ಕಂಪನಿಯೇ ಆಗಲಿ ಯಾವ ಪಾತ್ರವೇ ಆಗಲಿ ತಮ್ಮ ಪಾಲಿಗೆ ಬಂದದ್ದನ್ನು ತುಂಬಾ ಭಕ್ತಿ ಶ್ರದ್ಧೆಯಿಂದ ನಿರ್ವಹಿಸಿ ನಾಟಕದ ಯಶಸ್ಸಿಗೆ ಕಾರಣರಾದರು. ಒಮ್ಮೊಮ್ಮೆ ೨೫– ೩೦ರ ಹರೆಯದಲ್ಲಿಯೂ ವಯೋ ಸಹಜವಾದ ಪಾತ್ರಗಳು ಬೇರೆಯವರ ಪಾಲಾಗಿ ಇವರಿಗೆ ನಾಟಕ ನಡೆಸುವ ಪಾತ್ರಗಳು ದೊರೆತವು. ಏಕೆಂದರೆ ಬೇರೆ ನಟರಿಗೆ ಆಯಾ ಪಾತ್ರಗಳು ಒಪ್ಪುತ್ತಿದ್ದರು. ಹಿರೋ ಪಾತ್ರಗಳೆ ಬೇಕೆಂಬ ಹಠ, ಅವು ಸಿಗದಿದ್ದರೆ ಕಂಪನಿ ಬಿಟ್ಟು ಹೋಗುವ ಚಟ.

ಕೊನೆಗೆ ಕಂಪನಿ ಮಾಲೀಕರು "ಅಬ್ದುಲಸಾಬಾ ನೀನ ಆ ಪಾತ್ರಾ ಮಾಡಿ ನನ್ನ ಕಂಪನಿ ಮುಂದವರೆಸಪ್ಪಾ. ನೀನು ಮಾಡಬೇಕಾದ ಪಾತ್ರಗಳನ್ನೇ ಇವರು ತಾವೇ ಮಾಡುವುದಾಗಿ ಹಠ ಹಿಡಿಯುತ್ತಾರೆ. ಇಲ್ಲವಾದರೆ ಕಂಪನಿ ಮುರಿದು ಹೋಗುವದಕ್ಕೂ ಸಿದ್ಧರಾಗುತ್ತಾರೆ. ಏಕೆಂದರೆ ಎಲ್ಲ ಪಾತ್ರಗಳಿಗೂ ಸಲ್ಲುವ ಸಾಮರ್ಥ್ಯ ನಿನ್ನಲ್ಲಿದೆ, ದಯವಿಟ್ಟು

ನೀನೇ ಆ ಪಾತ್ರ ಮಾಡಿ ಸಂಘವನ್ನು ಬದುಕಿಸು" ಎಂದು ವಿನಂತಿಸಿಕೊಳ್ಳುತ್ತಿದ್ದರಂತೆ. ಅವರಂತೆ ತಾನೂ ಹಠಹಿಡಿದರೆ ಕಂಪನಿ ಮುರಿಯುವುದೆಂದರಿತ ಅಬ್ದುಲ್ಲಸಾಬರು ಒಂದೊಂದು ಸಲ ಎಲ್ಲರೂ ಮಾಡಿ ಬಿಟ್ಟ ಪಾತ್ರಗಳನ್ನೇ ಮಾಡಿ ಪ್ರೇಕ್ಷರಿಂದ ಸೈ ಎನಿಸಿಕೊಳ್ಳುತ್ತಾರೆ. ಮಾತ್ರವಲ್ಲ ಸಂಘಕ್ಕೂ ಸಂಜೀವಿನಿಯಾಗುತ್ತಾರೆ. ಓರ್ವ ಸಮರ್ಥ ಕಲಾವಿದನಿಂದ ನಮ್ಮ ರಂಗಭೂಮಿ ಅಪೇಕ್ಷಿಸುವುದು ಇದನ್ನೇ.

ಇಷ್ಟೆಲ್ಲ ಸಾಧನೆಗೈದ ಅಬ್ದುಸಾಬರಿಗೆ ದೌರ್ಬಲ್ಯಗಳೇ ಇರಲಿಲ್ಲವೆಂದಲ್ಲ, ಇದ್ದವು. ಆದರೆ ಅವುಗಳ ದಾಸ್ಯಕ್ಕೆ ಇವರು ಒಳಗಾಗಿರಲಿಲ್ಲ. ಹಿರಿಯ ಕಲಾವಿದರ ಸಾಂಗತ್ಯದಲ್ಲಿ ಇವರೂ ಒಮ್ಮೊಮ್ಮೆ ಮದಿರಾ ಸೇವನೆಗೆ ಮಾರು ಹೋಗುತ್ತಿದ್ದರು. ಆದರೆ ಎಂದೂ ಅತಿಯಾಗಿ ಸೇವಿಸಿ ಪಾತ್ರಕ್ಕೆ, ಸಂಸ್ಥೆಗೆ ಹಾಗೂ ತಮ್ಮ ಕುಟುಂಬಕ್ಕೆ ತೊಂದರೆ ಮಾಡಿದವರಲ್ಲಾ. ಕಂಪನಿಯಲ್ಲಿ ಸಂಬಳ ನಿಂತರೆ ಸಂಘದ ಮಾಲೀಕರೊಂದಿಗೆ ಜಗಳ ಕಾಯ್ದವರಲ್ಲ. ನಾಟಕದ ಹಾಗೂ ಪಾತ್ರದ ವಿಷಯದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ಬಂದಿದ್ದರೂ ರಾತ್ರೋರಾತ್ರಿ ಹೇಳದೇ ಕೇಳದೇ ಕಂಪನಿ ಬಿಟ್ಟು ಓಡಿಹೋಗಿ ಸಂಸ್ಥೆಗೆ ತೊಂದರೆ ಕೊಟ್ಟವರಲ್ಲ.

ಅಂತೆಯೇ ಇವರನ್ನು ಅಂದಿನಿಂದ ಇಂದಿನವರೆಗೂ ಎಲ್ಲ ಹಿರಿಕಿರಿಯ ಕಲಾವಿದರು ತುಂಬಾ ಪ್ರೀತಿಯ ಗೌರವ ನೀಡುತ್ತಾ ಬಂದಿದ್ದಾರೆ. ಸಂಘದ ಮಾಲೀಕರು ಅತ್ಯಂತ ವಿಶ್ವಾಸದಿಂದ ಕಂಡಿದ್ದಾರೆ ಗುಬ್ಬಿ ವೀರಣ್ಣನವರು ಕಾಲವಾದ ನಂತರ ೧೯೮೦-೮೧ ರ ಸುಮಾರಿಗೆ ಗುಬ್ಬಿ ಕಂಪನಿಗೆ ಅತಿಥಿ ಕಲಾವಿದರಾಗಿ "ಲವಕುಶ" ನಾಟಕದಲ್ಲಿ ಶ್ರೀರಾಮಚಂದ್ರನ ಪಾತ್ರಕ್ಕೆ ಹೋಗುತ್ತಿದ್ದಾಗ ಸಂಘದ ಒಡೆಯರಾದ ಗುಬ್ಬಿ ವೀರಣ್ಣನವರ ಮಗ ಚನ್ನಬಸಪ್ಪನವರು ತಮ್ಮ ಪಕ್ಕದಲ್ಲಿಯೇ ಖುರ್ಚಿ ಹಾಕಿಸಿ ಇವರನ್ನು ಕುಳ್ಳಿರಿಸಿಕೊಳ್ಳುತ್ತಿದ್ದರಂತೆ. ಈ ಅವಕಾಶ ಆಗ ಇದ್ದ ಬೇರೆ ಕಲಾವಿದರಿಗೆ ಇರಲಿಲ್ಲ. ಅವರೆಲ್ಲ ಮಾಲೀಕರ ಮುಂದೆ ಕೈ ಕಟ್ಟಿಕೊಂಡು ನಿಂತೇ ಮಾತಾಡುತ್ತಿದ್ದರಂತೆ.

ಬೆಂಗಳೂರಿನಲ್ಲಿ ಅಬ್ದುಲ್ಲಸಾಬರು, ಕನ್ನಡ ಹೋರಾಟಗಾರರಾದ ಹಿರಿಯ ರಾಜಕಾರಣಿ ವಾಟಾಳ್ ನಾಗರಾಜ, ಚಿತ್ರನಟ ಶಕ್ತಿಪ್ರಸಾದ ಮೂವರೂ ಒಂದೇ ಕೋಣೆಯಲ್ಲಿ ಇರುತ್ತಿದ್ದರಂತೆ. ಹಿಂದಿ ಚಿತ್ರ ರಂಗದ ಖ್ಯಾತನಾಮರಾದ ಸಜ್ಜನ, ನಿರ್ಮಾಪಕ ಶಾಂತಿಲಾಲ ಮೇಹತಾ, ಫಾರುಖ್ ಶೇಖ್, ರೈಟರ ರಾಮಕುಮಾರ ಶರ್ಮಾ, ಹಿರಿಯ ನಟ ಪ್ರಾಣ ಮುಂತಾದವರ ಸ್ನೇಹ ಸಂಪಾದಿಸಿದ್ದೊಂದು ಅಬ್ದುಲ್ಲಸಾಬರ ಹೆಗ್ಗಳಿಕೆಯಾಗಿದೆ.

ವಸಂತಕುಮಾರ ಗೋಣಿ ನಿರ್ದೇಶನದ "ಈಶ್ವರ ಅಲ್ಲಾ ತೇರೆ ನಾಮ" ಹಿಂದಿ ಚಿತ್ರದಲ್ಲಿ ಇವರ ಗೋವಿಂದ ಭಟ್ಟರ ಪಾತ್ರವನ್ನು ಮೆಚ್ಚಿದ್ದ ಅಂದಿನ ಕೇಂದ್ರ ಸಚಿವ ನಾರಾಯಣ ತಿವಾರಿಯವರು ಆ ಚಿತ್ರವನ್ನು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ತೋರಿಸುತ್ತಾರೆ. ಹಿಂದು ಮುಸ್ಲಿಂ ಭಾವೈಕ್ಯತೆಯ ಸಂದೇಶವನ್ನೊಳಗೊಂಡ ಆ ಚಿತ್ರಕ್ಕೆ ಕೇಂದ್ರ ಸರಕಾರದ ಸೌಹಾರ್ದತಾ ಪ್ರಶಸ್ತಿ ಕೊಡಿಸಬೇಕೆಂದು ತುಂಬಾ ಪ್ರಯತ್ನಿಸುತ್ತಾರೆ. ಆದರೆ ಶ್ರೀಮತಿ ಗಾಂಧಿ ಅದನ್ನು

ವೀಕ್ಷಿಸಿ ಅದರಲ್ಲಿ ಗುಡಗೇರಿ ಗ್ರಾಮದೇವತೆ ದ್ಯಾಮವ್ವ ಶರೀಫ್ ಸಾಹೇಬರಿಗೆ ತನ್ನ ಮೂಗುತಿ ನೀಡುವ ದೃಶ್ಯ ಕುರುಡು ನಂಬಿಕೆಯನ್ನು ಬಿಂಬಿಸುತ್ತದೆ ಎಂಬ ಕಾರಣಕ್ಕೆ ಚಿತ್ರ ಆ ಪ್ರಶಸ್ತಿಯಿಂದ ವಂಚಿತವಾಗುತ್ತದೆ.

ತಿವಾರಿಯವರು ಇವರನ್ನು ಹಿಂದಿ ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲೆಯೂರಿಸಬೇಕೆಂದು ತುಂಬಾ ಪ್ರಯತ್ನಿಸುತ್ತಾರೆ. ಅದಕ್ಕೆ ಕಾರಣ ಶರೀಫ್‌ರ ಚಿತ್ರದಲ್ಲಿ ಇವರ ಭಾವಪೂರ್ಣ ಅಭಿನಯ ಎನ್.ಡಿ. ತಿವಾರಿಯವರನ್ನು ಸಮ್ಮೋಹಿತರನ್ನಾಗಿ ಮಾಡಿರುತ್ತದೆ. ಅಬ್ದುಲ್ಲಸಾಬರನ್ನು ತಿವಾರಿಯರು ಮುಂಬೈನ ಜವಾಹರಲಾಲ್ ನೆಹರು ನ್ಯಾಶನಲ್ ಯೂಥ್ ಸೆಂಟರನಿಂದ ಹೊಸ ಚಿತ್ರಕ್ಕೆ ಆಯ್ಕೆ ಮಾಡಿಕೊಂಡು ಲಖನೌಗೆ ಕರೆದೊಯ್ಯುತ್ತಾರೆ. ಕರ್ನಾಟಕದಿಂದ ಬಂದ ಹೊಸ ಕಲಾವಿದರೆಂಬ ಗೌರವ ನೀಡಿದ ಆ ಸಂಸ್ಥೆಯ ನಿರ್ದೇಶಕರು ಸ್ವತಹ ಲಖನೌ ರೈಲು ನಿಲ್ದಾಣಕ್ಕೆ ಬಂದು ಇವರಿಗೆ ಮಾಲಾರ್ಪಣೆ ಮಾಡಿ ಸ್ವಾಗತಿಸಿ ಕರೆದೊಯ್ದು ಉಪಚರಿಸುತ್ತಾರೆ.

ಇನ್ನೇನು ಹೊಸ ಹಿಂದಿ ಚಿತ್ರಕ್ಕೆ ಪ್ರಧಾನ ಭೂಮಿಕೆಗೆ ಆಯ್ಕೆಯಾದ ಅಬ್ದುಲ್ಲಸಾಬರ ಭಾಗ್ಯದ ಬಾಗಿಲು ತೆರೆಯಿತೆನ್ನುವಷ್ಟರಲ್ಲಿಯೇ ಮುಂಬೈಯಲ್ಲಿ ಹಿಂದೂ ಮುಸ್ಲಿಂ ಕೋಮು ಗಲಭೆ ಎದ್ದು ನೂರಾರು ಜನರನ್ನು ಬಲಿ ತೆಗೆದುಕೊಂಡು ರಾಷ್ಟ್ರಾದ್ಯಂತ ಬಿಸಿ ವಾತವಾರಣ ನಿರ್ಮಿಸಿಬಿಡುತ್ತದೆ. ಇಲ್ಲಿಯೂ ಅದೃಷ್ಟ ತಮಗೆ ಕೈಕೊಟ್ಟಿದ್ದರಿಂದ ಬೇಸರಗೊಂಡ ಅಬ್ದುಲ್ಲಸಾಬರು ಹುಬ್ಬಳ್ಳಿಗೆ ಬಂದು ಖಾಯಂ ಉಳಿದು ಬಿಡುತ್ತಾರೆ. ಭಾರತದ ಸಾಂಸ್ಕೃತಿಕ ಲೋಕ ಮತ್ತೊಬ್ಬ ಹಿರಿಯ ಮಗನ ಸೇವೆಯಿಂದ ವಂಚಿತವಾಗುತ್ತದೆ.

# ಸಂಧ್ಯಾಕಾಲ

ಅಬ್ದುಲ್ಲಸಾಬ ಅಣ್ಣಿಗೇರಿಯವರು ಪತ್ನಿಯರಾದ ಶ್ರೀಮತಿ ಮೋಹದೀನಬಿ, ಪುಷ್ಪಮಾಲಾ, ಮಗ ಮಹಮ್ಮದ ಇಸ್ಮಾಯಿಲ್ (ಬಾಬು), ಸೊಸೆ ಶಬನಮ್, ಮೊಮ್ಮಕ್ಕಳಾದ ಗೌಸಮೊಹಿದ್ದೀನ್ (ರಬ್ಬಾನಿ), ಮನಸೂರ ಅಲಿ, ಮೊಮ್ಮಗಳು ಟೈಫೀನ್, ಮಗಳು ವಜೀರಬಿ ಹಾಗೂ ಅವಳ ೫ ಜನ ಮೊಮ್ಮಕ್ಕಳೊಂದಿಗೆ ಬದುಕಿನ ಸಂಧ್ಯಾಕಾಲವನ್ನು ಅಲ್ಲಾನ ಧ್ಯಾನದೊಂದಿಗೆ ಕಳೆದರು. ಕರ್ನಾಟಕ ಸರ್ಕಾರ ಕೊಡಮಾಡುವ ಮಾಸಿಕ ರೂ.೧,೦೦೦/- ರೂಪಾಯಿ ವೇತನ ಹಾಗೂ ಪತ್ನಿ ಪುಷ್ಪಮಾಲಾರು ಗ್ರಾಮೀಣ ರಂಗಭೂಮಿ ಸೇವೆಯಿಂದ ಸಂಪಾದಿಸುವ ಅಲ್ಪ ಆದಾಯದಲ್ಲಿ ಹಾಗೂ ಮಗ, ಸೊಸೆಯ ಟೇಲರಿಂಗ್ ಕಾಯಕದಲ್ಲಿ ಬರುವ ಆದಾಯದಲ್ಲಿ ಮನೆತನವನ್ನು ತೂಗಿಸಿಕೊಂಡು ಹೊರಟ್ಟಿದ್ದಾರೆ.

ತಮ್ಮ ಸೋದರಿಯ ಮಗಳನ್ನೆ ತಮ್ಮ ಮಗ ಮಹಮ್ಮದ ಇಸ್ಮಾಯಿಲ್(ಬಾಬು)ಗೆ ತೆಗೆದುಕೊಂಡಿದ್ದಾರೆ. ಹತ್ತಿರದ ಒಡಹುಟ್ಟಿದ ಎಲ್ಲ ಬಂಧು ಬಳಗವೂ ಜೊತೆಯಲ್ಲಿದೆ. ಪುಷ್ಪಮಾಲಾರ ಕಡೆಯ ಸಂಬಂಧಿಗಳೂ ಈ ಕುಟುಂಬದೊಂದಿಗೆ ಪ್ರೇಮಪೂರಿತ ಬಾಂಧವ್ಯವನ್ನು ಹೊಂದಿದ್ದಾರೆ. ಬದುಕಿನ ಅವಧಿಯನ್ನೆಲ್ಲಾ ಬಾಡಿಗೆ ಮನೆಯಲ್ಲಿಯೇ ಕಳೆದ ಅಬ್ದುಲ್ಲಸಾಬರು ಅಲ್ಲಿ ಇಲ್ಲಿ ಸಾಲಸೋಲ ಮಾಡಿ ಚಿಕ್ಕದೊಂದು ಸ್ವಂತ ಮನೆ ಮಾಡಿಕೊಂಡಿಡರು. ಎರಡು ವರ್ಷಗಳಿಂದ ಕಾಲನ್ನು ಕಳೆದುಕೊಂಡು ಇತ್ತೀಚೆಗೆ ಮಾತುಗಳೂ ಮೌನವಾಗಿ ಕೇವಲ ಸಂಜ್ಞೆಗಳ ಮೂಲಕ ಬದುಕು ನೂಕಿದರು. ಪತ್ನಿ ಪುಷ್ಪಮಾಲಾ, ಮಗ, ಸೊಸೆ, ಮೊಮ್ಮಕ್ಕಳು ಗೌರವಭಾವದಿಂದ ಅಬ್ದುಲ್ಲಸಾಬರ ಸೇವೆ ಮಾಡಿದರು. ಇವರ ಮೇಲೆ ಇವರ ಸೋದರ ಮಹಮ್ಮದಲಿ ಢಾಲಾಯತ್‌ರ ಗಮನ ಸದಾ ಈ ಕುಟುಂಬದ ಮೇಲಿದೆ.

# ಅನುಬಂಧ

**ಶ್ರೀ ಅಬ್ದುಲ್ಲಸಾಬ ಅಣ್ಣಿಗೇರಿಯವರು ಸೇವೆ ಸಲ್ಲಿಸಿದ ನಾಟಕ ಕಂಪನಿಗಳು**

೧) ಸಮಾಜ ವಿಕಾಶ ನಾಟ್ಯಸಂಘ ದೊಡ್ಡವಾಡ ೧೯೫೪
ಮಾಲಕರು: ಶ್ರೀ ಸಿದ್ಧರಾಜ ಉಜ್ಜೈನಿಮಠ (ದೊಡ್ಡವಾಡ ಸಿದ್ಧಯ್ಯನವರು).

೨) ಶ್ರೀ ಅಮರೇಶ್ವರ ನಾಟ್ಯಸಂಘ ಸಿಂದನೂರ ೧೯೬೦ ಮಾಲಕರು ಮೃಡದೇವ ಗವಾಯಿಗಳು.

೩) ಶ್ರೀ ಶಾಂತೇಶ್ವರ ನಾಟ್ಯಸಂಘ ದೊಡ್ಡವಾಡ ೧೯೬೧-ರಿಂದ ೧೯೬೬ ಪಾಲುಗಾರಿಕೆಯಲ್ಲಿ.

೪) ಶ್ರೀ ಅಪ್ಪುರಾಜ ಬೈಲಹೊಂಗಲ (ಪೇಂಟರ್) ಕಂಪನಿ ೧೯೬೭.

೫) ಬಿಜಾಪೂರ ವಿ.ಎಸ್. ಪಾಟೀಲರ ಕಂಪನಿ ೧೯೬೭.

೬) ಶ್ರೀ ನರೇಗಲ್ಲ ಚನ್ನಬಸಯ್ಯನವರ ಕಂಪನಿ ೧೯೬೯.

೭) ಶ್ರೀ ಹದ್ಲಿ ಶಿವಣ್ಣ ಮೈಸೂರ ಥೇರೆಸಮ್ಮನವರ ಬೆಳವಣಿಕೆ ಕಂಪನಿ ೧೯೭೧.

೮) ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯಸಂಘ ಸುಳ್ಳ ೧೯೭೨. (ಮಾ. ಶ್ರೀಮಂತ ಮಲ್ಲನಗೌಡರು ದೇಸಾಯಿ).

೯) ಮೈಸೂರ ಶ್ರೀಕಂಠ ಮೂರ್ತಿಗಳ ಕಂಪನಿ.

೧೦) ಚಿತ್ರರಂಗ ಪ್ರವೇಶ ೧೯೭೨-೭೪.

೧೧) ಶ್ರೀ ಗುಬ್ಬಿ ಚನ್ನಬಸವೇಶ್ವರ ಥಿಯೇಟ್ರಿಕಲ್ ಕಂಪನಿ ತುಮಕೂರ ೧೯೬೦ ಮತ್ತು ೮೦ರ ದಶಕ.

೧೨) ಮಂಗಳೂರಿನ ರೈಯವರ ಕಂಪನಿ.

೧೩) ಶ್ರೀ ಯೋಗಾನರಸಿಂಹ ಮೂರ್ತಿಗಳ ಕಂಪನಿ.

೧೪) ಶ್ರೀ ವೀರೇಶ್ವರ ಕಂಪನಿ ಗದಗ.

೧೫) ಹುಬ್ಬಳ್ಳಿ ಹವ್ಯಾಸಿ ರಂಗಭೂಮಿ ಸಂಪರ್ಕ.

೧೬) ಹಿಂದಿ ಚಿತ್ರರಂಗದ ಸಂಪರ್ಕ.

೧೭) ಶ್ರೀ ರೇವಣಸಿದ್ಧೇಶ್ವರ ನಾಟ್ಯಸಂಘ ರಾಣೆಬೆನ್ನೂರ ೧೯೮೮ (ಮಾ. ಹಾಲೇಶಪ್ಪ ಗೌಳಿ).

೧೮) ಧ್ವನಿಸುರುಳಿ ರೇಡಿಯೋ ನಾಟಕಗಳ ಸಂಪರ್ಕ.

೧೯) ವಿಶ್ವಭಾರತಿ ರಮ್ಯನಾಟಕ ಸಂಘ ಶಿರೂರ ೨೦೦೬ರಿಂದ ೨೦೧೨ (ಮಾ. ಬಸವರಾಜ ಬೆಂಗೇರಿ).

೨೦) ವಿಶ್ರಾಂತಿ ಜೀವನ.

# ಅಭಿನಯಿಸಿದ ನಾಟಕಗಳು ಹಾಗೂ ವಹಿಸಿದ ಪಾತ್ರಗಳು

| ನಾಟಕ | ಪಾತ್ರ |
| --- | --- |
| ೧) ಹೇಮರೆಡ್ಡಿ ಮಲ್ಲಮ್ಮ | ಸ್ತ್ರೀಪಾತ್ರ, ಮಲ್ಲಿಕಾರ್ಜುನ, ವೇಮಣ್ಣ |
| ೨) ಕಲಬುರ್ಗಿ ಶರಣಬಸವೇಶ್ವರ | ಶರಣಬಸವೇಶ್ವರ |
| ೩) ಪುರಂದರದಾಸ | ದಾಸರು |
| ೪) ಸತ್ಯಹರಿಶ್ಚಂದ್ರ | ಹರಿಶ್ಚಂದ್ರ |
| ೫) ರಕ್ತರಾತ್ರಿ | ದುರ್ಯೋಧನ, ಕೃಷ್ಣ |
| ೬) ರೇಣುಕಾ ಯಲ್ಲಮ್ಮ | ಜಮದಗ್ನಿ, ಪರಶುರಾಮ |
| ೭) ಬೆಳಕು ತಂದ ಬಾಲೆ | ವೃದ್ಧ |
| ೮) ತಾಯಿ ಕರುಳು | ಮಹಾಂತೇಶ |
| ೯) ವರ ನೋಡಿ ಹೆಣ್ಣು ಕೊಡು | ಕನಕಮೂರ್ತಿ ವಕೀಲ |
| ೧೦) ಸಾಹುಕಾರ | ನಾಯಕ |
| ೧೧) ಟಿಪ್ಪು ಸುಲ್ತಾನ | ಟಿಪ್ಪು, ಮೀರಸಾಧಕ |
| ೧೨) ಕಿತ್ತೂರ ಚನ್ನಮ್ಮ | ಗುರುಸಿದ್ಧ ನಾಯಕ |
| ೧೩) ಮಲಮಗಳು | ಸಾಹುಕಾರ ರಂಗಣ್ಣ |
| ೧೪) ಸ್ತ್ರೀರತ್ನ, ಪುತ್ಥಳಿ | ನಾಯಕ |
| ೧೫) ಅಕ್ಷಯಾಂಬರ | ಕೃಷ್ಣ |
| ೧೬) ಬಡತನದ ಭೂತ | ನಾಯಕ |
| ೧೭) ಮಾತಂಗ ಕನ್ಯೆ | ನಾಯಕ |
| ೧೮) ದಾರಿದೀಪ | ನಾಯಕ |
| ೧೯) ರತ್ನಮಾಂಗಲ್ಯ | ಹಾಸ್ಯ |
| ೨೦) ಸೋತು ಗೆದ್ದ ಸಾಧ್ವಿ | ಚನ್ನವೀರ |
| ೨೧) ದಸರಾ | ನಾಯಕ |
| ೨೨) ಸೂರ್ಯಾಸ್ತದಿಂದ ಸೂರ್ಯೋದಯದವರಗೆ | ರಾಜಾ |
| ೨೩) ಶ್ರೀ ಜಗಜ್ಯೋತಿ ಬಸವೇಶ್ವರ | ಈಶಾನ್ಯಮುನಿ, ಅಲ್ಲಮಪ್ರಭು |
| ೨೪) ಶಿರಹಟ್ಟಿ ಫಕೀರೇಶ್ವರ ಮಹಾತ್ಮೆ | ಖಾಜಾ ಅಮೀನುದ್ದೀನ್ |
| ೨೫) ಛತ್ರಪತಿ ಶಿವಾಜಿ | ಸಿದ್ಧಿ ಜೋಹಾರಖಾನ |

## ಶ್ರೀ ಅಬ್ದುಲ್ಲಸಾಬ ಅಣ್ಣಿಗೇರಿ ಅಭಿನಯಿಸಿದ ಚಲನಚಿತ್ರಗಳು

**ಕನ್ನಡ**

೧) ಬದುಕು ಬಂಗಾರವಾಯ್ತು
೨) ರೇಣುಕಾ ಯಲ್ಲಮ್ಮ
೩) ಮಮತೆಯ ಮಡಿಲು
೪) ಪ್ರತಿಮಾ
೫) ಆತ್ಮಶಕ್ತಿ
೬) ಪ್ರೇಮಜ್ವಾಲೆ
೭) ಕಪ್ಪುಕೊಳ
೮) ಅಲ್ಲಾ ನೀನೆ, ನೀನೆ ಈಶ್ವರ
೯) ಗಾನಯೋಗಿ ಪಂಚಾಕ್ಷರ ಗವಾಯಿ
೧೦) ಗುಲಾಬಿ ಟಾಕೀಜ

**ಹಿಂದಿ**

೧) ಈಶ್ವರ ಅಲ್ಲಾ ತೇರೆನಾಮ
೨) ಚಂಗ
೩) ದಸ್ತಾನೆ ಮಜನೂ
೪) ಮೈಚುಪ್ ನಹೀ ರಹೂಂಗಿ

## ಪ್ರಶಸ್ತಿ, ಸನ್ಮಾನಗಳು

೧) ಮುಂಬೈ ಜವಾಹರಲಾಲ್ ನೆಹರು ನ್ಯಾಶನಲ್ ಯುಥ್ ಸೆಂಟರ್‌ನಿಂದ ಕೇಂದ್ರ ಸಚಿವ ಎನ್.ಡಿ. ತಿವಾರಿಯವರಿಂದ ಸನ್ಮಾನ –೧೯೮೧.

೨) ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಡಾ॥ ಯು.ಆರ್. ಅನಂತಮೂರ್ತಿಯವರಿಂದ ೧೯೯೪.

೩) ಡಾ॥ ರಾಜಕುಮಾರ, ಎಚ್.ಡಿ. ದೇವೆಗೌಡ, ಬಿ. ಸರೋಜಾದೇವಿ, ಜಿ.ವಿ. ಅಯ್ಯರರಿಂದ ಸನ್ಮಾನ ೧೯೯೬.

೪) ಗದಗ ತೋಂಟದ ಡಾ ॥ ಸಿದ್ಧಲಿಂಗ ಮಹಾಸ್ವಾಮಿಗಳಿಂದ ಸನ್ಮಾನ ೨೦೦೬.

೫) ಬೀದರ ಜಿಲ್ಲಾ ಭಾಲ್ಕಿ ಹಿರೇಮಠ ಸಂಸ್ಥಾನದ ಡಾ ॥ ಬಸವಲಿಂಗ ಪಟ್ಟಾಧ್ಯಕ್ಷರಿಂದ ಸನ್ಮಾನ ೨೦೦೭.

೬) ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ರಾಜ್ಯೋತ್ಸವದ ಸನ್ಮಾನ ೨೦೦೯.

೭) ಸಾಣೆಹಳ್ಳಿ ಡಾ ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಂದ ಸನ್ಮಾನ ೨೦೧೧.

೮) ಗದಗನಲ್ಲಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳರವರಿಂದ ಸನ್ಮಾನ

೯) ಧಾರವಾಡದಲ್ಲಿ ಡಾ|| ಎಂ.ಎಂ. ಕಲಬುರ್ಗಿ ಹಾಗೂ ಪೂಜ್ಯ ಶ್ರೀ ನಿಜಗುಣಾನಂದ ಮಹಾಸ್ವಾಮಿಗಳಿಂದ ಸನ್ಮಾನ

೧೦) ಬೆಂಗಳೂರು ಡಾ|| ದಯಾನಂದ ಸಾಗರ ಪ್ರಶಸ್ತಿ ಬೆಳ್ಳಿಕಡಗದೊಂದಿಗೆ ೨೦೧೧.

೧೧) ವಿಶ್ವಭಾರತಿ ರಮ್ಯನಾಟಕ ಸಂಘ ಶಿರೂರ. "ಬಸವ ರಂಗಕಲಾ ಭೂಷಣ" ಪ್ರಶಸ್ತಿ, ೫೦೦೦/- ರೂ ನಗದಿನೊಂದಿಗೆ ೨೦೧೩.

## ಪತ್ರಿಕಾ ಲೇಖನಗಳು

೧) ಅರವಿಂದ (ಅಬ್ದುಲ್ಲಸಾಬ) ಎಲ್ಲ ಪಾತ್ರಕ್ಕೂ ಸೈ- ಜನವಾಣಿ-೧೯೭೮.

೨) ರಂಗಭೂಮಿಯ ಬಾದಷಾ - ಲೇ. ಗವೀಶ ಹಿರೇಮಠ. ವಿಜಯ ಕರ್ನಾಟಕ-೨೦೦೩.

೩) ನಾಟಕವೇ "ಈಶ್ವರ ಅಲ್ಲಾ"ಯಲ್ಲಾ ಲೇ. ಮನೋಜ ಪಾಟೀಲ. ಸಂಯುಕ್ತ ಕರ್ನಾಟಕ- ೨೦೦೫.

೪) ಸ್ವಂತ ಸೂರಿಲ್ಲದ "ರಂಗಭೂಮಿ ಸಾರ್ವಭೌಮ" ಲೇ. ಗಣೇಶ ಅಮೀನಗಡ. ಪ್ರಜಾವಾಣಿ-೨೦೦೯.

೫) ರಂಗಭೂಮಿಯ ದುರ್ದೈವಿ. ಲೇ ಪಕ್ಕಣ್ಣ ಅರಗೋಳ. ಹ್ಯಾಟ್ಸಪ್ ಆರಕ್ಷಕ-೨೦೧೦.

೬) ಬಣ್ಣದ ಬದುಕಿಗೆ - ೭೫, ಲೇ. ಭಾಗ್ಯಶ್ರೀ ಭೂಮರೆಡ್ಡಿ. ಪ್ರಜಾವಾಣಿ-೨೦೧೨.

೭) ಬಸವ ರಂಗಕಲಾ ಭೂಷಣ ಅಬ್ದುಲ್ಲಸಾಬ - ಲೇ. ಗಣೇಶ ಅಮೀನಗಡ. ಪ್ರಜಾವಾಣಿ-೨೦೧೩.

೮) ಮುಪ್ಪಾಗಿ ಕಾಡಿತ್ತು ನೆನಪು-ಲೇ. ಪ್ರೇಮಾ ಬಾದಾಮಿ. ವಿಜಯವಾಣಿ- ೨೦೧೩.

೯) ರಾಮನಾಗಿ ರಂಗವನ್ನಾಗಿದ ಅಬ್ದುಲ್‌ಸಾಬ್- ಲೇ. ಗುಡಿಹಳ್ಳಿ ನಾಗರಾಜ್. ಪ್ರಜಾವಾಣಿ - ೨೦೧೫

೯) ರಂಗಸಂಪನ್ನರು - ಲೇ. ಬಸವರಾಜ ಬೆಂಗೇರಿ, ಶಿರೂರ. ಪ್ರಕಟಣೆ, ಕರ್ನಾಟಕ ನಾಟಕ ಅಕಾಡಮಿ-೨೦೧೪.

## ಅಬ್ದುಲ್‌ಸಾಬ ಅಣ್ಣಿಗೇರಿಯವರ ಅಜ್ಜ



ಕರ್ನಾಟಕ ಕವಿಚಂದ್ರ ನಲವಡಿ ಶ್ರೀಕಂಠಶಾಸ್ತ್ರೀ ವಿರರಚಿತ 'ಮಹಾರಾಣಿ ಕಿತ್ತೂರ ಚನ್ನಮ್ಮ' ನಾಟಕ ಪ್ರದರ್ಶನಕ್ಕೆ ಬ್ರಿಟಿಷ್ ಆಡಳಿತ ಪರವಾನಿಗೆ ನಿರಾಕರಿಸಿದಾಗ ಹೋರಾಟ ಮಾಡಿ ಪರವಾನಿಗೆ ಪಡೆದು ನಾಟಕ ಪ್ರದರ್ಶಿಸಿದ ಹೆಗ್ಗಳಿಕೆಗೆ ಪಾತ್ರರಾದ ಧೀಮಂತ ರಂಗಕರ್ಮಿ
ಹುಸೇಸಸಾಬ್ ರಾಜೇಸಾಬ್ ಅಲ್ಲಾಭಕ್ಷ, ಅಣ್ಣಿಗೇರಿ

## ಅಬ್ದುಲ್‌ಸಾಬ ಅಣ್ಣಿಗೇರಿಯವರ ತಂದೆ-ತಾಯಿ



ಮರ್ದಾನ್‌ಸಾಬ್ ಧಾಲಾಯತ್




ವಜೀರ್‌ಬಿ ಧಾಲಾಯತ್



1958ರಲ್ಲಿ ದೊಡ್ಡವಾಡ ಸಿದ್ದಯ್ಯನವರ ಕಂಪನಿಯಲ್ಲಿ 'ದಸರಾ' ನಾಟಕದಲ್ಲಿ ಅಬ್ದುಲ್ ಸಾಬರಿಗೆ ಉಣಿಸುತ್ತಿರುವ ಸ್ತ್ರೀಪಾತ್ರಧಾರಿ ದೊಡ್ಡವಾಡ ಫಕ್ರುಸಾಬ್, ನಿಂತವರು ಕಿತ್ತೂರ ನಿಂಗಪ್ಪ ಹಾಗೂ ಹೊಡೆಯಲು ನಿಂತ ಉಪ್ಪಿನ ಬೆಟಗೇರಿ ಚಂದ್ರಯ್ಯ




1965ರಲ್ಲಿ ಪಿ.ಬಿ. ಧುತ್ತರಗಿಯವರ 'ಬೆಳಕು ನೀಡಿದ ಬಾಲೆ' ನಾಟಕದಲ್ಲಿ ಶಾಂತಾ ಪತ್ತಾರರೊಂದಿಗೆ ಅಬ್ದುಲ್ ಸಾಬ್ ಅಣ್ಣಿಗೇರಿ



ಚಿತ್ರರಂಗಕ್ಕೆ ಹೋದಾಗಿನ ಅಬ್ದುಲ್ ಸಾಬ್ ಅಣ್ಣಿಗೇರಿ (ಅರವಿಂದ)



1977ರಲ್ಲಿ ಗುಬ್ಬಿ ಕಂಪನಿಯಲ್ಲಿ 'ಮನೆ ಅಳಿಯ' ನಾಟಕದಲ್ಲಿ ಮಿಲಿಟರಿ ಮೇಜರ್ ಪಾತ್ರದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿ (ನಡುವಿನವರು)



1978ರಲ್ಲಿ ಗುಬ್ಬಿ ಕಂಪನಿಯಲ್ಲಿ 'ಎಡೆಯೂರು ಸಿದ್ಧಲಿಂಗೇಶ್ವರ' ನಾಟಕದಲ್ಲಿ ಸಿದ್ಧಲಿಂಗೇಶ್ವರರ ಪಾತ್ರದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿ



1989ರಲ್ಲಿ 'ದೇಸಾಯರ ದರ್ಬಾರ್' ನಾಟಕದಲ್ಲಿ ಪತ್ನಿ ಪುಷ್ಪಮಾಲಾರೊಂದಿಗೆ
ಅಬ್ದುಲ್‌ಸಾಬ್ ಅಣ್ಣಿಗೇರಿ



ಗುಬ್ಬಿ ಕಂಪನಿಯ 'ಲವ-ಕುಶ' ನಾಟಕದಲ್ಲಿ
ಶ್ರೀರಾಮಚಂದ್ರನ ಪಾತ್ರದಲ್ಲಿ



'ಮಲಮಗಳು' ನಾಟಕದ ಸಾಹುಕಾರ
ರಂಗಣ್ಣನ ಪಾತ್ರದಲ್ಲಿ



‘ಅಲ್ಲಾ ನೀನೇ ನೀನೇ ಈಶ್ವರ’ (ಕನ್ನಡ), ‘ಈಶ್ವರ ಅಲ್ಲಾ ತೇರೇ ನಾಮ್’ (ಹಿಂದಿ)
ಚಲನಚಿತ್ರಗಳಲ್ಲಿ ಕಳಸದ ಗೋವಿಂದಭಟ್ಟ ಪಾತ್ರದಲ್ಲಿ



‘ರಕ್ತರಾತ್ರಿ’, ‘ಕುರುಕ್ಷೇತ್ರ’, ‘ಅಕ್ಷಯಾಂಬರ’, ‘ಬಾಣಸಿಗ ಭೀಮ’ ಮುಂತಾದ ನಾಟಕಗಳಲ್ಲಿ ದುರ್ಯೋಧನನ ಪಾತ್ರದಲ್ಲಿ



ಸುಳ್ಯದ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘದ ‘ಕುರುಕ್ಷೇತ್ರ’ ನಾಟಕದಲ್ಲಿ ಶ್ರೀಕೃಷ್ಣನ ಪಾತ್ರಧಾರಿ



'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ' ಹವ್ಯಾಸಿ ನಾಟಕದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿ, ಸಹನಟಿಯೊಂದಿಗೆ




'ಅಲ್ಲಾ ನೀನೇ ನೀನೇ ಈಶ್ವರ' ಚಿತ್ರದಲ್ಲಿ ಗೋವಿಂದಭಟ್ಟರ ಪಾತ್ರದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿ, ಶರೀಫರ ಪಾತ್ರದಲ್ಲಿ ಸತ್ಯಜಿತ್ (ಸಯ್ಯದ್)



ಶಿರೂರ ವಿಶ್ವಭಾರತಿ ರಮ್ಯ ನಾಟಕ ಸಂಘದ 'ಜಗಜ್ಯೋತಿ ಬಸವೇಶ್ವರ' ನಾಟಕದಲ್ಲಿ ಈಶಾನ್ಯಮುನಿ ಪಾತ್ರದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿ ಹಾಗು ಬಸವೇಶ್ವರ ಪಾತ್ರದಲ್ಲಿ ಬಸವರಾಜ ಬೆಂಗೇರಿ ಶಿರೂರ



'ಅಲ್ಲಾ ನೀನೇ ನೀನೇ ಈಶ್ವರ' ಚಿತ್ರದ ಹಾಡುಗಳ ಧ್ವನಿ ಮುದ್ರಣ ಸಂದರ್ಭದಲ್ಲಿ
ವಸಂತಕುಮಾರ್ ಗೋಣಿಯವರೊಂದಿಗೆ




ಉಭಯ ಗಾನಾಚಾರ್ಯ ಪಂಡಿತ್ ಪುಟ್ಟರಾಜ ಗವಾಯಿಗಳಿಂದ
ಅಬ್ದುಲ್ ಸಾಬ್ ಅಣ್ಣಿಗೇರಿ ಅವರಿಗೆ ಸನ್ಮಾನ



ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಇವರಿಂದ ಗೌರವ ಸನ್ಮಾನ.
ಶ್ರೀಮತಿ ಪುಷ್ಪಮಾಲಾ ಅಣ್ಣಿಗೇರಿ ಸಹಾ ಉಪಸ್ಥಿತರಿರುವರು



ಅಂದಿನ ಕೇಂದ್ರ ಸಚಿವ ಎನ್.ಡಿ. ತಿವಾರಿ ಅವರಿಂದ ಸನ್ಮಾನಿಸಲ್ಪಡುತ್ತಿರುವ
ಅಬ್ದುಲ್‌ಸಾಬ್ ಅಣ್ಣಿಗೇರಿ (ಅರವಿಂದ)



1994ರಲ್ಲಿ ಹಿರಿಯ ಸಾಹಿತಿ ಡಾ। ಯು.ಆರ್. ಅನಂತಮೂರ್ತಿ ಅವರಿಂದ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಸ್ವೀಕರಿಸುತ್ತಿರುವ ಅಬ್ದುಲ್‌ಸಾಬ್ ಅಣ್ಣಿಗೇರಿ. ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಚಿಂದೋಡಿ ಲೀಲಾ ಚಿತ್ರದಲ್ಲಿದ್ದಾರೆ.




ಗುಡಗೇರಿ ಶ್ರೀ ಸಂಗಮೇಶ್ವರ ನಾಟ್ಯಸಂಘದ 45ನೇ ವಾರ್ಷಿಕೋತ್ಸವದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿಯವರನ್ನು ಸನ್ಮಾನಿಸುತ್ತಿರುವ ಚಿತ್ರ ನಟ ದೊಡ್ಡಣ್ಣ, ಎನ್. ಬಸವರಾಜರು ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಡಾ. ದಯಾನಂದ ಸಾಗರ್ ಪ್ರತಿಷ್ಠಾನದಿಂದ ಅಬ್ದುಲ್‌ಸಾಬ್ ಅಣ್ಣಿಗೇರಿ ರಂಗದಂಪತಿಗಳಿಗೆ ಬೆಳ್ಳಿಕಡಗ ತೊಡಿಸಿ ಸನ್ಮಾನ. ಮಾಜಿ ಸಚಿವ ಡಾ. ಡಿ. ಪ್ರೇಮಚಂದ್ರ ಸಾಗರ್ ಮತ್ತು ಚಿತ್ರನಟ ದ್ವಾರಕೀಶ್ ಚಿತ್ರದಲ್ಲಿದ್ದಾರೆ.







ಶಿರೂರಿನ ವಿಶ್ವಭಾರತಿ ರಮ್ಯ ನಾಟಕ ಸಂಘದ ದಶಮಾನೋತ್ಸವದಲ್ಲಿ ಅಬ್ದುಲ್‌ಸಾಬ್ ಅಣ್ಣಿಗೇರಿಯವರಿಗೆ 'ಬಸವ ರಂಗಕಲಾ ಭೂಷಣ' ಪ್ರಶಸ್ತಿ ಪ್ರದಾನ ಮಾಡುತ್ತಿರುವ ಶಾಸಕ ಚಂದ್ರಕಾಂತ ಬೆಲ್ಲದ, ಹಿರಿಯ ಸಂಶೋಧಕರಾದ ಡಾ। ಎಂ.ಎಂ. ಕಲಬುರ್ಗಿ, ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿ, ಸಂಸದ ಪ್ರಹ್ಲಾದ ಜೋಶಿ, ಬಸವರಾಜ ಬೆಂಗೇರಿ, ಪುಷ್ಪಮಾಲಾ ಅಣ್ಣಿಗೇರಿ ಮುಂತಾದವರು.



ಗದಗದಲ್ಲಿ ಹಿರಿಯ ಕಲಾವಿದರಾದ ಫ್ಲೋರಿನಾಬಾಯಿ, ಅಬ್ದುಲ್‌ಸಾಬ್ ಅಣ್ಣಿಗೇರಿ, ಸಾರಂಗಯ್ಯಸ್ವಾಮಿ, ಎಂ.ಎಸ್. ರಾಮಚಂದ್ರಪ್ಪನವರ ಸನ್ಮಾನ. ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿ ಹಾಗೂ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳ ಉಪಸ್ಥಿತಿ.